ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 560276

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2016–17

ವಿಷಯ:

"ಡಾ॥ ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ – ಒಂದು ಅಧ್ಯಯನ"

ನೋಂದಣಿ ಸಂಖ್ಯೆ: 162001030075-2017

ಕನ್ನಡ ವಿಶ್ವವಿದ್ಯಾಲಯ ಹಂಪಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ವಿದ್ಯಾರಣ್ಯ – 560276

Kannada University Logo

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಶೋಧನಾ ನಿಬಂಧ 2016–17

ವಿಷಯ:

"ಡಾ॥ ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ – ಒಂದು ಅಧ್ಯಯನ"

ನೋಂದಣಿ ಸಂಖ್ಯೆ: 162001030075-2017

ಪರಿವಿಡಿ

ಅಧ್ಯಾಯ-1
ಅಧ್ಯಯನದ ಉದ್ದೇಶ, ವಿಧಾನ, ಸ್ವರೂಪ ಮತ್ತು ವ್ಯಾಪ್ತಿ

ಪೀಠಿಕೆ:

*1 ಶ್ರೀಮಾನ್ ಡಿ.ವಿ.ಜಿಯವರ "ಮಂಕುತಿಮ್ಮನ ಕಗ್ಗ' ತುಂಬ ಜನಪ್ರಿಯವಾದ ಗ್ರಂಥ 1943ರಲ್ಲಿ ಪ್ರಕಟವಾದ ಈ ಗ್ರಂಥವು ಸುಮಾರು 14 ಮುದ್ರಣಗಳನ್ನು ಕಂಡಿದೆ. ಕಗ್ಗವನ್ನು ಕುರಿತು ಚಿನ್ಮಯಾ ಮಿಷನ್ನಿನ ಶ್ರೀ.ಬ್ರಹ್ಮಾನಂದಸ್ವಾಮಿಗಳು, ಮತ್ತು ಪ್ರೋ.ಹೆಚ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಹಲವಾರು ವರ್ಷಗಳಿಂದ ಉಪನ್ಯಾಸಗಳನ್ನು ಕೊಡುತ್ತಾ ಬಂದಿದ್ದಾರೆ. ಅವರ ಉಪನ್ಯಾಸಗಳು ಧ್ವನಿ ಸುರುಳಿಗಳಲ್ಲೂ ಹೊರಬಂದಿವೆ.

ಆಕಾಶವಾಣಿ ದೂರದರ್ಶನಗಳಲ್ಲಿ ಬರುವ ಚಿಂತನ, ನಾಟಕ, ಉಪನ್ಯಾಸ ಮುಂತಾದ ಕಾರ್ಯಕ್ರಮಗಳಲ್ಲಿ, ಕಗ್ಗದ ಪದ್ಯಗಳು ಕೇಳಿಬರುತ್ತಲೇ ಇರುತ್ತವೆ. ಕಗ್ಗದ ಪದ್ಯಗಳನ್ನು ಅನೇಕ ಮಂದಿ ಕಂಠಪಾಠ ಮಾಡಿಕೊಂಡು ಸಮಯೋಚಿತವಾಗಿ ಉಪಯೋಗಿಸಿಕೊಳ್ಳುತ್ತಾರೆ ಇಷ್ಟಾದರೂ ಕೂಡ ಕಗ್ಗ ಸ್ವಲ್ಪ ಕಷ್ಟವಾದ ಗ್ರಂಥವೇ ಹೌದು. ಮೇಲ್ನೋಟಕ್ಕೆ ಒಂದು ಪದ್ಯಕ್ಕೂ ಇನ್ನೊಂದಕ್ಕೂ ಸಂಬಂಧವಿಲ್ಲದಿರುವಂತೆ ಕಂಡು ಬರುವುದೂ ಉಂಟು, ಇದಕ್ಕೆ ಕಾರಣ ಕವಿ ಸಂದರ್ಭಗಳಿಗೆ, ಸನ್ನಿವೇಶಗಳಿಗೆ ಪ್ರತಿಕ್ರಿಯಿಸಿ ಬೇರೆ ಬೇರೆ ಕಾಲದಲ್ಲಿ ಪದ್ಯಗಳನ್ನು ರಚಿಸಿರುವುದೇ ಆಗಿದೆ.ಆದರೆ ಒಬ್ಬರೇ ಈ ಪದ್ಯಗಳನ್ನು ರಚಿಸಿರುವುದರಿಂದ ಸಮಗ್ರವಾಗಿ ಗ್ರಂಥವನ್ನು ನೋಡಿದಾಗ ಕವಿಯ ಜೀವಿತ ಸಿದ್ಧಾಂತ ಸ್ಪಷ್ಟಪಡುತ್ತದೆ.*1

ಡಿ.ವಿ.ಜಿ.ಯವರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ :- "ನಾವು ಬದುಕುವುದು ಏತಕ್ಕೋಸ್ಕರ? ಸಾಯಲಾರದಕೋಸ್ಕರವೇ ಅಥವಾ ಬೇರೆ ಯಾವುದಾದರೂ ಉದ್ದೇಶ ಉಂಟೋ ? ಹೊಟ್ಟೆಯ ಪಾಡಿನ ಯೋಜನೆಗಳಿಗಿಂತ ಮೇಲ್ಪಟ್ಟು ವಿಚಾರವೇನಾದರೂ ಮನುಷ್ಯನ ಬಾಳಿಗೆ ಉಂಟೋ? ಉಂಟೆನ್ನುತ್ತಾರೆ ಡಿ.ವಿ.ಜಿ. ಯವರು ಆ ಉದ್ದೇಶ ಎಂಥಾದ್ದು., ಆ ಉದ್ದೇಶವನ್ನು ಯಾವ ತಳಹದಿಯ ಮೇಲೆ ನಿರ್ಣಯಿಸಬೇಕು? ಆ ಉದ್ದೇಶದ ಸಾಧನೆಗಾಗಿ ಎಂಥಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು? ಜೀವನವನ್ನು ಹೇಗೆ ನಡೆಸಿ ಅದನ್ನು ಸಾರ್ಥಕಪಡಿಸಿಕೊಳ್ಳಬೇಕು. ಈ ಮುಂತಾದ ವಿಚಾರಗಳನ್ನು ಕುರಿತು. ಡಿ.ವಿ.ಜಿ.ಯವರು ತತ್ವ ಚಿಂತನೆ ಮತ್ತು ಅನುಭವಗಳ ಅಧಾರದ ಮೇಲೆ ಒಂದು ಸಿದ್ಧಾಂತಕ್ಕೆ ಬಂದಿದ್ದಾರೆ ಆ ಸಿದ್ಧಾಂತದ ಮತ್ತು ಅದರ ನಿರೂಪಣೆಯೇ "ಮಂಕುತಿಮ್ಮನ ಕಗ್ಗ"

ವ್ಯಕ್ತಿಯ ಮತ್ತು ಸಮಾಜದ ಜೀವನೋತ್ಸಾಹ ಮತ್ತು ಜೀವನೋತ್ಕರ್ಷವೇ ಅವರ ಸಿದ್ಧಾಂತದ ಮುಖ್ಯ ಅಂಶಗಳು. ಮಾನ್ಯ ಡಿ.ವಿ.ಜಿಯವರು ತಮ್ಮ ಜೀವಮಾನದಲ್ಲಿ ಅನೇಕ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಅತ್ಯಂತ ಅಧ್ಬುತವಾದಂತಹ ಕೃತಿ 'ಮಂಕುತಿಮ್ಮನ ಕಗ್ಗ' ಅವರು ಬಹಳಷ್ಟು ಕಷ್ಟಗಳನ್ನು ಅನುಭವಿಸಿದರೂ ಕೂಡ. ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ತತ್ವಗಳಿಗೆ ಬದ್ಧರಾಗಿ ಜೀವನವನ್ನು ಇತರರಿಗೆ ಮಾದರಿಯಾಗಿ ನಡೆಸಿದಂಥವರು. ಈ ಕೃತಿಯಲ್ಲಿ ಮಾನ್ಯ ಡಿ.ವಿ.ಜಿ.ಯವರು, ಜನ ಸಾಮಾನ್ಯರಿಗೆ ಹೇಗೆ ಜೀವನವನ್ನು ನಡೆಸಬೇಕು, ಬದುಕಿನಲ್ಲಿ ಯಾವುದು ಚೆನ್ನ. ಯಾವುದು ಒಳ್ಳೆಯದು,ಎನ್ನುವುದನ್ನು ತಿಳಿಸಿಕೊಟ್ಟಿದ್ದಾರೆ. ಮುಖ್ಯವಾಗಿ, ಪ್ರತಿಯೊಂದು ಪದ್ಯವೂ ಪ್ರತಿಯೊಂದು ಪದವೂ ವೇದಾಂತ ಸಾರವನ್ನು ಮತ್ತು ಅದರ ಅನುಭವವನ್ನು ತುಂಬಿ ತುಳುಕಿಸುತ್ತದೆ.

ಅಡಿ ಟಿಪ್ಪಣಿ *1 'ಮಂಕುತಿಮ್ಮನ ಕಗ್ಗ ತಾತ್ಪರ್ಯ' ಲೇ; ಶ್ರೀಕಾಂತ್ – ಮುನ್ನುಡಿ, ನಿಟ್ಟೂರು ಶ್ರೀನಿವಾಸ ರಾವ್

*2 ಬಹಳಷ್ಟು ಕನ್ನಡದ ಜನರಿಗೆ ಈ ಕೃತಿಯ ಪರಿಚಯ ಇರುವುದಾದರೂ, ಇದನ್ನು ಪೂರ್ತಿಯಾಗಿ ಓದಿ ಅರ್ಥ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ. ಇದನ್ನು ಮಾನ್ಯ ಡಿ.ವಿ.ಜಿಯವರ ಗಮನಕ್ಕೆ ತಂದಾಗ ಅವರು ಹೇಳಿದ ಮಾತು. "ನಾನು ಇದನ್ನು ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಬರೆಯಲಿಲ್ಲ. ಓದಿ ಅರ್ಥಮಾಡಿಕೊಳ್ಳಲು ಶಕ್ತವಾಗಿರುವ ದೊಡ್ಡವರಿಗಾಗಿ ಬರೆದೆ ಈ ವಿಷಯವನ್ನು ಕೃತಿಯ ಕೊನೆಯ ಘಟ್ಟದಲ್ಲಿ ಬರುವ ಈ ಪದ್ಯದಲ್ಲಿ. ಬಹು ಚೆನ್ನಾಗಿ ಹೇಳಿದ್ದಾರೆ".

"ವ್ಯಾಕರಣ ಕಾವ್ಯ ಲಕ್ಷಣಗಳನ್ನು ಗಣಿಸದೆಯ ।
ಲೋಕ ತಾಪದಿ ಬೆಂದು ತಣಿಪನೆಳಸಿದಮ॥
ಈ ಕಂತೆಯಲ್ಲಿ ತನ್ನ ನಂಬಿಕೆಯ ಗೆಯ್ದಹನು ।
ಸ್ವೀಕರಿಕೆ ಬೇಳ್ಪವರು– ಮಂಕುತಿಮ್ಮ ।

ಇದನ್ನು ಯಾರಿಗೋಸ್ಕರ ಬರೆದೆ ಎಂದರೆ, ಇದನ್ನು ಬರೆಯುವಾಗ ನನ್ನ ಮನಸ್ಸಿನಲ್ಲಿ ಇದ್ದಿದ್ದುದು ವ್ಯಾಕರಣ, ಛಂದಸ್ಸುಗಳನ್ನು, ಬಳಸಿ ಬಂದು ಕಾವ್ಯವನ್ನು ಬರೆಯಬೇಕೆಂದಿಲ್ಲ. ಈ ಪ್ರಪಂಚದ ಉರಿಬೇಗೆಯಲ್ಲಿ ಬೆಂದು ಬಸವಳಿದು ಕಂಪನ್ನು ಬಯಸಿ ಬಂದವರು. ಈ ಕಂತೆಯಲ್ಲಿ ತನ್ನ ನಂಬಿಕೆಗಳನ್ನು ನೇಯ್ದಿರುವರು ಯಾರು ಅದನ್ನು ಬೇಡಿ ಬರುತ್ತಾರೋ ಅವರಿಗೋಸ್ಕರ ಇದನ್ನು ಬರೆದಿದ್ದೇನೆ. ಏಕೆಂದರೆ, ಯಾರಿಗೆ ಬೇಡವೂ ಅವರಿಗೆ ಇದರ ರುಚಿ ಕಾಣುವುದಿಲ್ಲ. ಈ ಪ್ರಪಂಚದಲ್ಲಿ ಯಾವಾಗಲೂ ಉಚಿತ ಸಲಹೆಗಳನ್ನು ಬೇಡದವರಿಗೆ ಕೊಟ್ಟರೆ, ಅದಕ್ಕೆ ಏನೂ ಬೆಲೆಯಿಲ್ಲ, ಎನ್ನುವುದು ಸನ್ಮಾನ್ಯ ಡಿ.ವಿ.ಜಿ. ಯವರಿಗೆ ತಿಳಿದಂಥದೇ ಅಲ್ಲವೇ ?

ಈ ಕವನಗಳನ್ನು ಓದುವಾಗ ಒಂದು ಮಾತನ್ನು ನಾವು ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಅದು ಮಾನ್ಯ ಡಿ.ವಿ.ಜಿ. ಯವರು 'ಉಮರನ ಒಸಗೆಯ' ಪೀಠಿಕಾ ಭಾಗದಲ್ಲಿ ಉಲ್ಲೇಖಿಸಿರುವ ಮಾತು. ಈ ರೀತಿಯ ಕವನಗಳನ್ನು ಕೇವಲ ಕಥೆ ಅಥವಾ ಕಾದಂಬರಿಗಳನ್ನು ಓದುವ ತರಹ ಓದಿದರೆ ಅವುಗಳ ಸಂಪೂರ್ಣ ಸ್ವಾರಸ್ಯದ ಅರಿವು ನಮಗೆ ಉಂಟಾಗುವುದಿಲ್ಲ. ಒಂದೊಂದು ಕವನವನ್ನೂ ಹಲವಾರು ಸಲ ಬಾಯಿಯಲ್ಲಿ. ಪೆಪ್ಪರಮೆಂಟ್ ಹಾಕಿಕೊಂಡು ಮೆಲುಕು ಹಾಕುವಂತೆ ಮೆಲಕು ಹಾಕುತ್ತಿದ್ದರೆ ಅವುಗಳ ಸಂಪೂರ್ಣ ಸ್ವಾರಸ್ಯದ ಅರಿವು ನಮಗುಂಟಾಗುತ್ತದೆ.*2 ಈ ರೀತಿಯ ಶ್ರೇಷ್ಠತೆಯನ್ನು ಸಾರುವ ಕೃತಿಯನ್ನು ಅಧ್ಯಯನಕ್ಕೆ ಒಳಗುಮಾಡಲಾಗಿದೆ.

ಪ್ರಸ್ತುತ ಎಂ.ಫಿಲ್, ಅಧ್ಯಯನವು ಡಿ.ವಿ.ಜಿಯವರ "ಮಂಕುತಿಮ್ಮನ ಕಗ್ಗ" ಕುರಿತದ್ದಾಗಿರುತ್ತದೆ, **'ಡಾ॥ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಒಂದು ಅಧ್ಯಯನ'** ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನ ಮಾಡಲಾಗಿದೆ ಡಿ.ವಿ.ಜಿ.ಯವರು ಬದುಕಿನ ಎಲ್ಲಾ ದೃಷ್ಟಿಕೋನಗಳಲ್ಲೂ ತಮ್ಮ ಅನುಭವಗಳನ್ನೊಳಗೊಂಡಂತೆ ಸಮಾಜಕ್ಕೆ ನೈತಿಕ ಮತ್ತು ವೈಚಾರಿಕತೆಗಳನ್ನು ತಿಳಿಯಪಡಿಸಲು ಮುಂದಾಗಿದ್ದಾರೆ, ಇವರು ತಮ್ಮ ಕಗ್ಗದಲ್ಲಿ 945 ಪದ್ಯಗಳನ್ನು ಬರೆದಿದ್ದು, ಇವುಗಳು ಒಂದೊಂದೂ ಒಂದೊಂದು ಸಂದರ್ಭದಲ್ಲಿ ಬರೆದಿದ್ದಾದರೂ ಕೂಡ ಎಲ್ಲವೂ ಎಲ್ಲಾ ಕಾಲಕ್ಕೂ ಪ್ರಸ್ತುತವೆನಿಸಿಕೊಂಡಿವೆ. ಮತ್ತು ಪ್ರತಿಯೊಬ್ಬರ ಜೀವನದಲ್ಲೂ ಒಂದಿಲ್ಲೊಂದು ಸಂದರ್ಭದಲ್ಲಿ ಬಳಕೆಯಾಗುವಂತವುಗಳಾಗಿವೆ.

ಅಡಿ ಟಿಪ್ಪಣಿ *2 'ಮಂಕುತಿಮ್ಮನ ಕಗ್ಗ ತಾತ್ಪರ್ಯ' ಲೇ; ಶ್ರೀಕಾಂತ್ – ಅರಿಕೆಯಲ್ಲಿ

ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗ ಹೊಸ ಅರಿವಿನ ದಾರಿಯನ್ನು ತಿಳಿಯಲು ಸಹಾಯಕವಾಗಿದೆ. ಈ ಕೃತಿಯು 10 ಕೃತಿಗಳಿಗೆ ಸಮನಾಗಿರುವಷ್ಟು ಮಹತ್ವವನ್ನು ಪಡೆದಿವೆ ಈ ಕೃತಿಗಳ ಮೂಲಕ ಸಮಾಜಕ್ಕೆ ಹೊಸದಾದ ಪರಿಕಲ್ಪನೆಯನ್ನು ನೀಡಿದ್ದಾರೆ. ಇವರು ಇಡೀ ಸಮಾಜಕ್ಕೆ ಒಂದು ಅರಿವಿನ ದಾರಿಯನ್ನು ತಿಳಿಸಿಕೊಟ್ಟಂತಹ ಮಹಾನ್ ದಾರ್ಶನಿಕ ಬರಹಗಾರ ಎಂದು ಹೇಳಬಹುದು, ಇವರ "ಮಂಕುತಿಮ್ಮನ ಕಗ್ಗ" ಒಂದು ಅದ್ಭುತ ಕೃತಿಯಾಗಿದ್ದರಿಂದ ಇದನ್ನು ಕುರಿತು ಎಂ.ಫಿಲ್, ಅಧ್ಯಯನ ಮಾಡಲಾಗಿದೆ

ಅಧ್ಯಯನದ ಉದ್ದೇಶ

- ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಅನುಸಂಧಾನ ಮಾಡಲಾಗಿದೆ.
- ಕಗ್ಗದಲ್ಲಿನ ಧಾರ್ಮಿಕ ಅಂಶಗಳನ್ನು ಗುರುತಿಸಲಾಗಿದೆ.
- ಕಗ್ಗದ ಪದ್ಯಗಳಲ್ಲಿ ಮಾನವೀಯತೆಯ ಅಂಶಗಳು ಬಿಂಬಿತವಾಗಿರುವುದು ಕುರಿತು ಅಧ್ಯಯನ ಮಾಡಲಾಗಿದೆ.
- ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕುರಿತಂತೆ ಕಗ್ಗದಲ್ಲಿ. ಹೇಳಿರುವಂತಹ ಅಂಶಗಳನ್ನು ಪರಿಶೀಲಿಸಲಾಗಿದೆ.
- ಮಾನವನ ವ್ಯಕ್ತಿತ್ವ ನಿರ್ಮಾಣದಲ್ಲಿ ಮಂಕುತಿಮ್ಮನ ಕಗ್ಗದ ಮಹತ್ವವನ್ನು ಕುರಿತು ಅಧ್ಯಯನ ಮಾಡಲಾಗಿದೆ.
- ಮಂಕುತಿಮ್ಮನ ಕಗ್ಗದಲ್ಲಿನ ಪ್ರಕೃತಿ–ಮನುಷ್ಯನ ಸಂಬಂಧ ವ್ಯಕ್ತವಾಗಿರುವಿಕೆಯನ್ನು ಗುರುತಿಸಲಾಗಿದೆ.
- ಮಂಕುತಿಮ್ಮನ ಕಗ್ಗದಲ್ಲಿನ ಭಾಷಿಕ ಅಂಶಗಳನ್ನು ಅಧ್ಯಯನಕ್ಕೆ ಒಳಗು ಮಾಡಲಾಗಿದೆ.
- ಕಗ್ಗದಲ್ಲಿನ ತಾತ್ವಿಕತೆಯನ್ನು ಗುರುತಿಸಲಾಗಿದೆ.
- ಸಮಾಜದ ಮೇಲೆ 'ಮಂಕುತಿಮ್ಮನ ಕಗ್ಗ'ದ ಪ್ರಭಾವ ಆಗಿರುವುದನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ.

ಅಧ್ಯಯನ ವಿಧಾನ

ಡಿ.ವಿ.ಜಿ.ಯವರಿಂದ ರಚಿತವಾಗಿರುವ "ಮಂಕುತಿಮ್ಮನ ಕಗ್ಗ" ದ ಎಲ್ಲ ಪದ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಕಗ್ಗದ ಜನಪ್ರಿಯತೆಗೆ ಕಾರಣಗಳನ್ನು ಗುರುತಿಸುವುದರ ಮೂಲಕ ಜನಸಾಮಾನ್ಯರನ್ನು ತಲುಪಿದ ರೀತಿಯನ್ನು ಅಧ್ಯಯನ ಮಾಡಲಾಗಿದೆ. ಸಮಾಜದಲ್ಲಿ ಕಗ್ಗವು ಮೂಡಿಸಿರುವ ಮೌಲ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅನೇಕ ಸಂದರ್ಭಗಳಲ್ಲಿ ಮೂಲ ಪಠ್ಯವನ್ನು ಬಿಟ್ಟು, ಅವುಗಳ ತಾತ್ಪರ್ಯಗಳು ಆಸಕ್ತರ ಮೇಲೆ ಹೆಚ್ಚು ಪರಿಣಾಮ ಬೀರಿದ್ದು, ಅವುಗಳನ್ನು ಕುರಿತು ಪರಿಶೀಲನೆ ಮಾಡಲಾಗಿದೆ. ಓದುಗರನ್ನು ಆಕರ್ಷಿಸುವ ವಿಶಿಷ್ಟ ಅಯಸ್ಕಾಂತ ಗುಣ ಹೊಂದಿರುವ ಕಾರಣಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪ್ರತಿಯೊಂದು ಪದ್ಯವೂ ಪ್ರತ್ಯೇಕ ಮುಕ್ತಕಗಳೇ ಆಗಿದ್ದರೂ ಸಹ, ಅನೇಕ ಮುಕ್ತಕಗಳು ಕೆಲವೊಮ್ಮೆ ಸಾಮ್ಯತೆಯನ್ನು, ಕೆಲವು ವಿಭಿನ್ನ ಪ್ರತಿಮೆಗಳ ಮೂಲಕ ಜನರ ಮನಸ್ಸಿನ ಮೇಲೆ ಪರಿಣಾಮ ಬೀರಲು ಪ್ರಯತ್ನಿಸಿರುವ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಕಗ್ಗವನ್ನು ಗ್ರಹಿಸುವ ದೃಷ್ಟಿಯಲ್ಲಿ ವೈವಿಧ್ಯತೆಯಿದ್ದು, ಪ್ರಸ್ತುತ ಅಧ್ಯಯನದಲ್ಲಿ ಅದನ್ನು ಗಮನಿಸಲಾಗುತ್ತದೆ.

"ಮಂಕುತಿಮ್ಮನ ಕಗ್ಗ"ವು ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಕಾಣುವ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಪೌರಾಣಿಕ, ಮಾನವೀಯ, ತಾತ್ವಿಕ ಅಂಶಗಳನ್ನು ಒಳಗೊಂಡಿದ್ದು, ಈ ಎಲ್ಲಾ ಅಂಶಗಳನ್ನು ಅಧ್ಯಯನದಲ್ಲಿ ಒಳಗು ಮಾಡಲಾಗಿದೆ. ಧರ್ಮವನ್ನು ವಿವರಿಸಬೇಕಾದ ಸಂದರ್ಭದಲ್ಲಿ ಅದು ಯಾವುದೋ ಒಂದು ಧರ್ಮದ ನಿದರ್ಶನವನ್ನು ತೆಗೆದುಕೊಂಡಿದ್ದರೂ ಸಹ, ಅದು ಹೇಗೆ ಮಾನವೀಯತೆಯ ಅಂಶವನ್ನು ವ್ಯಕ್ತಪಡಿಸುತ್ತದೆ ಹಾಗೂ ಇಂದಿನ ಜೀವನ ವ್ಯವಸ್ಥೆಯ ಜೊತೆಗೆ ಹೇಗೆ ಅನುಸಂಧಾನಗೊಳ್ಳುತ್ತದೆ ಎಂಬ ಅಂಶಗಳನ್ನು ಈ ಅಧ್ಯಯನವು ಒಳಗೊಂಡಿದೆ. ಸಮಾಜ, ಸಂಸ್ಕೃತಿ ಮತ್ತು ಭಾಷೆ ಮುಂತಾದುವು ಬೇರೆ ಬೇರೆಯಾಗಿದ್ದರೂ ಮನುಜರೆಲ್ಲರೂ ಒಂದೇ ಎಂಬ ಅಂಶವನ್ನು ಕಗ್ಗವು ಬಿಂಬಿಸಿರುವ ರೀತಿಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ರಾಜಕೀಯ ಮನೋಭಾವಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದ್ದರೂ ಸಹ, ಎಲ್ಲಾ ಕಾಲಕ್ಕೂ ಮನುಷ್ಯನ ಮೂಲ ಗುಣ ಹೇಗೆ ಒಂದೇ ರೀತಿ ಇರುತ್ತದೆ ಎಂಬುದರ ದರ್ಶನ ನೀಡುವ ಮುಕ್ತಕಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಉತ್ತಮ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ "ಮಂಕುತಿಮ್ಮನ ಕಗ್ಗ"ದ ಕೊಡುಗೆ ಎಷ್ಟು ಅವಶ್ಯಕತೆ ಎಂಬುದನ್ನು ಗುರುತಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಕಗ್ಗವನ್ನು 'ಕನ್ನಡದ ಭಗವದ್ಗೀತೆ' ಎಂದು ಕರೆಯಲಾಗಿದ್ದು, ಈ ರೀತಿಯ ಶ್ರೇಷ್ಠತೆ ಪಡೆಯಲು ಕಾರಣವಾಗಿರುವ ಅಂಶಗಳನ್ನು ಗುರುತಿಸಲಾಗಿದೆ. ಕಗ್ಗವು ಮನುಷ್ಯನಲ್ಲಿ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಲು ಅತ್ಯವಶ್ಯವಾದ ಬೌದ್ಧಿಕ ಔಷಧವಾಗಿ ಕಾರ್ಯನಿರ್ವಹಿಸಿದೆ. ಧಾರ್ಮಿಕ ಗ್ರಂಥಗಳು ನಿರ್ಧಿಷ್ಟ ಧರ್ಮಗಳಿಗೆ ಮಾತ್ರ ಸೀಮಿತವಾಗಿದ್ದು, ಕಗ್ಗವು ಎಲ್ಲಾ ಧರ್ಮದ ಸಾರವನ್ನು ಒಳಗೊಂಡಿರುವ ಮಾನವೀಯತಾ ಗ್ರಂಥವಾಗಿದೆ. ಉತ್ತಮ ಮನುಷ್ಯನನ್ನು ರೂಪಿಸುವ ಮೂಲಕ ಉತ್ತಮ ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಕಗ್ಗವು ಅತಿ ಅವಶ್ಯಕವಾಗಿದೆಯೆಂಬುದನ್ನು ಇಲ್ಲಿ ವಿವರಿಸಲಾಗುತ್ತದೆ. ಡಿ.ವಿ.ಜಿ.ಯವರ ಸೃಜನಶೀಲ ಶಕ್ತಿಯನ್ನು ಕಗ್ಗದಲ್ಲಿ ಗುರುತಿಸಬಹುದಾಗಿದ್ದು, ಅಂತಹ ಮಹಾನ್ ಕಾವ್ಯ ಸೃಷ್ಟಿಯಾದ ಸಂದರ್ಭವನ್ನು ಸಾಂದರ್ಭಿಕವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಯನದ ಸ್ವರೂಪ

ಡಿ.ವಿ.ಜಿ.ಯವರ "ಮಂಕುತಿಮ್ಮನ ಕಗ್ಗ"ದ ಅಯ್ದ ಪದ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. 'ಮಂಕುತಿಮ್ಮನ ಕಗ್ಗ'ವು ಸೃಷ್ಟಿಯ ಪ್ರತಿಯೊಂದು ಅಂಶವನ್ನೂ ತನ್ನ ಮೂಲದಲ್ಲಿ ಸೇರಿಸಿಕೊಂಡಿದ್ದು ಇವುಗಳೆಲ್ಲವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಮನುಷ್ಯನ ಜೀವನವನ್ನು ಕುರಿತಂತೆ ಅನೇಕ ಪ್ರತಿಮೆಗಳನ್ನು ಕಗ್ಗದಲ್ಲಿ ಗುರುತಿಸಬಹುದಾಗಿದ್ದು, ಅವುಗಳನ್ನು ಅಧ್ಯಯನಕ್ಕೆ ಒಳಗು ಮಾಡಿಕೊಳ್ಳಲಾಗಿದೆ. ಧರ್ಮವನ್ನು ಕುರಿತು ಕಗ್ಗವು ವಿವರಿಸಿದ್ದು, ಅದರಲ್ಲಿಯೂ ಮುಖ್ಯವಾಗಿ ಮಾನವೀಯ ಧರ್ಮದ ಅವಶ್ಯಕತೆಯನ್ನು ಕಾವ್ಯವು ಹೊಂದಿದೆ. ಅಂತಹ ಮುಕ್ತಕಗಳನ್ನು ಅಧ್ಯಯನಕ್ಕೆ ಒಳಗುಮಾಡಲಾಗಿದೆ. ಕಗ್ಗದಲ್ಲಿ ಕಂಡುಬರುವ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ತಾತ್ವಿಕ, ಭಾಷಿಕ ಅಂಶಗಳನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ. ಕಗ್ಗದಲ್ಲಿ ಕಂಡುಬರುವ ಪ್ರತಿಮೆಗಳನ್ನು ಅಧ್ಯಯನವು ಒಳಗೊಂಡಿರುತ್ತದೆ. ನಿಸರ್ಗ ಮತ್ತು ಪ್ರಕೃತಿಯ ಸಂಬಂಧವನ್ನು ಬಿಂಬಿಸುವ ಅಂಶಗಳನ್ನು ಕಗ್ಗದಲ್ಲಿ ಕಾಣಬಹುದು.

ಪ್ರಸ್ತುತ ಅಧ್ಯಯನದಲ್ಲಿ ಕಗ್ಗವನ್ನು ಕುರಿತ ವಿವರಣಾತ್ಮಕ ಮಾಹಿತಿಯನ್ನು ನೀಡಲಾಗಿದೆ. ಕಗ್ಗವು ಮುಕ್ತಕಗಳನ್ನು ಒಳಗೊಂಡಿದ್ದು, ಇವುಗಳು ಬೇರೆ ಬೇರೆ ವಿಷಯಗಳನ್ನು ಬಿಂಬಿಸುತ್ತಿದ್ದರೂ ಸಹ, ಕೆಲವು ಮುಕ್ತಕಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಇಂತಹವುಗಳನ್ನು ಒಟ್ಟಾಗಿ ಅರ್ಥೈಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಗುರುತಿಸಲಾಗುವುದು. ಮನುಷ್ಯನ ಜೀವನದ ಭಾಗವಾಗಿರುವ ಸಮಾಜ, ಸಂಸ್ಕೃತಿ, ಭಾಷೆ, ಧರ್ಮ, ರಾಜಕೀಯ ಮತ್ತು ತಾತ್ವಿಕ ಅಂಶಗಳನ್ನು ಕುರಿತು ಅಧ್ಯಾಯಗಳನ್ನೊಳಗೊಂಡಿದೆ. ಇವುಗಳೆಲ್ಲವೂ ಒಂದೇ ಅಧ್ಯಾಯದಲ್ಲಿರದೆ ಬೇರೆ ಬೇರೆ ಅಧ್ಯಾಯದಲ್ಲಿ ಸೇರಿಸಲಾಗಿದೆ.

ಅಧ್ಯಾಯಗಳ ಕಿರುಮಾಹಿತಿ

- ಒಂದನೇ ಅಧ್ಯಾಯವು ಪ್ರಸ್ತುತ ಅಧ್ಯಯನ ಉದ್ದೇಶಗಳನ್ನು ಅಧ್ಯಯನ ವಿಧಾನ, ಸ್ವರೂಪ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ.
- ಎರಡನೇ ಅಧ್ಯಾಯದಲ್ಲಿ "ಮಂಕುತಿಮ್ಮನ ಕಗ್ಗ"ದ ಮಹತ್ವ ಹಾಗೂ ಅದರಿಂದ ಓದುಗರಿಗೆ ಮತ್ತು ಸಮಾಜಕ್ಕೆ ಆಗುತ್ತಿರುವ ಪ್ರಯೋಜನಗಳನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.
- ಮೂರನೇ ಅಧ್ಯಾಯದಲ್ಲಿ ಕಗ್ಗದಲ್ಲಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳನ್ನೊಳಗೊಂಡಂತೆ, ವಿವರಣಾತ್ಮಕವಾದ ವಿಮರ್ಶೆಯನ್ನು ಒಳಗೊಂಡಿದೆ.
- ನಾಲ್ಕನೇ ಅಧ್ಯಾಯವು, ಕಗ್ಗದಲ್ಲಿ ಬಿಂಬಿತವಾಗಿರುವ ರಾಜಕೀಯ ಅಂಶಗಳನ್ನು ಹಾಗೂ ವ್ಯಾವಹಾರಿಕ ಅಂಶಗಳನ್ನು ಕುರಿತು ವಿಮರ್ಶೆ ಮಾಡಲಾಗಿದೆ.
- ಐದನೇ ಅಧ್ಯಾಯದಲ್ಲಿ ಕಗ್ಗದಲ್ಲಿ ವಿವರಿಸಿರುವ ಭೂಮಿ ಮತ್ತು ಮನುಜನ ಸಂಬಂಧದ ವಿಶ್ಲೇಷಣೆ ಮಾಡಲಾಗಿದೆ.
- ಆರನೇ ಅಧ್ಯಾಯದಲ್ಲಿ ಕಗ್ಗದಲ್ಲಿ ವಿವರಿಸಿರುವ ತಾತ್ವಿಕ ಅಂಶಗಳನ್ನು ವಿಶ್ಲೇಷಣೆ ಮಾಡಲಾಗಿದೆ.
- ಏಳನೇ ಅಧ್ಯಾಯವು, ಅಧ್ಯಯನದಲ್ಲಿ ಕಂಡುಬಂದ ಫಲಿತಗಳನ್ನು, ಮಿತಿಗಳನ್ನು ಹಾಗೂ ಅಧ್ಯಯನದ ಮುಂದಿನ ಸಾಧ್ಯತೆಯನ್ನು ಕುರಿತು ವಿವರಿಸಲಾಗಿದೆ.

[illegible]

ಅಧ್ಯಯನದ ಮಿತಿಗಳು

- ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿನ ವೈಚಾರಿಕ, ವೈಜ್ಞಾನಿಕ, ಪ್ರಾಕೃತಿಕ, ಧಾರ್ಮಿಕ, ರಾಜಕೀಯ ಸಾಂಸ್ಕೃತಿಕ ಚಿಂತನೆಗಳು ಮತ್ತು ಜೀವನ ಮೌಲ್ಯಗಳನ್ನು ಸರಳೀಕರಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನು ಅಧ್ಯಯನಕ್ಕೆ ಆಯ್ಕೆಮಾಡಲಾಗಿದೆ.
- ಇಲ್ಲಿನ ಯಾವುದೇ ಅಂಶಗಳು ಅಧ್ಯಯನದ ಫಲಿತಗಳು ಈ ಅಧ್ಯಯನದ ವ್ಯಾಪ್ತಿಗೆ ಸೀಮಿತಗೊಂಡಿವೆ.
- ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನು ಅನೇಕರು ವಿಭಿನ್ನ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿದ್ದು ಪ್ರಸ್ತುತ ಅಧ್ಯಯನವು ಅವುಗಳಿಗಿಂತ ಹೊರತಾಗಿದೆ.
- ಶ್ರೀಕಾಂತ್‌ರವರು ಸಂಪಾದಿಸಿರುವ 'ಮಂಕುತಿಮ್ಮನ ಕಗ್ಗ' ತಾತ್ಪರ್ಯವನ್ನು ನನ್ನ ಅದ್ಯಯನಕ್ಕೆ ಒಳಗು ಮಾಡಿಕೊಳ್ಳಲಾಗಿದೆ.
- ರವಿ ತಿರುಮಲೈ ರವರ ಕಗ್ಗರಸಧಾರೆಯನ್ನು ಅಧ್ಯಯನಕ್ಕೆ ಒಳಗು ಮಾಡಿಕೊಳ್ಳಲಾಗಿದೆ.

[illegible]

ಅಧ್ಯಾಯ – 2

'ಮಂಕುತಿಮ್ಮನ ಕಗ್ಗ'ದ ಮಹತ್ವ ಹಾಗೂ ಪ್ರಯೋಜನ

ಡಿ.ವಿ.ಗುಂಡಪ್ಪ ಎಂದೇ ಪ್ರಖ್ಯಾತರಾಗಿದ್ದ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ನವರು ಮೂಲತಃ ತತ್ವಶಾಸ್ತ್ರ ವಿದ್ವಾಂಸರು. ಪತ್ರಕರ್ತರೂ ಆಗಿದ್ದರು. ಇವರ 'ಮಂಕುತಿಮ್ಮನ ಕಗ್ಗ' ಅತ್ಯಂತ ಜನಪ್ರಿಯ ಕಾವ್ಯ ಕೃತಿ, ಮನೆ ಮಾತಾಗಿರುವ ಇವರ ಕಗ್ಗದಿಂದ ಆಯ್ದ ಸಾಲುಗಳನ್ನು ತಮ್ಮ ಭಾಷಣಗಳಲ್ಲಿ ಉಲ್ಲೇಖಿಸದವರೆ ಅಪರೂಪ ಎನ್ನಬಹುದು.

ಡಿವಿಜಿಯವರು 'ಮಂಕುತಿಮ್ಮನ ಕಗ್ಗ'ದ ಜೊತೆಗೆ ಉಮರನ ಹೊಸಗೆ, ನಿವೇದನೆ, ಮರುಳ ಮುನಿಯನ ಕಗ್ಗ, ಅನ್ತಃಪುರಗೀತೆ, ಮುಂತಾದ ಕಾವ್ಯಗಳನ್ನು, 'ಜೀವನ ಸೌಂದರ್ಯ ಮತ್ತು ಸಾಹಿತ್ಯ' 'ಸಾಹಿತ್ಯ ಶಕ್ತಿ' 'ಸಂಸ್ಕೃತಿ' ಕೃತಿಗಳನ್ನು, 'ವಿದ್ಯಾರಣ್ಯ ವಿಜಯ' ದಂತಹ ನಾಟಕಗಳನ್ನು ಅಷ್ಟಲ್ಲದೆ ಇಂಗ್ಲೀಷ್‌ನಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಡಿ.ವಿ.ಜಿ ಯವರ ಸಾಹಿತ್ಯ ಸೇವೆಗೆ ಅನೇಕ ಪ್ರಶಸ್ತಿ, ಗೌರವಗಳು ಸಂದಿವೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ, ಮೈಸೂರು ವಿ.ವಿ ಡಾಕ್ಟರೇಟ್ ಪದವಿ, ಭಾರತ ಸರ್ಕಾರ ನೀಡುವ ಪದ್ಮಭೂಷಣ ಪ್ರಶಸ್ತಿ ಸಂದಿವೆ. ಅಷ್ಟಲ್ಲದೆ ಡಿ.ವಿ.ಜಿ.ಯವರ ಸವಿನೆನಪಿನಲ್ಲಿ ಭಾರತೀಯ ಅಂಚೆ ಸೇವೆಯು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದೆ.

ಕಗ್ಗದ ಮಹತ್ವ:

ಕಗ್ಗವನ್ನು ಕುರಿತಂತೆ ಕೆಲವರು ಒಂದು ಅದ್ಬುತ ಗ್ರಂಥವೆಂದಿದ್ದಾರೆ. ಕಾರಣ ಇದರಲ್ಲಿ ಜೀವನ ದರ್ಶನವೂ ಮತ್ತು ಸುಭಾಷಿತ, ಉತ್ತಮ ಸಾಹಿತ್ಯ, ಜೀವನದ ಮೂಲಕ ಸಮಸ್ಯೆಗಳ ಚಿಂತನೆ ಮತ್ತು ವರ್ಣನೆಯೂ ಇದ್ದು, ಎಲ್ಲಾ ಕಾಲಕ್ಕೂ ಎಲ್ಲಾ ಪೀಳಿಗೆಯ ಜನರಿಗೂ ಉಪಯುಕ್ತವಾಗುವತ್ತ ಮತ್ತು ಇಡೀ ಜನಾಂಗದ ಚಿಂತನ ಧಾರೆಯನ್ನು ಮೇಲ್ಮಟ್ಟಕ್ಕೆ ಏರಿಸಲನುಕೂಲವಾದ ಸಾತತ್ಯ ಇದರಲ್ಲಿದೆ. ವರ್ಷದಿಂದ ವರ್ಷಕ್ಕೆ ದಿನದಿಂದ ದಿನಕ್ಕೆ ಕಗ್ಗದ ಮಹತ್ವ ಜನಪ್ರಿಯತೆ ನೂರ್ಮಡಿಯಾಗುತ್ತಿದೆ. ಇದೊಂದು ರೀತಿಯಲ್ಲಿ ಸಾಹಿತ್ಯಲೋಕದ ಅಚ್ಚರಿ ಎನ್ನಬಹುದು.

ಕಗ್ಗದ ಹಲವಾರು ತಾತ್ಪರ್ಯಗಳು, ಗದ್ಯಾನುವಾದಗಳು, ಅವಲೋಕನಗಳು, ವ್ಯಾಖ್ಯಾನಗಳು, ಪರಾಮರ್ಶೆಗಳು ಬಂದಿವೆ. ಕಗ್ಗದ ಬಗ್ಗೆ ವಾಚನ, ವ್ಯಾಖ್ಯಾನ ಪ್ರವಚನ ವಿಶಾಲವಾದ ಅಗಾಧವಾದ ಶೋತೃವರ್ಗವನ್ನು ಹೊಂದಿದೆ. ದೇಶ ವಿದೇಶಗಳಲ್ಲಿ ಕಗ್ಗದ ಅಭಿಮಾನಿಗಳು ಹುಟ್ಟಿಕೊಂಡಿದ್ದಾರೆ.

ಕಗ್ಗವು ಹಲವಾರು ಭಾಷೆಗಳಿಗೆ ಅನುವಾದಗೊಂಡಿದೆ. ಅನೇಕ ಅವಲೋಕನ ಪುನರಾವಲೋಕನ ಕೃತಿಗಳು ಪ್ರಕಟಗೊಂಡಿವೆ ಹೊಸ ಕೃತಿಗಳು ಇನ್ನೂ ಬರುತ್ತಲಿವೆ. ಅದರಲ್ಲಿ ಪ್ರಮುಖವಾದವುಗಳು ಶ್ರೀಕಾಂತ್ ಅವರ 'ಮಂಕುತಿಮ್ಮನ ಕಗ್ಗ' ತಾತ್ವರ್ಯ–ರವಿತಿರುಮಲೈ ಅವರ ಕಗ್ಗರಸಧಾರೆಯ 04 ಸಂಪುಟಗಳು 'ವಿಸ್ತೃತ ವ್ಯಾಖ್ಯಾನ' ಮತ್ತು ಡಿ.ಆರ್.ವೆಂಕಟರಾಮನ್ ರವರ 'ಕಗ್ಗಕೊಂದು ಕೈಪಿಡಿ'–

*3 'ಕಗ್ಗದ ಒಂದೊಂದು ಮುಕ್ತಕದಲ್ಲಿಯೂ ಜಗದ್ವಿಶಾಲವಾದ ಭಾವನಾ ಪ್ರಂಪಚವು ಘನೀಕೃತವಾಗಿದೆ ಇಲ್ಲಿಯ ಶಬ್ಧಗಳ ವ್ಯಾಖ್ಯಾರ್ಥದ ಹತ್ತುಪಟ್ಟು ವಿಸ್ತೃತಾರ್ಥವು ಅಲ್ಲಿಯ ಮಾತುಗಳ ಹಿಂದಿನ ಧ್ವನಿಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಒಳಹೊಕ್ಕಷ್ಟು ಹೆಚ್ಚು ಹೆಚ್ಚು ಅರ್ಥ ಸೂಕ್ಷ್ಮಗಳು ಪ್ರಕಟಗೊಳ್ಳುತ್ತ ಹೋಗುತ್ತವೆ. ಭೌತಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ "ಕಗ್ಗದ ಉಕ್ತಿಗಳು ಸ್ಟಾಟಿಕ್ ರೀತಿಯವಲ್ಲ ಅವು 'ಡೈನಾಮಿಕ್' ರೀತಿಯವು ಎಂದರೆ ಸಂಚಲನಾಶೀಲವಾದವು. ಈ ವೈಶಿಷ್ಟ್ಯದಿಂದಾಗಿಯೇ ಸಹೃದಯ ಓದುಗರಿಗೆ ಈ ಪದ್ಯಗಳಿಂದ ದೊರೆಯುವ ಒಡನಾಟವು ಪ್ರವಾಹರೂಪದ ಸಾತತ್ಯ ಗುಣವುಳ್ಳದ್ದು ಆಗಿದೆ. ಮನನ ಮಾಡಿ ಧ್ಯಾನಿಸಿದಂತೆಲ್ಲ ಹೆಚ್ಚು ಹೆಚ್ಚು ಅರ್ಥ ಸೂಕ್ಷ್ಮಗಳು ಹೊಳೆಯುತ್ತಾ ಹೋಗುತ್ತವೆ. ಈ ಸತ್ವವಂತಿಕೆಯ ಕಾರಣದಿಂದ 'ಕಗ್ಗ'ವನ್ನು ಕುರಿತು ಈಗಾಗಲೇ ಹಲವಾರು ಕೃತಿಗಳು ಹೊರಬಂದಿದ್ದರೂ ನೂತನ ಅರ್ಥ ಶೋಧಗಳಿಗೆ ಸದಾ ಅವಕಾಶ ಉಳಿದೇ ಇರುತ್ತದೆ. ಕೃತಿಯ ಬಳಿಸಾರುವ ಜಿಜ್ಞಾಸುಗಳ ವ್ಯತ್ಪತ್ತಿಗೂ ಮತ್ತು ಭಂಗ್ಯಂತರಕ್ಕೂ ಅನುಗುಣವಾಗಿ ಒಂದೊಂದು ಅನುಕೃತಿಗೂ ಅದರದ್ದೇ ವೈಶಿಷ್ಟ್ಯವಿರುವುದು ಸಾಧ್ಯವಿದೆ. *3

ಮಂಕುತಿಮ್ಮನ ಕಗ್ಗದ ಪ್ರಯೋಜನ

ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ'ಗಳ ಒಂದೊಂದು ಮುಕ್ತಕವೂ ಮುಕ್ತವಾಗಿ ಒಂದು ರೀತಿಯ ಜೀವನ ತತ್ವವನ್ನು ಜೀವನದ ಸನ್ಮಾರ್ಗವನ್ನು ಬೋಧಿಸುವವುಗಳಾಗಿವೆ. ಒಂದೊಂದು ಮುಕ್ತಕಕ್ಕೂ ಒಂದೊಂದು ಪುಸ್ತಕವನ್ನು ಬರೆಯಬಹುದು. ಒಂದೊಂದು ಮುಕ್ತಕವು ಅಗಾಧವಾದ ವೈಶಾಲ್ಯವಾದ ಜ್ಞಾನವೃದ್ಧಿಸುವಂತಹವುಗಳಾಗಿವೆ.

*4. 'ಒಂದೊಂದು ಮುಕ್ತಕವೂ ಜ್ಞಾನಿಗಳ ಕೈಯಲ್ಲಿ ಸಿಕ್ಕಾಗ, ವಜ್ರಕ್ಕೆ, ತಿಕ್ಕಿದಷ್ಟು ಹೊಳಪು ಹೆಚ್ಚಾಗುವಂತೆ ಹೊಸ ಹೊಸ ಹೊಳಹುಗಳು, ಆಯಾಮಗಳ ವ್ಯಾಖ್ಯಾನ ಸಿಗುತ್ತದೆ. ಏಕೆಂದರೆ ಈ ಮುಕ್ತಕಗಳು ಪ್ರತಿಪಾದಿಸುವುದು ಸಾರ್ವಕಾಲಿಕ ತತ್ವಾಧಾರಿತ ಸತ್ಯಗಳು, ಆದರೆ ನಾನು ಜ್ಞಾನಿಯಲ್ಲ, ನಾನು ಜ್ಞಾನಪಿಪಾಸು. ಈ ಮುಕ್ತಕಗಳು ಪಿಪಾಸೆಯನ್ನು ತಣಿಸುವಲ್ಲಿ ಬಹಳ ಉಪಯುಕ್ತವಾಗಿದೆ. ಪ್ರತಿಯೊಬ್ಬರೂ ಅವರವರದೇ ರೀತಿಯಲ್ಲಿ ಅವರವರ ವಿದ್ಯೆ, ಅನುಭವ, ಕಲಿಕೆ, ಮತ್ತು ಸಂಸ್ಕಾರಗಳ ಆಧಾರದ ಮೇಲೆ ಇದಕ್ಕೆ ತಮ್ಮದೇ ಆದ ಒಂದು ಭಿನ್ನವಾದ ವ್ಯಾಖ್ಯಾನವನ್ನು ಮಾಡಬಹುದು. ಗುಂಡಪ್ಪನವರ ಈ ಮುಕ್ತಕಗಳು ಪ್ರತಿಯೊಬ್ಬರಿಗೂ ಅಂತಹ ಅವಕಾಶವನ್ನು ಕಲ್ಪಿಸಿದೆ. ಯಾರ ಪಾತ್ರೆ ದೊಡ್ಡದೊ ಅವರ ಗ್ರಹಿಕೆಯೂ ಅಷ್ಟೇ ದೊಡ್ಡದಾಗಿರುತ್ತದಲ್ಲವೇ?'*4

ಕಗ್ಗದ ಪ್ರಯೋಜನದ ಬಗ್ಗೆ ಹೇಳುತ್ತಾ ಹೋದರೆ ಅದಕ್ಕೆ ಸಮಯದ ಕಾಲದ ಪರಿಸ್ಥಿತಿಯ ಮಿತಿಯೇ ಇಲ್ಲವಾಗುತ್ತದೆ. ಕಗ್ಗದ ಮುಕ್ತಕಗಳು ಎಲ್ಲಾ ಕಾಲಧರ್ಮಕ್ಕೂ, ಎಲ್ಲಾ ಪೀಳಿಗೆಯವರಿಗೂ, ಎಲ್ಲಾ ಸಂದರ್ಭಕ್ಕೂ ಮಾನವ ಜೀವನದ ಎಲ್ಲಾ ಪರಿಸ್ಥಿತಿಗಳಿಗೂ ಅನ್ವಯವಾಗುವಂತಹ ಸರ್ವಋತು ನಿತ್ಯಹರಿದ್ವರ್ಣದಂತೆ ಸಾರ್ವಕಾಲಿಕವಾಗಿವೆ. ಮನುಷ್ಯನು ತನ್ನ ಜೀವನದ ಪ್ರತಿಯೊಂದು ಘಟ್ಟದಲ್ಲು, ಪರಿಸ್ಥಿತಿಯಲ್ಲು ಅನ್ವಯಿಸಿಕೊಳ್ಳುವಂತಹ ಮುಕ್ತವಾಗಿ ಬಳಕೆ ಮಾಡಿಕೊಂಡು ತಪ್ಪುಗಳನ್ನು ಒಪ್ಪಿಸಿಕೊಳ್ಳುವಂತಹ ಮುಕ್ತಕಗಳನ್ನು ಈ 'ಮಂಕುತಿಮ್ಮನ ಕಗ್ಗ' ಹೊಂದಿದೆ. 945 ಮುಕ್ತಕಗಳಲ್ಲಿ ಒಂದೊಂದು ಕೂಡ ವಿಭಿನ್ನವಾಗಿವೆ. ಹಾಗೆಯೇ ಜೀವನ ಕುರಿತಂತೆ ಹೇಳುವ ಕೆಲವು ಮುಕ್ತಕಗಳ ದೃಷ್ಟಾಂತವನ್ನು ಇಲ್ಲಿ ನೋಡೋಣ.

ಅಡಿ ಟಿಪ್ಪಣಿ *3 ಕಗ್ಗರಸಧಾರೆ ಸಂಪುಟ ಲೇ: ರಪಿ ತಿರುಮಲೈ, ಡಾ॥ ಎಸ್.ಆರ್. ರಾಮಸ್ವಾಮಿಯವರ ಮುನ್ನುಡಿ

ಅಡಿ ಟಿಪ್ಪಣಿ *4 ಕಗ್ಗರಸಧಾರೆ ಸಂಪುಟ 4 ಲೇ: ರಪಿ ತಿರುಮಲೈ, ಪ್ರಸ್ತಾವನೆ.

ಮುಕ್ತಕ–740

ಜೀವನವದೊಂದು ಕಲೆ; ಕಲೆಯ ಕಲಿಸುವುದೆಂತು?॥
ಸಾವಿರದ ನಿಯಮ ಯುಕ್ತಿಗಳನೊರೆದೊಡೆಯಂ॥
ಆವುದೋ ಕುಶಲತೆಯದೊಂದಿರದೆ ಜಯವಿರದು॥
ಆ ವಿವರ ನಿನ್ನೊಳಗೆ – ಮಂಕುತಿಮ್ಮ॥

*5. 'ಈ ಜಗತ್ತಿನಲ್ಲಿ ಸಮರ್ಪಕವಾಗಿ ಜೀವನವನ್ನು ನಡೆಸುವ ಕಲೆ ಉಳಿದ ಎಲ್ಲ ಕಲೆಗಳಿಗಿಂತ ಮುಖ್ಯವಾದ ಕಲೆ ಆದರೆ ಅದನ್ನು ಕಲಿಸುವುದು ಹೇಗೆ? ಸಾವಿರಾರು ನೀತಿ, ನಿಯಮಗಳನ್ನು ತಿಳಿಸಿ ಹೇಳಿಸಿಕೊಂಡರೂ ಸಹ ಯಾವುದಾದರೂ ಒಂದು ಕುಶಲತೆ ನಿನ್ನಲ್ಲಿ ಇರದಿದ್ದಲ್ಲಿ ನೀನು ಇಲ್ಲಿ ಜಯಗಳಿಸಲು ಸಾಧ್ಯವಿಲ್ಲ ಅದು ಏನು ಎನ್ನುವುದು ನಿನ್ನೊಳಗಡೆಯೇ ಇರಬೇಕು'.*5

*6 'ಬದುಕುವುದು ಒಂದು ಕಲೆ ಆದರೆ ಆ ಕಲೆಯನ್ನು ಕಲಿಸುವುದು ಹೇಗೆ? ಸಾವಿರಾರು ನಿಯಮಗಳು, ಸೂತ್ರಗಳು, ಯುಕ್ತಿಗಳನ್ನು ಪಾಠ ಹೇಳಿಕೊಟ್ಟಂತೆ ಕಲಿಸಿದರೂ, ಅಂತರಂಗದ ಕುಶಲತೆ ಇಲ್ಲದಿದ್ದರೆ ಬದುಕಿನಲ್ಲಿ ಜಯವಿರುವುದಿಲ್ಲ ಆ ಕುಶಲತೆಯ ವಿವರವನ್ನು ನೀನು ನಿನ್ನೊಳಗೆ ಕಂಡುಕೋ ಎಂದು ಬದುಕಿನ ಜಯಕ್ಕೆ ಒಂದು ಮಾರ್ಗ ತೋರಿದ್ದಾರೆ ಈ ಮುಕ್ತಕದಲ್ಲಿ'.

ಹುಟ್ಟಿದ ಎಲ್ಲರಿಗೂ ಒಂದು ಬದುಕುಂಟು ಆದರೆ ಸುಮ್ಮನೆ ಬದುಕುವುದಕ್ಕೂ ಸಾರ್ಥಕತೆಯಿಂದ ಬದುಕುವುದಕ್ಕೂ ವ್ಯತ್ಯಾಸವಿದೆ. ಸಾರ್ಥಕತೆಯಿಂದ ಬದುಕುವುದು ಒಂದು ಕಲೆ, ಅದಕ್ಕೆ ಕುಶಲತೆಬೇಕು. ಆದರೆ ಸಾರ್ಥಕತೆ ಎಂದರೆ ಏನು? ಎಂದರೆ ಸಕಲ ಪ್ರಾಣಿಗಳಿಗೂ 'ಆನಂದ'ವೇ ಬಾಳಿನ ಗುರಿ ಹಾಗಾಗಿ, ನಾವು ಅನಂದ ಪಡುವುದೋ ಅಥವಾ ಅನ್ಯರ ಅನಂದಕ್ಕೆ ಧಕ್ಕೆಯಾಗದಂತೆ ಬದುಕಿದರೆ ಅಂತಹ ಬದುಕನ್ನು ಸಾರ್ಥಕ ಬದುಕೆನ್ನಬಹುದು. ಹೇಗೆ ಜೀವಿಸಬೇಕು ಎಂದು ನಮಗೆ ನಾನಾ ವಿಧಾನಗಳನ್ನು ಭೋದಿಸುವ, ಹಾದಿಗಳನ್ನು ತೋರುವ, ವೇದ, ಉಪನಿಷತ್ತು, ಪುರಾಣ, ನೀತಿ ಕಥೆಗಳ ಸಾಹಿತ್ಯ ನಮ್ಮಲ್ಲಿ ಹೇರಳವಾಗಿ ಲಭ್ಯವಿದೆ. ಇವೆಲ್ಲಾ ನಮಗೆ ಹೊರಗಿನಿಂದ ಸಿಗುವ ಪುಸ್ತಕಗಳ ವಿಚಾರಗಳು ಮನಸ್ಸು ದೇಹ ಬುದ್ಧಿಗೆ ಸಂಬಂಧಪಟ್ಟ ವಿಚಾರಗಳು.

ಹೊರಗಿನಿಂದ ಎಷ್ಟೇ ವಿಚಾರಗಳು ಬಂದರೂ ಅದರ ಸಾರ ಅಂತರಂಗಕ್ಕೆ 'ಸತ್ವ'ವಾಗಿ ಇಳಿಯದೇ ಇದ್ದರೆ, ಎಷ್ಟು ಓದಿದರೂ, ಎಷ್ಟು ಕೇಳಿದರೂ ಎಲ್ಲವೂ ವ್ಯರ್ಥ. ವಿಚಾರವು ಹರಿದು ಬಂದು ಅದರ ಸಾರ ಸತ್ವವಾಗಿ ನಮ್ಮೊಳಗೆ ಇಳಿಯಬೇಕಾದರೆ ನಮ್ಮೊಳಗೆ ವಿಚಾರಗಳ ಮಂಥನವಾಗಬೇಕು. ಅದರಿಂದ ಹೊರಹೊಮ್ಮುವ 'ಶುದ್ಧಸತ್ವವನ್ನು' ನಮ್ಮ ಸ್ವಭಾವವನ್ನಾಗಿಸಿಕೊಳ್ಳಬೇಕು. ಅಂತಹ ಶುದ್ಧ ಸತ್ವ ನಮ್ಮ ಅಂತರಂಗದಲ್ಲಿ ಆತ್ಮದೊಡನೆ ಅನುಸಂಧಾನಗೊಂಡಾಗ ನಮಗೆ ಬದುಕಿನ ಪರಮ ಗುರಿಯಾದ ಆನಂದವನ್ನು ಸಾಧಿಸುವುದು ನಮ್ಮದಾಗಿಸಿಕೊಳ್ಳುವ ಮತ್ತು ಅನ್ಯರಿಗೆ ಹಂಚುವ ಕುಶಲತೆಯನ್ನು ಕಲಿಸಿಕೊಡುತ್ತದೆ. ಅಂತಹ ಕುಶಲತೆ ಸಂಪೂರ್ಣವಾಗಿ ನಮ್ಮ 'ಸ್ವಭಾವ'ವಾಗಿಬಿಟ್ಟರೆ. ನಾವು ಪುರುಷೋತ್ತಮರಾಗಿಬಿಡುತ್ತೇವೆ.

ಅಡಿ ಟಿಪ್ಪಣಿ *5 'ಮಂಕುತಿಮ್ಮನ ಕಗ್ಗ' ತಾತ್ಪರ್ಯ ಲೇ; ಶ್ರೀಕಾಂತ್ – ಪುಟ ಸಂಖ್ಯೆ 254. 1ನೇ ಪ್ಯಾರ

ಅಡಿ ಟಿಪ್ಪಣಿ *6. ಕಗ್ಗರಸಧಾರೆ – ಲೇ – ರಪ ತಿರುಮಲೈ – ಪುಟ ಸಂ.58. ಸಂಪುಟ–4

ಅಂತಃಸತ್ವವನ್ನು ಬೆಳೆಸಿಕೊಳ್ಳಲು ಸಾಧನೆ ಬೇಕು. ಆ ಸಾಧನೆ ಹಂತ ಹಂತವಾಗಿ ಆಗಬೇಕು. 'ತೈತ್ತೇರೀಯೋಪನಿಷತ್ತಿನ ಭೃಗುವಲ್ಲಿಯಲ್ಲಿ ಭೃಗುಮಹರ್ಷಿಯ ಮಗ ವಾರುಣಿ ಅನಂದೋ ಬ್ರಹ್ಮೇತಿವ್ಯಜಾನಾತ್' ಎಂದು ಅರಿಯುವದಕ್ಕೆ ಮುನ್ನ ತಪಸ್ಸಿನ ಮಾರ್ಗದಿಂದ, 'ಅನ್ನ, ಪ್ರಾಣ, ಮನಸ್ಸು ಮತ್ತು ವಿಜ್ಞಾನಗಳನ್ನೆಲ್ಲ ಅನುಸಂಧಾನ ಮಾಡಿ, ಕಟ್ಟ ಕಡೆಗೆ 'ಆನಂದ'ವೇ ಬ್ರಹ್ಮವೆಂದರಿತೆ ಎನ್ನುತ್ತಾನೆ. ಹಾಗಾಗಿ ಆನಂದದಿಂದ ಬದುಕುವುದು ಎಂದರೆ ಪರಬ್ರಹ್ಮನಲ್ಲಿ ನಿರತನಾಗಿರುವುದು ಎಂದರ್ಥ. 'ಅನಂದ'ದಿಂದ ಬದುಕುವುದೇ ಜೀವನದ ಕಲೆ, ಅಂತಹ ಕುಶಲತೆಯನ್ನು ನಾವು ಅಂತರಂಗದ ಮಂಥನದಿಂದ ನಮ್ಮದಾಗಿಸಿಕೊಂಡು ಬದುಕಿದರೆ ಅದೇ ಸಾರ್ಥಕ ಬದುಕು.*6 ಎಂದು ರವಿತಿರುಮಲೈಯವರು ತಮ್ಮ ಕಗ್ಗರಸಧಾರೆಯಲ್ಲಿ ವಿವರಿಸಿದ್ದಾರೆ.

ಡಿ.ವಿ.ಜಿ. ಯವರ ಕಗ್ಗದಲ್ಲಿನ ಮುಕ್ತಕಗಳನ್ನು ಓದಿ ಅರ್ಥೈಸಿಕೊಂಡವರು ಸಾರ್ಥಕವಾದ, ಸರಳಜೀವನವನ್ನು ಮತ್ತು ಮೌಲ್ಯಯುತ ಬದುಕಿನ ಒಂದು ತುತ್ತ ತುದಿಯನ್ನು ತಲುಪಿ ದೈವಾಂಶ ಸಂಭೂತರಾಗಿ ಬಿಡುವ ಒಂದು ದಾರಿಯನ್ನು ಹರವಿಡುತ್ತದೆ ಈ ಕಗ್ಗ.

ಬದುಕಿನ ಮಹತ್ವವನ್ನು ಮನುಷ್ಯನು ಬದುಕುವ ಬದುಕಿನ ರೀತಿಯನ್ನು ಸಾಮಾಜಿಕವಾಗಿ ಹೊಂದಿಕೊಳ್ಳುವ ಪರಿಯನ್ನು ಬದುಕಿನ ಜಂಜಾಟಗಳ ಮಧ್ಯೆ ಹಸನಾದ ಬದುಕನ್ನು ಮೌಲ್ಯಯುತವಾದ ಬದುಕನ್ನು ಆಶೆ, ಲೋಭನೆಗಳನ್ನು ಹೊರತಾಗಿಸಿಕೊಂಡು ಬದುಕುವುದು ಹೇಗೆ ಎಂಬುದಕ್ಕೆ ಡಿ.ವಿ.ಜಿಯವರು ಅನೇಕ ಮುಕ್ತಕಗಳನ್ನು ದೃಷ್ಟಾಂತವಾಗಿ ನೀಡಿದ್ದಾರೆ. ಅದರಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಹೆಸರಿಸುತ್ತಾ ಅವುಗಳ ವಿವರಣೆ ಸಾಂದರ್ಭಿಕವಾಗಿ ಆಗುವ ಬಳಕೆಯನ್ನು ಇಲ್ಲಿ ನೋಡಬಹುದಾಗಿದೆ.

ಮುಕ್ತಕ – 591

ಬದುಕು ಕದನದ ತೆರನೆ; ನೋಡೆ ಲೀಲೆಯ ಕದನ।
ಮೊದಲುಮುಗಿವುಗಳಿರದ ಚಿತ್ರಲೀಲೆಯದು॥
ಇದರೊಳೆಂದಿಗುಮಿರದು ಸೋಲ್ಗೆಲುವು ಕಡೆಯೆಣಿಕೆ।
ಸದರದಾಟವೆ ಮುಖ್ಯ – ಮಂಕುತಿಮ್ಮ॥

ವೈವಿಧ್ಯತೆಯಿಂದ ಕೂಡಿರುವ ಜೀವನವು ಒಂದು ರೀತಿಯ ಹೋರಾಟವೇ ಸರಿ, ಇಂತಹ ಜೀವನವು ಜಗತ್ತಿನ ಸೃಷ್ಠಿಯೆಲ್ಲವೂ ಒಂದಿಲ್ಲೊಂದು ಕಾರಣದಿಂದಾಗಿ ಒಂದಕ್ಕೊಂದು ತಳಿಕೆ ಹಾಕಿಕೊಂಡೇ ಈ ಜೀವ ಜಗತ್ತು ಅಸ್ತಿತ್ವವನ್ನು ಉಳಿಸಿಕೊಂಡಿದೆ.

ಮೊಟ್ಟಮೊದಲ ಸೃಷ್ಟಿಗೆ ಕಾರಣೀಭೂತರಾದ ಪುರುಷ ಮತ್ತು ಪ್ರಕೃತಿಯಾಗಲಿ, ಆಡಮ್ ಮತ್ತು ಈವ್‌ಗಳಿಂದಾಗಲಿ ಪ್ರಾರಂಭವಾದ ಈ ಹೋರಾಟದ ಬದುಕಿಗೆ ಆರಂಭ ಅಂತ್ಯಗಳಿಲ್ಲದೆಯೇ ಸಾಗುತ್ತಿದೆ. ಜಗತ್ತಿನ ಉಳಿವು 'ಡಾರ್ವಿನ್ನನ ನಿಯಮದಂತೆ, Survival of the fittest' ಎಂಬಂತೆ ಬುದುಕಿಗಾಗಿ ಯಾರು ಹೋರಾಡಿ ಗಟ್ಟಿಯಾಗಿ ನಿಲ್ಲುತ್ತಾರೋ ಅವರೇ ಈ ಜೀವ ಜಗತ್ತಿನಲ್ಲಿ ಅಳಿಯದೆ ಉಳಿಯಲು ಸಾಧ್ಯ.

*7 'ನಾವೆಲ್ಲ ಬೇರೆ ಬೇರೆ ರೂಪಗಳನ್ನು ತೊಟ್ಟ ಜೀವಿಗಳು ಮೇಲೆ ಹೇಳಿದ ಮೂರು ಗುಣಗಳನ್ನು ಧರಿಸಿ ನಮ್ಮ ನಮ್ಮ ಪಾತ್ರಗಳನ್ನು ವಹಿಸಿ ನೇಪಥ್ಯಕ್ಕೆ ಸರಿದು ಮತ್ತೆ ಹೊಸ ಪಾತ್ರ ಧರಿಸುವ ಜೀವಿಗಳು. ನಮ್ಮ ಈ ಹೋರಾಟ ಎಂದು ಮೊದಲಾಯಿತು? ಮತ್ತು ಎಂದು ಕೊನೆಯದಾಗುತ್ತದೆ ಎಂಬುದರ ಅರಿವೆಯೇ ಇಲ್ಲದೆ ಬಂದು ಹೋಗುವ ಪಾತ್ರಗಳು ಬದುಕಿನ ಹೋರಾಟದಲ್ಲಿ ಪಾಲ್ಗೊಳ್ಳುವುದೇ ನಮ್ಮ ಪಾಲಿನ ಕರ್ತವ್ಯ ಇಲ್ಲಿ ಸೋಲು ಗೆಲುವುಗಳ ಲೆಕ್ಕಾಚಾರವಿಲ್ಲ'*7

ಆದರೆ ಹೋರಾಟದ ಬದುಕಿನಲ್ಲಿ ನಾವು ಸಂದರ್ಭಕ್ಕೆ ತಕ್ಕಂತೆ ವಿವಿಧ ಪಾತ್ರಗಳನ್ನು ಧರಿಸಿ ಪಾತ್ರಧಾರಿಗಳಾಗಬೇಕಾಗುತ್ತದೆ. ಜೀವನವು ಒಂದು ನಾಟಕ ರಂಗಸ್ಥಳವಿದ್ದಂತೆ ಅಯಾಯ ಸಂದರ್ಭಕ್ಕೆ ಅಯಾ ರೀತಿಗನುವಾಗುವಂತೆ ನಾವುಗಳು ವೇಷಧಾರಿಗಳಾಗದಿದ್ದಲ್ಲಿ ಜೀವನ ಬದುಕು ದುಸ್ತರವಾಗುತ್ತದೆ ಎನ್ನುವ ಸತ್ಯವನ್ನು ಈ ಮುಕ್ತಕದ ಮುಖಾಂತರ ಒರೆಹಚ್ಚಿಡುತ್ತಾರೆ ಡಿ.ವಿ.ಜಿ ಯವರು. ಮತ್ತೊಂದು ಮುಕ್ತಕ ಹೀಗೆ ಹೇಳುತ್ತದೆ.

ಮುಕ್ತಕ 600

ಬದುಕು ಜಟಕಾಬಂಡಿ, ವಿಧಿಯದರ ಸಾಹೇಬ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿಗರು॥
ಮದುವೆಗೋ ಮಸಣಕೋ ಹೋಗೆಂದು ಕಡೆಗೋಡು।
ಪದ ಕುಸಿಯೆ ನೆಲವಿಹುದು – ಮಂಕುತಿಮ್ಮ॥

ಈ ಮುಕ್ತಕವು ಅತ್ಯಂತ ಜನಪ್ರಿಯವಾಗಿದೆ. ಡಿ.ವಿ.ಜಿಯವರ ಮುಕ್ತಕಗಳಲ್ಲಿ ಅತ್ಯಂತ ಹೆಸರು ವಾಸಿಯಾದ ಮತ್ತು ಜನರ ಬಾಯಲ್ಲಿ ಸುಲಭವಾಗಿ ಬಳಸಲ್ಪಡುತ್ತಿರುವ ಮುಕ್ತಕ ಇದಾಗಿದೆ. ಈ ಮುಕ್ತಕವು ಇಡೀ ಮಾನವ ಜೀವನದ ಸಾರವನ್ನೆ ಅಡಗಿಸಿಟ್ಟುಕೊಂಡಿದೆ. ಸಾಮಾನ್ಯವಾಗಿ ಜಟಕಾಬಂಡಿಗೆ ಕುದುರೆ ಕಟ್ಟಿಕೊಂಡು ಮುಸಲ್ಮಾನರು ಹೊಟ್ಟೆ ಪಾಡಿಗಾಗಿ ಓಡಿಸುತ್ತಿದ್ದರು. ಹಿಂದೆ ಈಗಿನಂತೆ, Vola, UBER, Cab ಗಳಂತೆ ಕೈ ಬೆರಳಿನ ತುದಿಯಲ್ಲಿ ಬಟನ್ ಒತ್ತಿದಾಕ್ಷಣ ಬಂದು ನಿಲ್ಲುವ ಯಾವ ವಾಹನ ಸೌಕರ್ಯವಿರಲಿಲ್ಲ. ಆಟೋಗಳು ಅಲ್ಲಲ್ಲಿ ಅಪರೂಪಕ್ಕೆ ಕಾಣಸಿಗುತ್ತಿದ್ದವು. ಶ್ರೀಮಂತರು ಬಳಸುತ್ತಿದ್ದರು. ಇನ್ನು ಸಿಟಿ ಬಸ್‌ಗಳ ಸೌಕರ್ಯವೂ ಅಷ್ಟಾಗಿ ಇರಲಿಲ್ಲವಾದ ಕಾಲದಲ್ಲಿ ಜಟಕಾಗಾಡಿ ಸರ್ವೇ ಸಾಮಾನ್ಯವಾಗಿದ್ದು ಅದನ್ನು ಓಡಿಸುವವರು ಸಾಹೇಬರಾಗಿದ್ದರಿಂದ ಇಡೀ ಬದಕನ್ನೆ ಜಟಕಾಬಂಡಿಗೆ ಹೋಲಿಕೆ ಮಾಡಿ, ವಿಧಿಯನ್ನು ಅದನ್ನು ಓಡಿಸುವ ಸಾಹೇಬ ಎಂದಿದ್ದಾರೆ. ಅಂದರೆ ಮನುಷ್ಯನ ಬದುಕು ವಿಧಿಯ ಕೈಗೊಂಬೆ ವಿಧಿಯ ಆಟದ ಮುಂದೆ ಮನುಷ್ಯನ ಪ್ರಯತ್ನಗಳು ಶೂನ್ಯ ಎಂದು ಬದುಕಿನ ವಿಧಿ ಜೀವನವನ್ನು ಮದುವೆ ಅಂದರೆ ಸಂತೋಷದ ಹಾದಿಯಲ್ಲಿ ಕರೆದೊಯ್ದರೆ ಅಲ್ಲಿಗೆ ಇಲ್ಲವಾದಲ್ಲಿ ಮಸಣಕ್ಕೆ ಅಂದರೆ ಸಾವಿಗೆ ಎಳೆದೊಯ್ದರೆ ಸಾವಿನಡೆಗೆ ಹೋಗಲೇ ಬೇಕೆಂದು ಅತ್ಯಂತ ಮನೋಜ್ಞವಾಗಿ ಈ ಮುಕ್ತಕದಲ್ಲಿ ರೂಪಕ ಬಳಸಿ ಜೀವನದ ಮೌಲ್ಯವನ್ನು ಡಿವಿಜಿಯವರು ತಿಳಿಸಿ ಕೊಟ್ಟಿದ್ದಾರೆ. ಅಷ್ಟಲ್ಲದೆ ಇನ್ನು ಅನೇಕ ಮುಕ್ತಕಗಳಲ್ಲಿ ಜೀವನ ಶೈಲಿಯನ್ನು ಜೀವನದ ಮೌಲ್ಯವನ್ನು ಜೀವನದ ಪ್ರತಿ ತಿರುವುಗಳನ್ನು ಆಗು ಹೋಗುಗಳನ್ನು ದೇವರ ಕೃಪೆಯ ಅನುಗ್ರಹವನ್ನು ತಿಳಿಸುತ್ತಾರೆ.

ಅಡಿ ಟಿಪ್ಪಣಿ *7 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.174. ಸಂಪುಟ–3. 3ನೇ ಪ್ಯಾರ

[illegible]

[illegible]

[illegible]

[illegible]

[illegible]

[illegible]

ಅಧ್ಯಾಯ–3

'ಮಂಕುತಿಮ್ಮನ ಕಗ್ಗ'ದಲ್ಲಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು

ಧಾರ್ಮಿಕ ಅಂಶಗಳು

ಡಿ.ವಿ.ಜಿ. ಯವರ ಈ 'ಮಂಕುತಿಮ್ಮನ ಕಗ್ಗ'ವು ಮಾವ ಮತ್ತು ಸೋದರಳಿಯನ ಸಂಭಾಷಣೆಯ ಕಥೆಯೊಂದಿಗೆ ಆರಂಭವಾಗುತ್ತದೆ. ಇದು ಒಂದು ರೀತಿಯ ಕಗ್ಗದ ಪೂರ್ವ ಪೀಠಿಕೆಯಂತಿದೆ ನಂತರ ಕಗ್ಗದ ಮುಕ್ತಕಗಳ ಆರಂಭವು ವಿಷ್ಣು ನಾಮ ಪ್ರಾರ್ಥನೆಯೊಂದಿಗೆ ಪ್ರಾರಂಭ ಪಡೆದುಕೊಳ್ಳುತ್ತದೆ.

ಮುಕ್ತಕ –1

ಶ್ರೀವಿಷ್ಣು ವಿಶ್ವಾದಿ ಮೂಲ ಮಾಯಾಲೋಲ।
ದೇವ ಸರ್ವೇಶ ಪರಬೊಮ್ಮನೆಂದು ಜನಂ॥
ಆವುದನು ಕಾಣದೊಡ ಮಳ್ತಿಯಂ ನಂಬಿಹುದೋ।
ಆ ವಿಚಿತ್ರಕ್ಕೆ ನಮಿಸೋ – ಮಂಕುತಿಮ್ಮ॥

ಇಲ್ಲಿ ವಿಷ್ಣುವೇ ವಿಶ್ವಕ್ಕೆ ಮೊದಲ ಮೂಲನಾದವನು ಇವನು ಮಾಯಾಲೋಲ ಕೂಡ ಆಗಿರುವವನು ಸರ್ವರಿಗೂ ಈಶನಾಗಿರುವ ದೇವರು ಪರಬ್ರಹ್ಮ ದೇವರನ್ನು ನಾನಾ ಹೆಸರುಗಳಿಂದ ನಂಬಿರುವವನೇ ದೈವ ಎಂದು ಇಲ್ಲಿ ವಿಶ್ಲೇಷಿಸಿದ್ದಾರೆ.

ಮುಕ್ತಕ –3

ಇಹುದೋ ಇಲ್ಲವೋ ತಿಳಿಯಗೊಡದೊಂದು ವಸ್ತು ನಿಜ।
ಮಹಿಮೆಯಂ ಜಗವಾಗಿ ಜೀವವೇಷದಲಿ॥
ವಿಹರಿಪುದದೊಳ್ಳಿತೆಂಬುದು ನಿಸದವಾದೊಡಾ।
ಗಹನ ತತ್ತ್ವಕ್ಕೆ ಶರಣೋ – ಮಂಕುತಿಮ್ಮ॥

ಜಗತ್ತಿನ ಮನುಷ್ಯಕುಲಕ್ಕೆಲ್ಲ ಇದೊಂದು ನಿರಂತರವಾದ ಯಕ್ಷಪ್ರಶ್ನೆ ಅಂದರೆ ದೇವರು ಎಂಬುವನು ಇದ್ದಾನೋ ಇಲ್ಲವೋ ಎಂಬುದು ವಿವಿಧ ರೀತಿಯ ಜನರ ಧರ್ಮದ, ಆಚರಣೆಗಳು ರೂಢಿಗಳು, ಪೂಜೆಗಳು, ಆಚಾರ–ವಿಚಾರಗಳು, ಸಂಪ್ರದಾಯಗಳು ವಿಭಿನ್ನವಾದವುಗಳಾಗಿವೆ. ಪ್ರತಿಯೊಂದು ಪೀಳಿಗೆಯಲ್ಲೂ, ಕಾಲಘಟ್ಟದಲ್ಲೂ ದೇವರ ಅಸ್ತಿತ್ವವನ್ನು ಪ್ರಶ್ನಿಸುವಂತಹವರು ಇದ್ದೇ ಇದ್ದಾರೆ. ದಾಸರು ದೇವರ ಬಗೆಗೆ ಹೀಗೆ ಹೇಳುತ್ತಾರೆ "ಜಗವ ಸೃಜಿಸಿ, ಗತಿ ಸೂತ್ರವನಾಡಿಸಿ" ಅಂದರೆ ಜಗತ್ತನ್ನು ಸೃಷ್ಟಿಸಿ ತನ್ನಿಷ್ಟದಂತೆ ಆಟ ಆಡುವವನು ಆ ಭಗವಂತ ಎಂದು.

ಮುಕ್ತಕ –2

ಜೀವ ಜಡರೂಪ ಪ್ರಪಂಚವನದಾವುದೋ।
ಆವರಿಸಿಕೊಂಡು ಮೊಳನೆರೆದುಮಿಹುದಂತೆ॥
ಭಾವಕೊಳಪಡದಂತೆ ಅಳತೆಗಳವಡದಂತೆ।
ಆ ವಿಶೇಷತೆ ಮಣಿಯೋ – ಮಂಕುತಿಮ್ಮ॥

ಅಂದರೆ ಈ ಜಗತ್ತಿನ ಆಗು– ಹೋಗುಗಳಿಗೆ ಯಾವುದೋ ಒಂದು ಶಕ್ತಿ ಕಾರ್ಯ ನಿರ್ವಹಿಸುತ್ತದೆ. ಆ ಶಕ್ತಿ ಕಣ್ಣಿಗೆ ಕಾಣುವುದಿಲ್ಲ. ಆ ಶಕ್ತಿಯ ಕೈಂಕರ್ಯಗಳಿಗೆ. ಭಾವಕೊಳಪಡದಂತೆ, ಅಳತೆಗಳಿಗೆ ಒಳಪಡದಂತೆ ಆ ವಿಶೇಷತ್ವ ಶಕ್ತಿಗೆ ಮಣಿಯೋ, ಅಂದರೆ ನಮಸ್ಕರಿಸು ಎನ್ನುವುದೇ ಈ ಮುಕ್ತಕದ ಭಾವವಾಗಿದೆ.

*8 'ಈ ಪರಮಾತ್ಮ – ಜಡ –ಜೀವ ಪರಸ್ಪರ ಸಂಬಂಧವನ್ನು ಕುರಿತು ಹೇರಳವಾದ ವ್ಯಾಖ್ಯಾನಗಳಿದ್ದರೂ 'ಇದೇ – ಇದು' ಎಂದು ಹೇಳುವುದು ಅಸಾಧ್ಯ. ಅದು ಅನುಭವ ವೇದ್ಯ ತೆಲುಗಿನ ಭಕ್ತಿಮಾರ್ಗದ ಮಹಾನ್ ಕವಿ ಅನ್ನಮಾಚಾರ್ಯರು 'ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಆಟು ತಾನೈ' ಎಂದು ಹೇಳುತ್ತಾರೆ. ಅಂದರೆ 'ಎಲ್ಲರಲ್ಲೂ ಹುಟ್ಟಿ ಎಲ್ಲರಲ್ಲೂ ಸೇರಿ ಎಲ್ಲರ ರೂಪವು ತಾನೇ ಆಗಿ' ಎಂದು ಆ ಪರಮಾತ್ಮನನ್ನು ವರ್ಣಿಸುತ್ತಾರೆ. ಇಲ್ಲಿ ನಮಗೆ ಆ ಪರಮ ಪುರುಷನು ಇಡೀ ಜಗತ್ತು ಮತ್ತು ಅದರಲ್ಲಿರುವ ಸಕಲವೂ ಆಗಿ ತಾನೇ ಪ್ರಕಟಗೊಂಡಿದ್ದಾನೆ ಎಂದು ಅರ್ಥ ಬರುತ್ತದೆ ಇರಲಿ ನಾವೂ ಸಹ ಇದನ್ನು ನಮ್ಮ ನಮ್ಮ ಮತಿಯ ಮಿತಿಯಲ್ಲಿ ವಿಚಾರದ ಒರೆಗೆ ಹಚ್ಚಿ ನಮ್ಮ ನಮ್ಮ ವಿಚಾರದ ಪರಿಧಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಪಡಬೇಕು'. *8

ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ'ವನ್ನು ಕನ್ನಡದ ಆಧುನಿಕ ಭಗವದ್ಗೀತೆ ಎನ್ನುತ್ತಾರೆ. ಕಾರಣ ಅಲ್ಲಿ ಶ್ರೀಕೃಷ್ಣನು ಭೋಧಿಸಿದ ಬದುಕಿನ ಎಲ್ಲಾ ತತ್ವಾದರ್ಶಗಳು ಇಲ್ಲಿ ಕಗ್ಗದಲ್ಲಿ ವ್ಯಕ್ತಪಟ್ಟಿವೆ.

ಮುಕ್ತಕ –34

ಎಷ್ಟು ಚಿಂತಿಸಿದೊಡಂ ಶಂಕೆಯನೆ ಬೆಳಸುವೀ।
ಸೃಷ್ಟಿಯಲಿ ತತ್ತ್ವವೆಲ್ಲಿಯೋ ಬೆದಕಿ ನರನು॥
ಕಷ್ಟಪಡುತಿರಲೆನುವುದೇ ಬ್ರಹ್ಮ ವಿಧಿಯೇನೋ।
ಅಷ್ಟೆ ನಮ್ಮಯ ಪಾಡು ?– ಮಂಕುತಿಮ್ಮ॥

ಅಡಿ ಟಿಪ್ಪಣಿ *8 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.02 ಸಂಪುಟ–1, 5ನೇ ಪ್ಯಾರ

ಈ ಸೃಷ್ಟಿಯ ಬಗ್ಗೆ ನಾವು – ನೀವು ಎಷ್ಟೇ ಚಿಂತಿಸಿದರೂ ಕೂಡ ಸಂದೇಹ ಮುಕ್ತವಾಗಿಲ್ಲ. ನಮ್ಮ ಹಣೆಬರಹ ಕಷ್ಟಪಡುವುದೇ ಬ್ರಹ್ಮವಿಧಿಯೇನೋ ಅಷ್ಟೆ ನಮ್ಮ ಪಾಡು ಎನ್ನುವಂತೆ ಇಲ್ಲಿ ವ್ಯಕ್ತವಾಗಿದೆ. ಈ ಸೃಷ್ಟಿಯೇ ಒಂದು ಪರಮಾತ್ಮನ ನಾಟಕ ರಂಗವೆಂದೂ ಅಂದರೆ ಸೃಷ್ಟಿಯ ಕ್ರಮವಾದ ಪ್ರಕ್ರಿಯೆ. ಅಂದರೆ ಸೃಷ್ಟಿಯ ಕ್ರಮವಾದ ಪ್ರಕ್ರಿಯೆಂದರೆ.

*9'ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ಆಕಾಶದ್ವಾಯುಃ ವಾಯೋದನ್ನಿ ಆಗ್ನೇರಾಪುಃ ಆದ್ಯ ಪೃಥಿವೀ, ಪೃಥಿವ್ಯಾ ಓಷದಯುಲ ಔಷಧೀಭ್ಯೋಯೇನ್ನಂ ಅನಾಕ ಪುರುಷಃ'*9

ಅಂದರೆ ಒಂದಕ್ಕೊಂದು ಸೃಷ್ಟಿಯಲ್ಲಿ ತಳಿಕೆ ಹಾಕಿಕೊಂಡಿರುವ ಆತ್ಮದಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಆಗ್ನಿಯಿಂದ ನೀರು, ನೀರಿನಿಂದ ಪೃಥ್ವಿ, ಪೃಥ್ವಿಯಿಂದ ಗಿಡ ಮರಗಳು, ಗಿಡಮರಗಳಿಂದ ಆಹಾರ, ಆಹಾರದಿಂದ ಶಕ್ತಿ ಉಂಟಾಗುವ ಒಂದು ಸೃಷ್ಟಿ ಪ್ರಕ್ರಿಯೆಯ ಬಗ್ಗೆ ಸವಿಸ್ತಾರವಾಗಿ ಹೇಳುತ್ತಾ ಹೋಗುತ್ತಾರೆ. ಹೀಗೆ ಹೇಳಿದ್ದರೂ ಇದು ವೈಜ್ಞಾನಿಕ ಸತ್ಯವೂ ಹೌದು. ಆಂದರೆ ಈಗ ನಮಗೆ ತಿಳಿಯದೇ ಇರುವ ವಿಷಯವನ್ನು ಮತ್ತ್ಯಾರೋ ಹೇಳಿದಾಗ ನಾವು ನಮ್ಮ ಜ್ಞಾನದ ಅರಿವಿಗೆ ತೆಗೆದುಕೊಂಡು ಜ್ಞಾನ ವೃದ್ಧಿಸಿಕೊಳ್ಳುತ್ತೇವೆ. ಹೀಗೆ ಪ್ರತಿಯೊಬ್ಬ ಮನುಷ್ಯನು ತಾನು ತಿಳಿದುಕೊಳ್ಳುವ ವಿಷಯಗಳು ಬೇರೆಯವರ ಸಹಕಾರದಿಂದಲೇ ತಿಳಿಯಲು ಶಕ್ಯವಾಗಿರುತ್ತದೆ. ಹೀಗೆ ಹೇಳುತ್ತಾ ಹೋದವುಗಳೆ ಅಯಾ ಕಾಲಕ್ಕೆ ಪ್ರದೇಶಗಳಿಗೆ ಒಂದೊಂದು ತತ್ವಸಿದ್ಧಾಂತ ರೂಪ ಪಡೆದುಕೊಂಡವುಗಳಾಗಿವೆ. ಇಂತಹ ಸಿದ್ಧಾಂತಗಳು ಒಂದೊಂದು ಕೂಡ ಒಂದೊಂದು ರೂಪ ಪಡೆದುಕೊಂಡು ಇಂದು ಅದ್ವೈತ, ದ್ವೈತ, ವಿಶಿಷ್ಟಾ ದ್ವೈತ, ಶೈವ, ವೈಷ್ಣವ, ಬೌದ್ಧ, ಜೈನ, ಪಾರಸೀಕ, ಇಸ್ಲಾಂ, ಕ್ರೈಸ್ತ ಆಗಿ ರೂಪುಗೊಂಡವುಗಳು. ಒಂದು ಅಗಾದ, ಅಧ್ಬುತ ಶಕ್ತಿಯೇ ಈ ಸೃಷ್ಟಿಯ ಒಂದು ಮೂಲ, ಆ ಶಕ್ತಿಯೇ ಭಗವಂತ ಎಂದು ಹೇಳುತ್ತದೆ ಈ ಮುಕ್ತಕ.

ಮುಕ್ತಕ 35

ಇರಬಹುದು: ಚಿರಕಾಲ ಬೊಮ್ಮ ಚಿಂತಿಸಿ ದುಡಿದು।
ನಿರವಿಸಿಹ ವಿಶ್ವಚಿತ್ರದ ಮರ್ತ್ಯನರನು॥
ಅರಿತೆನಾನೆನ್ನವಂತಾಗೆ ಕೃತಿಕೌಶಲ್ಯದ।
ಹಿರಿಮೆಗದು ಕುಂದಲ್ತೆ? – ಮಂಕುತಿಮ್ಮ॥

ಅಡಿ ಟಿಪ್ಪಣಿ *9 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.56. ಸಂಪುಟ–1.

ಸೃಷ್ಟಿಕರ್ತ ಬ್ರಹ್ಮನು ಅನೇಕ ಸಲ ಯೋಚಿಸಿ, ಯೋಚಿಸಿ ಈ ಜಗತ್ತಿನ ಸೃಷ್ಟಿಗೈದಿರುವನು, ಅಷ್ಟು ಕಷ್ಟಪಟ್ಟು ಯೋಚಿಸಿ ಸೃಷ್ಟಿಸಿರುವ ಜಗತ್ತನ್ನು ಅಥವಾ ಆ ಸೃಷ್ಟಿಯ ರಹಸ್ಯವನ್ನು ಒಬ್ಬ ಸಾಮಾನ್ಯ ಮನುಷ್ಯನು ಅಂದರೆ ಕಾಲಚಕ್ರದ ಕೆಳಗೆ ಸಾವನ್ನು ಹೊಂದುವಂತಹ ವ್ಯಕ್ತಿಯು ಅರ್ಥೈಸಿಕೊಂಡರೆ ಇದನ್ನು ಸೃಷ್ಟಿಸಿದ ಬ್ರಹ್ಮನಿಗೆ ಅವಮಾನವಾದಂತೆಯೇ ಅಂದರೆ ಆತನ ಸೃಷ್ಟಿಗೆ ಒಂದು ಕುಂದು ಆದ್ದರಿಂದ ಆ ಬ್ರಹ್ಮನು ಈ ಸೃಷ್ಟಿಯ ರಹಸ್ಯವನ್ನು ಅರ್ಥ ಮಾಡಿಕೊಳ್ಳುವ ಪರಿಪೂರ್ಣತೆಯನ್ನು ನಮಗೆ ಕೊಡಲಿಲ್ಲ ಎಂದು ಹೇಳುತ್ತಾರೆ.

ಈ ಸೃಷ್ಟಿಯ ನಮ್ಮ ಮೂಲ ಭೂಮಿ, ಭೂಮಿ ಇರುವುದು ಆಕಾಶದಲ್ಲಿ ಅಂದರೆ ಭೂಮಿಯೊಂದು ಅಕಾಶಕಾಯ, ಹಾಗೇಯೆ ನಮ್ಮ ದೇಹವೆಂಬುದು ಕೂಡ ಈ ಅಕಾಶಕಾಯದಂತೆ ಅಂದರೆ ತಲೆ, ಮೆದುಳು, ಕಣ್ಣು, ಕಿವಿ, ಕತ್ತು, ಮೂಳೆಗಳು, ಚರ್ಮ ಎಲ್ಲವೂ ಕೂಡ ಒಂದಕ್ಕೊಂಧು ಪೂರಕವಾಗಿಯೇ ಇರುತ್ತವೆ. ಆಕಾಶಕಾಯಗಳು ಗ್ರಹಗಳಿಗೆ ಹೇಗೆ ಒಂದಕ್ಕೊಂದು ಸಹಕರಿಸಿಕೊಂಡಂತೆ ಕಾರ್ಯ ನಿರ್ವಹಿಸುತ್ತವೆಯೋ ಹಾಗೆಯೆ ನಮ್ಮ ದೇಹದ ಕಾರ್ಯಗಳು ನಿರ್ವಹಿಸಲ್ಪಡುತ್ತದೆ.

ಮುಕ್ತಕ 37

ಅವತರಿಸಿಹನು ಬೊಮ್ಮ ವಿಶ್ವದೇಹದೊಳೆನ್ನ।
ಅವನ ವೇಷಗಳೇಕೆ ಮಾರ್ಪಡುತಲಿಹವು?॥
ತವಕಪಡನೇತಕೋ ಕುರುಹ ತೋರಲು ನಮಗೆ।
ಅವಿತುಕೊಂಡಿಹುದೇಕೋ– ಮಂಕುತಿಮ್ಮ॥

ಈ ಜಗತ್ತನ್ನು ಸೃಷ್ಟಿಗೈದವನು ಪರಮಾತ್ಮ ಎಂಬುವನು ಒಬ್ಬನೇ ಆಗಿದ್ದರೆ, ಅನೇಕ ರೂಪಗಳೇತಕೆ, ಎಲ್ಲದರಲ್ಲೂ ಏಕರೂಪವೇ ಆಗಬೇಕಿತ್ತಲ್ಲವೆ? ಓ ಪರಮಾತ್ಮ ಎಂಬುವನು ನಿತ್ಯನೂ ಸತ್ಯನೂ ಆದಾಗ ಒಂದೇ ರೂಪವೇಕೆ ಇಲ್ಲ. ರವಿ ತಿರುಮಲೈಯವರು ಈ ಮುಕ್ತಕದ ವಿವರಣೆ ನೀಡುತ್ತಾ ತೆಲುಗಿನ ಕವಿ ಅನ್ನಮಾಚಾರ್ಯರು, ತಮ್ಮ ಒಂದು ಹಾಡಿನಲ್ಲಿ ಹೇಳಿರುವ ಅರ್ಥ ಪೂರ್ಣ ಸಾಲನ್ನು ಹೀಗೆ ಹೇಳುತ್ತಾರೆ. "ಅಂದರಿಲೋ ಪುಟ್ಟಿ ಅಂದರಿಲೋ ಚೇರಿ ಅಂದರಿ ರೂಪಮುಲು ಅಟು ತಾನೈ" ಎಂದರೆ ಎಲ್ಲರಲ್ಲೂ ಹುಟ್ಟಿ ಎಲ್ಲರಲ್ಲೂ ಸೇರಿ ಎಲ್ಲರ ರೂಪವೂ ತಾನೆ ಆಗಿ' ಎಂದರೆ ಪರಮಾತ್ಮನು ಸರ್ವವ್ಯಾಪಕತ್ವವನ್ನು ಹೊಂದಿರುವವನು ಎಂದು ಕೊಂಡಾಡಿರುವುದನ್ನು ತಿಳಿಸುತ್ತಾರೆ. ಇಡೀ ಜಗತ್ತಿನಲ್ಲಿ ಎರಡು ರೀತಿಯ ವಿಷಯಗಳಿಂದ ಕೂಡಿದುದಾಗಿದೆ ಒಂದು ಚೇತನ ಇನ್ನೊಂದು ಜಡವಸ್ತು ಇವೆರಡರ ಸಮ್ಮಿಲನೇ ಪ್ರಪಂಚ ಅಥವಾ ಜಗತ್ತು, ಬೃಹತ್ ಚೇತನದಿಂದೊಡಗೂಡಿದುದೆ ಈ ಜಗತ್ತು

ಮುಕ್ತಕ 38

ಬೇರೆಯಿಸಿ ನಿಮಿಷನಿಮಿಷಕಮೊಡಲ ಬಣ್ಣಗಳ।
ತೋರಿ ಪೂಸರವಳ್ಳಿಯಂತೇನು, ಬೊಮ್ಮಂ?॥
ಪೂರ ಮೈದೊರೆನೆಂಬಾ ಕಪಟಿಯಂಶಾವ।
ತಾರದಿಂದಾರ್ಗೇನು? ಮಂಕುತಿಮ್ಮ॥

[illegible]

[illegible]

[illegible]

[illegible]

[illegible]

ಹಿಂದಿನ ಮುಕ್ತಕದಿಂದ ಮುಂದುವರೆಯುತ್ತಾ ಡಿ.ವಿ.ಜಿಯವರು ನಿಮಿಷ ನಿಮಿಷಕ್ಕೂ ಬಣ್ಣ ಬದಲಿಸುವ ಊಸರವಳ್ಳಿಯಂತೇನು ಈ ಬ್ರಹ್ಮನೆಂಬ ದೇವನು. ಪೂರ ದೇಹವನ್ನು ತೊರೆದ ಕಪಟಿಯಂಶದವನು ಮೋಸಗಾರನು, ಸ್ವಾರ್ಥಿಯೂ ಆದ ಬ್ರಹ್ಮನು ಒಂದು ಭಾಗ ಮಾತ್ರ ತೋರಲ್ಪಡುವವನು. ಪ್ರತಿಯೊಂದು ವಸ್ತುವೂ ಈ ಪ್ರಪಂಚದಲ್ಲಿ ಬ್ರಹ್ಮನಿಂದಲೇ ಸೃಷ್ಟಿಯಾಗಲ್ಪಟ್ಟಿದೆ.

*10 ಎಲ್ಲವೂ ಆ ಪರಮಾತ್ಮನೇ ತನ್ನ ಅಂಶದಿಂದ ಪ್ರಕಟವಾಗಿ(ಸಿ)ದ್ದಾನೆ ಎಂದು ಹಾಗಾಗಿ ಯಾರು ಯಾರು ಏನೇನು ಎಂದು ಭಾವಿಸಿದರೆ ಹಾಗೆ ಅವರಿಗೆ ತೋರುವ ಆ ಪರಮಾತ್ಮ ವಸ್ತು ಏಕ ರೂಪದಲ್ಲಿ ಏಕೆ ಇಲ್ಲ ಎಂದು ಈ ಮುಕ್ತಕದ ಹೂರಣ. ಘಳಿಗೆ ಘಳಿಗೆಗೆ ಬದಲಾಗುವ ಮನುಷ್ಯರ ಮನದ ಭಾವಕ್ಕೆ ತಕ್ಕಂತೆ ಬದಲಾಗುವ ಆ ಪರಮಾತ್ಮ ಸ್ವರೂಪವನ್ನು ಗುಂಡಪ್ಪನವರು ಊಸರವಳ್ಳಿಯಂತೆ ಕ್ಷಣಕ್ಷಣಕ್ಕೊಂದು ರೂಪವನ್ನು ಏಕೆ ತೋರುತ್ತಾನೆ ಈ ಪರಮಾತ್ಮ? ಆಗಾಗ ಅವನೆತ್ತುವ ಅಂಶಾವತಾರಗಳಿಂದ ಯಾರಿಗೆ ಏನು ಪ್ರಯೋಜನ? ತನ್ನ ನಿಜ ರೂಪವನ್ನೆ ತೋರಬಹುದಲ್ಲ ಎಂದು ಪ್ರಸ್ತಾಪಿಸಿ ಓದುಗರನ್ನು ಆ ಪರಮಾತ್ಮನ ನಿಜ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಪ್ರೇರೇಪಿಸುತ್ತಾರೆ.*10

ಪರಮಾತ್ಮನು ಎಲ್ಲೆಲ್ಲಿಯೂ ಇರುವನು ಎಂಬ ಸನ್ನಿವೇಶಕ್ಕೆ ಭಕ್ತ ಪ್ರಹ್ಲಾದನ ಸನ್ನಿವೇಶ ನೆನಪಿಗೆ ಬಾರದೇ ಇರುವುದಿಲ್ಲ.

ಮುಕ್ತಕ 40

ನಿಶೆಯೊಳೇಂ ಕಾಣಬಾರನು ಹಗಲನೊಲ್ಲದೊಡೆ।
ಶಶಿರವಿಗಳವನ ಮನೆಕಿಟಕಿಯಾಗಿರಿರೇಂ?॥
ಮಸುಕುಬೆಳಕೊಂದಾದ ಸಂಜೆ ಮಂಜೇನವನು।
ಮಿಸುಕಿ ಸುಳಿಯುವ ಸಮಯ? – ಮಂಕುತಿಮ್ಮ॥

ಡಿ.ವಿ.ಜಿ ಯವರು ಮುಂಚಿನ ಮುಕ್ತಕಗಳಲ್ಲಿ ದೇವರ ಗೋಚರ ಮತ್ತು ಅಗೋಚರತೆ ಬಗ್ಗೆ ವಿಷದವಾಗಿ ಹೇಳಿದ್ದಾರೆ. ಏಕರೂಪ ನಾನಾರೂಪಗಳ ಬಗ್ಗೆಯೂ ವಿಶ್ಲೇಷಿಸುತ್ತಾ ಹೋಗಿದ್ದಾರೆ. ಬ್ರಹ್ಮನೆಂಬುವನ ರೂಪವು ಹಗಲಿನಲ್ಲಿ ಕಾಣಿಸಿಕೊಳ್ಳಬಾರದೆಂದು ಇದ್ದರೆ. ನಿಶೆಯಲ್ಲಿ ಅಂದರೆ ರಾತ್ರಿ ಹೊತ್ತಿನಲ್ಲಿಯಾದರೂ ಕಾಣಿಸಿಕೊಳ್ಳಬಹುದಲ್ವ. ಅವನ ಮನೆಗೆ ಸೂರ್ಯ ಚಂದ್ರರೆ ಕಿಟಕಿಗಳಾಗಿರುವರೋ ಆತ ಸಂಜೆಯ ಮಂಜು ಬೆಳಕಿನಲ್ಲಿ, ಮಬ್ಬು ಬೆಳಕಿನಲ್ಲಿ ಮಿಸುಕಿ ಸುಳಿಯುವ ಸಮಯವೆ? ಆತನಿಗೆ ಎನ್ನುತ್ತಾರೆ.

ಅಂದರೆ ಇಲ್ಲಿ ದೇವರು ಎಂಬುವನ ಸ್ವರೂಪವೇನು? ಅವನ ಸಾಕ್ಷಾತ್ಕಾರಕ್ಕಾಗಿ ಏನು ಮಾಡಬೇಕು? ಹೀಗೆಲ್ಲ ಹತ್ತು ಹಲವಾರು ಸಂಶಯಗಳು ಉದ್ಬವಿಸದೆ ಇರುವುದಿಲ್ಲ. ಇಲ್ಲಿ ಕಣ್ಣು ತೆರೆದಾಗ ಬೆಳಕು, ಅಂದರೆ ಪ್ರಪಂಚದ ದರ್ಶನವಾಗುವುದು ಅಂದರೆ ನಾವು ಯಾವ ವಸ್ತುವನ್ನು ನೋಡುತ್ತೇವೊ ಅಲ್ಲಿ ನಮ್ಮ ಗಮನ ಅಲೋಚನೆ ಕೇಂದ್ರೀಕರಿಸಬೇಕಾಗುತ್ತದೆ. ಹಾಗೆಯೇ ಕಣ್ಣು ತೆರೆದಿದ್ದಾಗ ಅನೇಕ ವಸ್ತುಗಳು ನಮಗೆ ಗೋಚರವಾಗುವುದಾದ್ದರಿಂದ ಪರಮಾತ್ಮನನ್ನು ಧೇನಿಸುವುದು ಕಷ್ಟಸಾಧ್ಯ ಇಂದ್ರಿಯಗಳು ಚಂಚಲತೆಯಿಂದ ಕೂಡಿರುತ್ತವೆ ಎಂದು ಹೇಳುತ್ತಾರೆ.

ಅಡಿ ಟಿಪ್ಪಣಿ *10 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.62. ಸಂಪುಟ–1. 1ನೇ ಪ್ಯಾರ

ಕಣ್ಣು ಮುಚ್ಚಿದ್ದಾಗ ನಮಗೆ ಕತ್ತಲೆಯ ಅನುಭವವಾಗುತ್ತದೆ ಕಣ್ಣು ಮುಚ್ಚಿದ್ದಾಗ ಬಾಹ್ಯ ವಸ್ತುಗಳು ಗೋಚರವಾಗದೇ ಇರುವುದನ್ನು ಕತ್ತಲು ಎನ್ನುವ ಅರ್ಥದಲ್ಲಿ ಹೇಳಿದ್ದಾರೆ.

*11 ಎಚ್ಚರ ಮತ್ತು ನಿದ್ದೆಗಳ ನಡುವಿನ ಒಂದು ಸ್ತರ ಉಂಟು ಅದು ಜಾಗೃತಾವಸ್ಥೆ. ಮನದ ಎಲ್ಲ ಕೋಣೆಗಳು ಕಾಲ್ಪನಿಕ ಗೆರೆಗಳನ್ನು ಅಳಿಸಿ, ಮನದ ಪಟಲವನ್ನು ಒಂದೆ ಆಗಿಸಿ ಅಲ್ಲಿ ಧ್ಯಾನ ಮಾಡಿದರೆ, ಈ ಪ್ರಪಂಚದ ಸೆಳೆತಗಳನ್ನು ಮೀರಿ ಇಡೀ ಸೃಷ್ಟಿಗೆ ಕಾರಣವಾದ ಆ ಚೇತನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಪಡಬಹುದು. ಈ ಪ್ರಯತ್ನ ನಿರಂತರವಾಗಿ ಸಾಗಿದಾಗ, ಧ್ಯಾನ ಗಟ್ಟಿಯಾಗಿ ಆ ಪರಮ ಶಕ್ತಿಯ ದರ್ಶನ ಅಂತಃ ಚಕ್ಷುಗಳಿಗೆ ಆಗಬಹುದು. *11

ಇಲ್ಲಿ ಡಿ.ವಿ.ಜಿಯವರು ರಾತ್ರಿಯ ಮಬ್ಬನ್ನು "ಮಂಜೇನು" ಎಂದಿದ್ಧಾರೆ. ನಾವು ಕಣ್ಣು ಮುಚ್ಚಿದ ಸ್ಥಿತಿಯಲ್ಲಿಯೇ ಹೆಚ್ಚು ಹೊತ್ತು ಇದ್ದರೆ ಅದನ್ನು ಧ್ಯಾನವೆನ್ನಬಹುದು. ಅಂದರೆ ಮನುಷ್ಯನ ಮನಸ್ಸಿನ ಕಲ್ಮಶಗಳನ್ನೆಲ್ಲ ವಿಕೃತ ಭಾವಗಳನ್ನು ಕರಗಿಸುವ ಶಕ್ತಿಯನ್ನು ತಂದುಕೊಡುವ ಭಾವ ಪ್ರಕ್ರಿಯ ಇದಾಗಿದೆ. ಇದೊಂದು ರೀತಿಯ ಯೋಗ ಸಾಧನೆಯ ಆಧ್ಯಾತ್ಮಿಕ ಸಾಧನೆಯ ಉತ್ತುಂಗ ಸ್ತರ ಎನ್ನಬಹುದು. ಆದರೆ ಇದೆಲ್ಲವೂ ಸಾಧ್ಯವಾಗುವುದು ಒಬ್ಬ ಶ್ರೇಷ್ಟ ಮಾರ್ಗದರ್ಶಕನಿರಬೇಕು. ನಿರಂತರ ಪ್ರಯತ್ನ ಸಾಧನೆ ಬೇಕಾಗುತ್ತದೆ ಎನ್ನುವುದೇ ಇದರ ಭಾವವಾಗಿದೆ.

ಮುಕ್ತಕ 43

ಮೇಲೆ ಕೆಳಗೊಳಗೆ ಬಳಿ ಸುತ್ತಲೆತ್ತತ್ತಲುಂ।
ಮೂಲೆ ಮೂಲೆಯಲಿ ವಿದ್ಯುಲ್ಲಹರಿಯೊಂದು॥
ಧೂಲಿಕಣ ಭೂಗೋಳ ರವಿ ಚಂದ್ರ ತಾರೆಗಳ।
ಚಾಲಿಪುದು ಬಿಡು ಕೊಡದೆ– ಮಂಕುತಿಮ್ಮ॥

ಒಂದು ಕ್ಷಣವು ಬಿಡುವು ಕೊಡದೆ ಈ ಸೃಷ್ಟಿ ಜಗತ್ತಿನ ಅಸ್ತಿತ್ವಕ್ಕೆ ಕಾರಣೀಭೂತವಾದ ಪರಮ ಶಕ್ತಿಯೊಂದು ಇದೆ. ಸಾಧು ಸಂತರು, ಸಿದ್ಧಪುರುಷರು, ಭಕ್ತರು ಭಕ್ತಿಯಿಂದ ತಮ್ಮೊಳಗೆ ಆವಾಹಿಸಿಕೊಂಡು ಅನುಭವಿಸುತ್ತಿದ್ದಾರೆ. ಆಂದರೆ ಈ ಶಕ್ತಿಯು ಮೇಲೆ ಕೆಳಗೆ, ಒಳಗೆ, ಹತ್ತಿರ, ದೂರ ಸುತ್ತಲು ಮತ್ತು ಎತ್ತೆತ್ತಲೂ ಆ ವಿದ್ಯುಲ್ಲಹರಿಯನ್ನು ಬಿಡುವು ಕೊಡದೆ ನಿರಂತರವಾಗಿ ಹರಿಸಿ ಕಾರ್ಯನಿರ್ವಹಿಸುತ್ತದೆ. ಎಂಬುದೇ ಈ ಮುಕ್ತಕದ ಅರ್ಥವಾಗಿದೆ.

ಈ ಜೀವ ಜಗತ್ತಿನ ಸಕಲ ಚರಾಚರಗಳಿಗೂ ಅಂದರೆ ಅಕಾಶದ ಪಕ್ಷಿಗಳಿಗೂ ಭೂಮಿಯ ಮೇಲಿನ ಪ್ರಾಣಿ, ಕ್ರಿಮಿ ಕೀಟಗಳಿಗೂ ಮತ್ತು ಎಲ್ಲ ಜಲಚರ ಜೀವರಾಶಿಗೂ ಒಂದು ಸಮಾನವಾದ ಅಂಶವಿದೆ ಅದೇ ದೇಹ, ಮನಸ್ಸು, ಬುದ್ಧಿ, ಮತ್ತು ಚೇತನವೆಂಬ ಉಸಿರು ಅಂದರೆ ಚೈತನ್ಯ ಶಕ್ತಿ ಎನ್ನಬಹುದು. ಈ ಪ್ರಾಣಿ ಪಕ್ಷಿಗಳು ಭೂಮಿಗೆ ಸಮಾನಾಂತರವಾಗಿರುವಂತೆ ಈ ಸೃಷ್ಟಿಯಲ್ಲಿದೆಯಾದರೂ ಮನುಷ್ಯನನ್ನು ಮಾತ್ರ ಲಂಬವಾಗಿ ಸೃಷ್ಟಿಸಲಾಗಿದೆ. ಅಂದರೆ ಇವನ ಆಲೋಚನೆಗಳು ಊರ್ಧ್ವಮುಖವಾಗಿರುವಲ್ಲಿ ಸಾಮರ್ಥತೆಯನ್ನು ಹೊಂದಿದೆ. ಆಂದರೆ ಮನುಷ್ಯ ಇತರ

ಅಡಿ ಟಿಪ್ಪಣಿ *11 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.65. ಸಂಪುಟ–1. 2ನೇ ಪ್ಯಾರ

[illegible]

[illegible]

[illegible]

ಜೀವರಾಶಿಗಳಿಗಿಂತ ವಿಭಿನ್ನವಾಗಿದ್ದಾನೆ. ಇತರ ಪ್ರಾಣಿಗಳಿಗೆ ಹೋಲಿಸಿದರೆ ಮಾನವ ಅತ್ಯುನ್ನತ ರೀತಿಯಲ್ಲಿ ಆಲೋಚಿಸುವ ಶಕ್ತಿಯನ್ನು ಮತ್ತು ದ್ವೇಷ ಅಸೂಯೇ ಪಾತಕಿ ಬುದ್ದಿಗಳು ಮನುಷ್ಯನಲ್ಲೇ ಹೆಚ್ಚಾಗಿ ಕಂಡುಬರುತ್ತವೆ.

ಮನುಷ್ಯನಿಗೆ ಒಳ್ಳೆಯ ವಿಚಾರಗಳನ್ನು ಮಾತ್ರ ಉಳಿಸಿಕೊಳ್ಳುವ ಬೆಳಸಿಕೊಳ್ಳುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯ ಎರಡನ್ನು ಮನುಷ್ಯನಿಗೆ ಕರುಣಿಸಿದ್ದಾನೆ. ನಾವು ಒಳ್ಳೆಯ ವಿಚಾರಗಳನ್ನು ಮಾತ್ರ ಇಟ್ಟುಕೊಂಡು ಕೆಟ್ಟ ವಿಚಾರಗಳನ್ನು ಬಿಟ್ಟುಬಿಡುವ ಶಕ್ತಿಯನ್ನು ದೇವರು ಕರುಣಿಸಿದ್ದಾನೆ. ಮನುಷ್ಯನಿಗೆ ಮನುಷ್ಯ–ಮನುಷ್ಯನ ನಡುವಿನ ಸಂಬಂಧ, ವಿದ್ಯಾಭ್ಯಾಸ, ಓದುವ, ಮಾತನಾಡುವ, ಆಚಾರ, ವಿಚಾರ ಸ್ನೇಹ ಸಂಬಂದಗಳ ಪೂಜೆ, ಸಂಸ್ಕಾರ, ಧ್ಯಾನ ಇವುಗಳಿಂದ ಮನ: ಶುಧ್ಧಿಯಾಗಲು ಮಾನವನಿಗೆ ಅವಕಾಶವಿದೆ ಎಂದು ಹೇಳುತ್ತಾರೆ ಡಿ.ವಿ.ಜಿ.

ಮುಕ್ತಕ 75

ಮರ ತನ್ನ ಹೆತ್ತ ಬೀಜವನ್ನಿಲ್ಲವೆನಿಸಿ।
ವಿಸ್ತರಿಸುವಂದದಿ ಸೃಷ್ಟಿ ತನ್ನ ಮೂಲವನು॥
ಮರೆಮಾಚಿ ತಾನೆ ಮೆರೆಯುತ್ತಿಹುದು ಕಣ್ಗಳಿಗೆ।
ನೊರೆಸೃಷ್ಟಿ ಪಾಲ್ ಬ್ರಹ್ಮ – ಮಂಕುತಿಮ್ಮ॥

ಮರವು ತನ್ನ ಸೃಷ್ಟಿಗೆ ಕಾರಣವಾದ ಬೀಜವನ್ನೆ ಇಲ್ಲವೆನಿಸಿ ಬೃಹದ್ ವೃಕ್ಷವಾಗಿ ವಿಸ್ತಾರಗೊಳ್ಳುವಂತೆ ಸೃಷ್ಟಿಯು ತನ್ನ ಮೂಲವನ್ನು ಮರೆಮಾಚಿ ತಾನೇ ಮೆರೆಯುತ್ತಿಹ ಕಣ್ಣುಗಳಿಗೆ ಹಾಲನ್ನು ಕಾಯಿಸಿದಾಗ ಹಾಲಿನ ಮೇಲೆ ನೊರೆ ಉಬ್ಬುವಂತೆ ಅಂದರೆ ಹಾಲೆ ಕಾಣದಂತೆ ನೊರೆಯೇ ಆವರಿಸಿದಂತೆ ಈ ಸೃಷ್ಟಿ ಅದರಲ್ಲಿ ಅದೃಶ್ಯರೂಪದಲ್ಲಿರುವವನೇ ಆ ಬ್ರಹ್ಮ ಹಾಲಿನಂತೆ ಇರುತ್ತಾನೆ ಎಂದು ಮುಕ್ತಕದ ಅಂತರ್ಯ. ಮರಕ್ಕೆ ಜನ್ಮ ನೀಡುವ ಒಂದು ಬೀಜವು ತನ್ನನ್ನು ತಾನೇ. ಇಲ್ಲವಾಗಿಸಿಕೊಳ್ಳುತ್ತಾ ತನ್ನ ಶಕ್ತಿಯಿಂದಲೇ ಮರವನ್ನು ಹುಟ್ಟುಹಾಕಿ, ಇತರ ಬೀಜಗಳಿಗೆ ಸೃಷ್ಟಿಗೈಯುವ ಶಕ್ತಿಯಂತೆ ಈ ಜಗತ್ತಿನ ಸೃಷ್ಟಿ ಕೂಡ. ಈ ಜಗತ್ತಿನ ಪ್ರತಿಯೊಂದು ಜೀವಿಯೂ ಆ ಪರಮ ಚೇತನದ ಆಧಾರದ ಮೇಲೆ ನಿಂತಿದೆ. ಒಳಗೆ ಮತ್ತು ಹೊರಗೆ ಕೂಡ ಅದೇ ಚೇತನ.

ಮನಸ್ಸು, ಬುಧ್ಧಿ, ದೇಹ, ಆತ್ಮಗಳು ಈ ನಾಲ್ಕು ಕೂಡ ಒಂದೆಕ್ಕೆ ಸೇರಿರುವಂತಹವುಗಳು ದೇಹವು ಇವೆಲ್ಲವುಗಳಿಂದ ಕೂಡಿದಂತಹ ಗೂಡಾಗಿದೆ. ಈ ನಾಲ್ಕುಗಳ ಮೂಲವನ್ನು ಅರಿಯುವ ಮಾರ್ಗವೇ ಪರಮಾತ್ಮನನ್ನು ಕಾಣುವ ಆಧ್ಯಾತ್ಮದ ಹಾದಿ

ಮುಕ್ತಕ 76

ಬಹುದಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ।
ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲೆಸಿ?॥
ವಹಿಸಿ ಜೀವತೆಯ ಮಾಯೆಯ ಸರಸವಿರಸದಲಿ।
ವಿಹರಿಪನು ನಿರ್ಲಿಪ್ತ– ಮಂಕುತಿಮ್ಮ॥

ಪರಬ್ರಹ್ಮನು ಬಹುರೂಪದಿಂದ ಈ ಜಗತ್ತಿನಲ್ಲಿ ತನ್ನ ಮಹಿಮೆಯನ್ನು ಹರವುತ್ತಾ ಈ ಜಗತ್ತಿನಲ್ಲಿ ನೆಲೆಯೂರಿ ತಾನೇ ಆಡುವ ಲೀಲಾ ವಿನೋದದಾಟಗಳಲ್ಲಿ ತಾನು ನಿರ್ಲಿಪ್ತನಾಗಿದ್ದುಕೊಂಡೇ ತಾನು ಆನಂದದಿಂದಿರುತ್ತಾನೆ. ಪರಮ ಶಕ್ತಿಯೊಂದು ಈ ಜಗತ್ತನ್ನು ಸೃಷ್ಟಿಸಿ ಅದರೊಳು ಜೀವಚರಗಳನ್ನು ಸೃಷ್ಟಿಸಿ ಬಿಟ್ಟು ಆಟ ನೋಡುವ ಪರಬ್ರಹ್ಮ ಈ ಜಗತ್ತನ್ನು ನಡೆಸಿಕೊಂಡು ಹೋಗುವವನಾಗಿದ್ದಾನೆ, ಪರಮಾತ್ಮನ ಸೃಷ್ಟಿಯಲ್ಲಿ ಅನೇಕ ವಿಧಗಳಿವೆ. ಮನುಷ್ಯನ ಸಹಜಗುಣಗಳಾದ ಪ್ರೀತಿ, ಪ್ರೇಮ, ದಯೆ ಕರುಣೆ, ಕೋಪ, ತಾಪ ಬುದ್ಧಿವಂತಿಕೆ, ದ್ವೇಷ, ಅಸೂಯೆ ಎಲ್ಲ ಭಾವನೆಗಳೂ ಇವೆ. ಇವೆಲ್ಲ ಭಾವಗಳು ಸಕಲ ಜೀವಚರಗಳೆಲ್ಲದರಲ್ಲಿಯೂ ಇರುವುದೇ ಸೃಷ್ಟಿಯ ಒಂದು ವಿಶೇಷತೆ. ಆ ಪರಮಾತ್ಮನು ಜಗತ್ತನ್ನು ಸೃಷ್ಟಿಸಿ ಈ ಜಗತ್ತಿನಲ್ಲಿ ಏನೆಲ್ಲ ಜೀವಿಗಳನ್ನು ವಸ್ತುಗಳನ್ನು ಸೃಷ್ಟಿಸಿ ಮಾಯೆಯ ಆಟವನಾಡುವ ಸೂತ್ರಧಾರನು ಆಗಿದ್ದಾನೆ.

ಮುಕ್ತಕ 77

ತನ್ನ ಹೊಳಹೊಳಪುಗಳ ನೆನೆನೆನೆದು ಮೈಮರೆತ।
ರನ್ನವೋ ಬ್ರಹ್ಮ;ನೋಡುವನು – ನಿಜಪಿಂಛ॥
ವರ್ಣದೆಣಿಕೆಯಲಿ ತನ್ನನೆ ಮರೆತ ನವಿಲವೊಲು।
ತನ್ಮಯನೋ ಸೃಷ್ಟಿಯಲಿ – ಮಂಕುತಿಮ್ಮ॥

ಬ್ರಹ್ಮನೆಂಬುವವನು, ತನ್ನ ಹೊಳಪುಗಳನ್ನು ನೆನೆದು ಮೈಮರೆತ ರತ್ನದಂತೆ ಅಂದರೆ ಒಂದು ನವಿಲು ತನ್ನ ಬಣ್ಣ ಬಣ್ಣದ ಗರಿಗಳನ್ನು ಕೆದರಿ ನೃತ್ಯಮಾಡುವಂತೆ ಮತ್ತು ತನ್ನ ಗರಿಗಳ ಸೌಂದರ್ಯವನ್ನು ತಾನೇ ನೋಡಿ ಮೈಮರೆಯುವಂತೆ, ಪರಮಾತ್ಮನು ಕೂಡ ತಾನೇ ಸೃಷ್ಟಿಸಿದ ಜಗತ್ತನ್ನು ಕಂಡು ತಾನೇ ವಿನೋದವನ್ನು ಲೀಲೆಯನ್ನು ಅನುಭವಿಸುತ್ತಾನೆ. ಅಂದರೆ ಆ ಲೀಲೇಯಲ್ಲಿಯೇ ಪರಮಾತ್ಮನು ತನ್ಮಯನೋ? ಎಂದು ಪ್ರಶ್ನಾರ್ಥಕ ರೂಪದಲ್ಲಿ ಕೇಳುತ್ತಾರೆ ಡಿ.ವಿ.ಜಿ.

ಮುಕ್ತಕ 78

ತರುಣಿ ತನ್ನೊಡವೆಗಳ ತಳೆಯುತ್ತ ತೆಗೆಯುತ್ತ।
ಪರಿಕಿಸುತೆ ಮುಕುರದಲಿ ಸೊಗಸುಗಳ ಪರಿಯ॥
ಮರೆತೆಲ್ಲವನು ವಿಲಸಿಪಂತೆ ತಾಂ ವಿಶ್ವದಲಿ।
ಮೆರೆಯುವನು ಪರಬೊಮ್ಮ – ಮಂಕುತಿಮ್ಮ॥

ಒಬ್ಬ ತರುಣಿಯು ತನ್ನ ಬಂಗಾರದೊಡವೆಗಳನ್ನು ಹಾಕಿಕೊಳ್ಳುತ್ತಾ ತೆಗೆಯುತ್ತಾ ಕನ್ನಡಿಯಲಿ ನೋಡಿಕೊಂಡು ಆನಂದಿಸುವಂತೆ ಅವುಗಳ ಸೌಂದರ್ಯವನ್ನು ಸವಿಯುತ್ತಾ ಮೈಮರೆತಂತೆ ಪರಮಾತ್ಮನು ತಾನೇ ಸೃಷ್ಟಿಸಿದ ಈ ಜಗತ್ತಿನಲ್ಲಿ ವಿನೋದದಿಂದ ಮೈಮರೆಯುತ್ತಾನೆ.

ಬೃಹತ್ ಚೇತನವೊಂದು ಮೂಲವನ್ನು ಹೊಂದಿ ವಿವಿಧ ರೂಪಗಳನ್ನು ಕೊಟ್ಟು, ತನ್ನ ಮೂಲ ಗುಣವನ್ನು ಜಿಡದೆ ರೂಪಾಂತರಗೊಂಡರೂ ಎಲ್ಲ ರೂಪಗಳಲ್ಲೂ ತಾನೇ ಇದ್ದುಕೊಂಡು ಅನುಭವ, ಅನಂದಗಳನ್ನು, ಭಾವಗಳನ್ನು ಅನುಭವಿಸುತ್ತಾ ಆನಂದ ತನ್ಮಯನಾಗಿರುವನೇ ಪರಮಾತ್ಮ.

ಮುಕ್ತಕ 79

ಬರೆವ ಹಲಗೆಯನೊಡೆದು ಬಾಲಕನು ತಾನದನು।
ಮರಳಿ ಜೋಡಿಪೆವೆನ್ನುತಾಯಾಸಗೊಳುತ॥
ಸರಿಚೌಕಗೈವಾಟದಲಿ ಜಗವ ಮರೆವಂತೆ।
ಪರಬೊಮ್ಮ ಸೃಷ್ಟಿಯಲಿ – ಮಂಕುತಿಮ್ಮ॥

ವಿಶ್ವಲೀಲೆ ಅನ್ನುವ ಶೀರ್ಷಿಕೆಯಡಿ ಡಿ.ವಿ.ಜಿ.ಯವರು ಪರಮಾತ್ಮನ ಒಂದು ಲೀಲೆಯನ್ನು ಮುಕ್ತಕಗಳಲ್ಲಿ ದೃಷ್ಟಾಂತಗಳನ್ನು ನೀಡುತ್ತಾ ವಿವರಿಸಿದ್ದಾರೆ. ಹಿಂದೆ ಮಕ್ಕಳು ಹಲಗೆ ಬಳಪ ಬಳಸಿ ಬರೆಯುತ್ತಿದ್ದರು. ಈ ಹಲಗೆಯು ಕೆಳಗೆ ಬಿದ್ದು ಸುಲಭವಾಗಿ ಚೂರು ಚೂರಾಗಿ ಬಿಡುತ್ತಿತ್ತು. ಆ ಹಲಗೆಯನ್ನು ಬಳಪದ ಕಲ್ಲಿನಿಂದ ಮಾಡಿದುದಾಗಿತ್ತು. ಅದನ್ನು ತಿಳಿಯದ ಬಾಲಕರು ಒಡೆದಾಗ ಮನೆಯಲ್ಲಿ ಹಿರಿಯರ ಹೆದರಿಕೆಗೆ ಆ ಚೂರುಗಳನ್ನು ತಾನು ಪುನಃ ಸರಿಯಾಗಿ ಜೋಡಿಸುತ್ತೇನೆಂದು ಕುಳಿತುಕೊಳ್ಳುತ್ತಿದ್ದರು. ಅಂದರೆ ಅವರು ಆ ಹಲಗೆಯನ್ನು ಜೋಡಿಸುವುದರಲ್ಲೆ ಮಗ್ನರಾಗಿರುತ್ತಿದ್ದರು ಬೇರೆ ಪ್ರಪಂಚದ ಅರಿವು ಅವರಿಗಿರುತ್ತಿರಲಿಲ್ಲ. ಒಂದಾಗಿದ್ದ ಆ ವಸ್ತುವು ಸಿಡಿದು ಅನೇಕ ಚೂರುಗಳಾಗಿರುವಂತೆ, ಆಕಾಶ ಗಂಗೆಗಳು ನಕ್ಷತ್ರ ಪುಂಜಗಳು, ಸೌರವ್ಯೂಹಗಳು, ಗಾಳಿ, ನೀರು, ಭೂಮಿ, ಇತರೆ ಗ್ರಹಗಳು ಕೂಡ. ಈ ಗ್ರಹಗಳ ಮೇಲೆ ಕೋಟ್ಯಂತರ ವಿವಿಧತೆಯನ್ನು ಕಾಣಬಹುದು.

ಈ ಪರಮಾತ್ಮನ ಸೃಷ್ಟಿಯಲ್ಲಿ ಒಡಕಿಲ್ಲವಾದರೂ ಎಲ್ಲವೂ ಸಮರ್ಪಕವಾಗಿಯೇ ಇದ್ದರೂ ಕೂಡ ಮನುಷ್ಯನ ಅಂತರಂಗ ಮಾತ್ರ ವೈವಿಧ್ಯಮಯವಾಗಿರುತ್ತದೆ. ಆತನ ಸೃಷ್ಟಿಗೆ ಲಯಗಳನ್ನಿಟ್ಟು ಒಂದು ನಿಗದಿತ ಸಮಯಕ್ಕೆ ಜಗತ್ತು ನೋಟಕ್ಕೆ ವಿಭಿನ್ನವಾಗಿ ಕಾಣುವಂತೆ ಮತ್ತು ಆ ಬಾಲಕನು ಹಲಗೆಯನ್ನು ಚೂರು ಚೂರುಗಳನ್ನಿಡಿದು ಜೋಡಿಸಲೆಳಸುವಂತೆ ಈ ಪರಮಾತ್ಮನು ಗೋಚರಿಸುತ್ತಾನೆ. ಅಂದರೆ ಮನುಷ್ಯ ಮನುಷ್ಯರ ನಡುವೆ ಜಗಳ ಕಿತ್ತಾಟಗಳನ್ನು ಹುಟ್ಟುಹಾಕಿ ಇಂತಹವುಗಳಿಂದ ಜಗತ್ತು ಚೂರು ಚೂರಾಗುವಂತೆ ಮಾಡಲಾಗಿದೆ.

ಇಲ್ಲಿ 'ಕ್ಷಣಂ ಚಿತ್ತಂ, ಕ್ಷಣಂ ಪಿತ್ತಂ' ಎನ್ನುವಂತೆ ಮಾನಸಿಕ ಸ್ಥಿಮಿತತೆ ಇಲ್ಲದೆ ಶಾಂತಿಯೂ ಭಗ್ನವಾಗಿದೆ. ಇಂತಹ ಅಶಾಂತಿಯಿಂದ ಕೂಡಿದ ಮನಸ್ಸು ಮನಸ್ಸುಗಳ ನಡುವೆ ನಿರಂತರ ಮನಸ್ತಾಪಗಳು ನಡೆಯುತ್ತಿರುತ್ತವೆ. ಹಾಗಾಗಿ ಜಗತ್ತು ಚೂರು ಚೂರಾಗುತ್ತದೆ.

ಈ ಜಗತ್ತಿನ ಬದುಕಿನ ಚೂರುಗಳಾದ ಜಾತಿ, ಧರ್ಮ, ಮತ ಭಾಷೆ, ಲಿಂಗ ಎಂಬುವುಗಳನ್ನೆಲ್ಲ ಒಟ್ಟಾಗಿಸಿ ಇದೊಂದು ಅಖಂಡ ವಸ್ತು, ಸುಂದರವಾದದ್ದು ಎಂದು ತಿಳಿದಾಗ ಮಾತ್ರ ಈ ಜಗತ್ತಿನಲ್ಲಿ ಮನುಜರು ಸಂತಸದಿಂದ ಇರಲು ಸಾಧ್ಯ ಮತ್ತು ಈ ಜಗತ್ತಿನ ಉಳಿವು ಸಾಧ್ಯ ಎಂದು ಈ ಮುಕ್ತಕಗಳಿಂದ ಹೇಳುತ್ತಾರೆ. ಈ ರೀತಿ ಧಾರ್ಮಿಕ ವಿಷಯಗಳನ್ನು ದೈವಿಕವಾಗಿ ಮತ್ತು ಸಾಮಾಜಿಕ ಚೌಕಟ್ಟಿನೊಳಗೆ ದಾರ್ಮಿಕತೆಯೊಡಗೂಡಿದ ಅಂಶಗಳಿಂದ ಜೀವ ಜಗತ್ತಿನ ಉಳಿವು ಸಾಧ್ಯ ಎಂಬುದನ್ನು ಡಿ.ವಿ.ಜಿಯವರು ಈ ಮುಕ್ತಕಗಳ ಮುಖಾಂತರ ಹೇಳುತ್ತಾ ಹೋಗಿದ್ದಾರೆ.

[illegible]

ಸಾಮಾಜಿಕವಾಗಿ ಕಗ್ಗದ ನೋಟ

ಮುಕ್ತಕ – 9

ಏನು ಭೈರವಲೀಲೆಯೀ ವಿಶ್ವಭ್ರಮಣೆ।
ಏನು ಭೂತಗ್ರಾಮನರ್ತನೋನ್ಮಾದ॥
ಏನಗ್ನಿಗೋಳಗಳು ! ಏನಂತರಾಳಗಳು!।
ಏನು ವಿಸ್ಮಯ ಸೃಷ್ಟಿ! – ಮಂಕುತಿಮ್ಮ॥

ಏನು ಈ ಭೈರವಲೀಲೆ, ಏನು ಈ ವಿಶ್ವದ ಸುತ್ತಾಟ? ಏನು ಈ ಭೂತ ಗ್ರಾಮನರ್ತನವೋ? ಏನು ಈ ಅಗ್ನಿಗೋಳಗಳೊ ಭೂತಗ್ರಾಮವೆಂದರೆ ಇಲ್ಲಿ ನಾನಾ ಪ್ರಾಣಿಗಳ ಚೈತನ್ಯದ ಹುಚ್ಚು ನೃತ್ಯ ಸೌರವ್ಯೂಹಗಳು, ಆಕಾಶಗಂಗೆಗಳು,ಆಕಾಶಕಾಯಗಳು ಮಹಾಸ್ಫೋಟದಿಂದುಂಟಾದಂತಹವು, ಇವುಗಳು ಸ್ಫೋಟದಲ್ಲಿ ಉತ್ಪತ್ತಿಯಾಗಿದ್ದರೂ ಒಂದರೊಳಗೊಂದು ವಿಲೀನಗೊಳ್ಳುವ ಪ್ರಕ್ರಿಯೆ ಇಲ್ಲದಿಲ್ಲ, ಈ ರೌದ್ರ ನರ್ತನದೊಳಗೆ ನಮಗೆ ಅರ್ಥವಾಗದ ಅದೆಷ್ಟೋ ವಿಸ್ಮಯಗಳಿವೆ. ನಮ್ಮ ಸೌರಮಂಡಲದ ಬಗ್ಗೆ ವಿವರಗಳನ್ನೊಳಗೊಂಡಿರುವ ಈ ಮುಕ್ತಕದಲ್ಲಿ ಸೂರ್ಯನು ಭೂಮಿಯಿಂದ 152 ದಶಲಕ್ಷ ಕಿ.ಮೀ ದೂರದಲ್ಲಿದ್ದು ಅಲ್ಲಿಂದ ಹೊರಟ ಬೆಳಕು ನಮ್ಮನ್ನು ತಲುಪಲು 8.28 ನಿಮಿಷಗಳು ಬೇಕು. ಸೂರ್ಯ ಒಂದು ಬೃಹತ್ ನಕ್ಷತ್ರ ಹೀಗೆ ವಿವರಿಸುತ್ತಾ ವೈಜ್ಞಾನಿಕ ವಿವರಣೆಗಳೊಂದಿಗೆ ವಿಸ್ಮಯವನ್ನು ಜನರಿಗೆ ಅರ್ಥ ಮಾಡಿಸುವಲ್ಲಿ ಡಿ.ವಿ.ಜಿ ಮುಕ್ತಕಗಳಲ್ಲೇ ಬರೆದಿದ್ದಾರೆ. ಡಿ.ವಿ.ಜಿ ಯವರು ಈ ಮುಂದಿನ ಮಕ್ತಕಗಳಲ್ಲಿ ಮಾನವನ ಸಾಮಾಜಿಕ ಜೀವನ ಮತ್ತು ಸೃಷ್ಟಿಯ ವೈಚಿತ್ರ್ಯಗಳನ್ನು ಬರೆದಿದ್ದಾರೆ.

ಮುಕ್ತಕ 10

ಏನು ಪ್ರಪಂಚವಿದು! ಏನು ಧಾಳಾಧಾಳಿ।
ಏನದ್ಭುತಾಪಾರಶಕ್ತಿ ನಿರ್ಘಾತ॥
ಮಾನವನ ಗುರಿಯೇನು? ಬೆಲೆಯೇನು? ಮುಗಿವೇನು?
ಏನರ್ಥವಿದಕೆಲ್ಲ? ಮಂಕುತಿಮ್ಮ॥

ಈ ಪ್ರಪಂಚ ಎಂಬುದು ಏನು? ಏನು ಧಾಳಾಧಾಳಿ ಅಂದರೆ ಧಾಳಿಗಳು ಮುತ್ತಿಗೆಗಳೇನು? ಎಂತಹ ಅದ್ಭುತವಾದ ಅಪಾರವಾದ ಶಕ್ತಿ ಅಡಗಿದೆ. ಮಾನವನಾದವನ ಗುರಿಯೇನು ಮತ್ತು ಅವನ ಬೆಲೆಯೇನು ಆತನ ಅಂತ್ಯವೇನು? ಇದಕ್ಕೆಲ್ಲ ಅರ್ಥವಿದೆಯೇ? ಏನರ್ಥ ಇದಕ್ಕೆಲ್ಲಾ ಎಂಬ ಭಾವಗಳನ್ನು ಪ್ರಂಪಚದ ವಿದ್ಯಮಾನಗಳೊಂದಿಗೆ ಒಗ್ಗೂಡಿಸಿ ಪ್ರಶ್ನಾರೂಪದಲ್ಲಿ ಮಾನವನ ಪ್ರಾಪಂಚಿಕ ಜೀವನದ ಬಗ್ಗೆ ಮುಕ್ತಕಗಳನ್ನು ಬರೆದಿದ್ದಾರೆ.

ಮುಕ್ತಕ 14

ಒಂದೇ ಗಗನವ ಕಾಣುತೊಂದೆ ನೆಲವನು ತುಳಿಯು।
ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು॥
ಒಂದೆ ಗಾಳಿಯನುಸಿರ್ವ ನರಜಾತಿಯೊಳಗೆಂತು।
ಬಂದುದೀ ವೈಷಮ್ಯ ? – ಮಂಕುತಿಮ್ಮ॥

ಈ ಪ್ರಪಂಚದಲ್ಲಿರುವ ಜನಗಳೆಲ್ಲರೂ ಕೂಡ ಕುಡಿಯುವ ನೀರು, ಉಸಿರಾಡುವ ವಾಯು, ನೆಲ, ಆಕಾಶ ಎಲ್ಲವೂ ಒಂದೇ ಆಗಿದ್ದರೂ ಕೂಡ ಮನುಷ್ಯ – ಮನುಷ್ಯರ ನಡುವೆ ದ್ವೇಷ – ಅಸೂಯೆ ಕಿತ್ತಾಟ, ವಿರಸಗಳು ಏಕೆ ಇವೆಯೋ? ಈ ಮೇಲಿನವುಗಳಿಗೆಲ್ಲ ಮನುಷ್ಯನ ಆಸೆಯೇ ಕಾರಣವಾಗಿದೆ. ಈ ಮನುಷ್ಯರ ನಡುವಿನ ಸಂಘರ್ಷಗಳು ಅನಾದಿಕಾಲದಿಂದಲೂ ಇದ್ದೇ ಇರುವಂತಹವುಗಳಾಗಿವೆ. ಗುಂಪುಗಳ ನಡುವೆ, ದೇಶ–ದೇಶಗಳ ನಡುವೆ, ರಾಜ್ಯ–ರಾಜ್ಯಗಳ ನಡುವೆ, ಅಣ್ಣ–ತಮ್ಮಂದಿರ ನಡುವೆ ದ್ವೇಷವುಂಟಾಗಿ ಜಗಳಗಳು ಉಂಟಾಗಿ ಹೊಡೆದಾಟಕ್ಕೆ ಎಡೆಮಾಡಿಕೊಡುತ್ತದೆ. ಇವುಗಳಿಗೆ ಎಲ್ಲಕ್ಕೂ ಮೂಲ ಒಂದೇ ಆದ ನೆಲ, ಜಲ, ಆಕಾಶ, ಅದರೂ ಇವುಗಳಿಗೋಸ್ಕರವೇ ಹೋರಾಟಗಳು ನಡೆಯುತ್ತಿವೆ. ಇಂದು ಶೇ 90ರಷ್ಟು ಕಿತ್ತಾಟಗಳು ಕೋರ್ಟ್‌ನ ಕಟಕಟೆ ಹತ್ತುತ್ತಿರುವುದು ನೆಲಕ್ಕಾಗಿ ಹೊಡೆದಾಡುವವೆ ಆಗಿವೆ.

ಇರುವುದರಲ್ಲೆ ತೃಪ್ತಿ ಹೊಂದದಿರುವುದು ಮನುಷ್ಯನಿಗೆ ದೌರ್ಬಲ್ಯವಾಗಿದೆ. ಮನುಷ್ಯನ ಆಸೆಗೆ ಮಿತಿಯೇ ಇಲ್ಲ ಜೀವನಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಪಡೆದು ಜೀವಿಸುವ ತೃಪ್ತ ಜೀವನ ಮನುಷ್ಯನಿಗಿಲ್ಲ. ಇಲ್ಲಿ ದೇವರು ಮನುಷ್ಯನಲ್ಲಿ ಅತಿ ಅಸೆಯನ್ನು ಕೊಟ್ಟು ಆತನ ಭೂಮಿಯ ಮೇಲಿನ ಜೀವನ ನಾಟಕಗಳನ್ನು ನೋಡುತ್ತಿರುತ್ತಾನೆ, ಮನುಷ್ಯನು ಈ ಭೂಮಿಯ ಮೇಲೆ ಶಾಶ್ವತವಾಗಿ ಬದುಕುಳಿಯುವುದಿಲ್ಲ ಎಂದು ಗೊತ್ತಿದ್ದರೂ ಕೂಡ ಎಲ್ಲದೂ ಕೂಡ ತನಗೆ ಬೇಕೆಂದು ಆಸೆಯಿಂದ ಹೋರಾಟ ಮಾಡುತ್ತಾನೆ. ಕೊನೆಗೆ ಸಾವು ಬಂದರೂ ತಾನು ಗಳಿಸಿದ ಆಸ್ತಿ ಅಂತಸ್ತುಗಳನ್ನು ಕೊಂಡೊಯ್ಯಲು ಕೂಡ ಸಾಧ್ಯವಿಲ್ಲವೆಂದರೂ ಕೂಡ ಜಗಳ, ಹೋರಾಟ, ಯುದ್ಧಗಳಿಂದ ಸಂಪಾದಿಸುವುದನ್ನು ಬಿಡಲ್ಲ.

ಮನುಷ್ಯರೆಲ್ಲರೂ ಒಂದೇ ಅಗಿರುವಾಗ ಮತ್ಯಾಕೆ ಜಗಳ ವೈಷಮ್ಯಗಳು ತಲೆದೋರುತ್ತವೆ. ಮನುಷ್ಯರು ಜಾತಿ, ಮತ, ಭಾಷೆ, ಪ್ರಾಂತ, ದೇಶಗಳ ಬಗೆಗೆ ಅತಿ–ಆಸೆ ಹೊಂದಿ ಬೇಲಿಗಳನ್ನು ಹಾಕಿಕೊಂಡು ಅದು ನನ್ನದು ಇದು ನಿನ್ನದು ಎನ್ನುವ ದ್ವೇಷಾಸೂಯೆಗಳ ವಿಷವರ್ತುಲವೇ ಇದಕ್ಕೆಲ್ಲ ಕಾರಣ ಮನುಷ್ಯನ ಆಸೆಗೆ ಒಂದು ಮಿತಿ ಎನ್ನುವುದಿದ್ದರೆ ಮಾನವನಿಗೆ ತೃಪ್ತಿ ಎನ್ನುವುದು ಇರುತ್ತಿತ್ತು. ಆಗ ಮಾನವ ಸಮಾಜದ ಶಾಂತಿ ನೆಮ್ಮದಿಯಿಂದ ಕೂಡಿರುತ್ತಿತ್ತು.

ಮುಕ್ತಕ 18

ನದಿಯ ತೆರೆಯವೊಲುರುಳಿ ಹೊರಳುತಿರುವುದು ಜೀವ।
ಮೊದಲಿಲ್ಲ ಮುಗಿದಿಲ್ಲ ನಿಲುವಿಲ್ಲವದಕೆ॥
ಬದುಕೇನು ಸಾವೇನು ಸೊದೆಯೇನು ವಿಷವೇನು?।
ಉದಕಬುದ್ಬುದವೆಲ್ಲ!– ಮಂಕುತಿಮ್ಮ॥

ಈ ಜೀವವು ನದಿಯಂತೆ ಕೆರೆಯಂತೆ ಉರುಳಿ ಹೊರಳುತ್ತಿರುತ್ತದೆ. ಸದಾ ಅದಕ್ಕೆ ಆರಂಭವಿಲ್ಲ, ಕೊನೆಯಿಲ್ಲ, ನಿಲುವು ಅನ್ನುವುದಿಲ್ಲ. ಮನುಷ್ಯನ ಜೀವನವು ಒಂದೇ ತೆರನಾಗಿರುವುದಿಲ್ಲ. ಈ ಜನ್ಮದಲ್ಲಿ ಮನುಷ್ಯರಾಗಿ ಹುಟ್ಟಿರುವ ನಾವು ಮುಂದೆ ಏನಾಗುತ್ತೇವೆಯೋ? ಹಿಂದೆ ಕೂಡ ಏನಾಗಿದ್ದೇವೋ ಎಂದು ಯಾರಿಗೂ ತಿಳಿಯದ ವಿಷಯ. ಮನುಷ್ಯ ಜನ್ಮ ತಳೆಯಬೇಕಾದರೆ ಹಿಂದೆ ಅನೇಕ ರೀತಿಯ ಜನ್ಮ ತಳೆದು ಆನಂತರ ಮನುಷ್ಯರಾಗಿರುತ್ತಾರೆ.

ಬದುಕು ಎಂದರೆ ಏನು ಎಂದು ಯಾರಿಗೂ ತಿಳಿಯದ ಒಂದು ಒಗಟು ಇಲ್ಲಿ ಸಾವು ಹೊಂದುವ ವ್ಯಕ್ತಿಯು ಸಾವು ಎಂದರೇನು ಎಂಬುದೇ ತಿಳಿಯದಾಗಿರುವ ಸ್ಥಿತಿಯಲ್ಲಿರುತ್ತಾನೆ. ಅಂದರೆ ಇಲ್ಲಿ ಸಾವು ಎಂದರೆ ಮೂರ್ತರೂಪದ ಶರೀರದಿಂದ ಆತನ ಉಸಿರಾಟ ನಿಲ್ಲುವುದೇ ಆಗಿದೆ.

ಮುಕ್ತಕ 174

ತಂದೆ ಮಕ್ಕಳಿಗೆ ಹದಗೆಟ್ಟುದನು ಕಾಣೆಯಾ?।
ಹೊಂದಿರುವರವರ್ ಅಹಂತೆಯು ಮೊಳೆಯುವೇನಕ॥
ತಂದೆಯಾರ್ ಮಕ್ಕಳಾರ್ ನಾನೆಂಬುದೆದ್ದು ನಿಲೆ?।
ಬಂಧ ಮುರಿವುದು ಬಳಿಕ – ಮಂಕುತಿಮ್ಮ॥

ಇಂದಿನ ಸಮಾಜಕ್ಕೆ ತಂದೆ ಮಕ್ಕಳ ಬಾಂಧವ್ಯದ ಪ್ರಾಮುಖ್ಯತೆಯನ್ನು ತಿಳಿಸಿ ಹೇಳುವ ಒಂದು ಸುಂದರವಾದ ಮುಕ್ತಕವಿದು ಇಂದಿನ ಸಮಾಜದಲ್ಲಿ ಮಕ್ಕಳು ತಂದೆ–ತಾಯಿಯರ ಬಗ್ಗೆ ಒಂದು ಮೌಲ್ಯಯುತವಾದ ಬಾಂಧವ್ಯವನ್ನು ಹೊಂದಿಲ್ಲ ಈಗಿನ ಮಕ್ಕಳು ಜೀವನದ ಮೌಲ್ಯಗಳಿಗೆ ಬೆಲೆಕೊಡದೆ ಸಮಾಜಘಾತುಕ ಶಕ್ತಿಗಳಾಗುತ್ತಿದ್ದಾರೆ. ಈ ಮುಕ್ತಕದಲ್ಲಿ ತಂದೆ ಮಕ್ಕಳ ಸಂಬಂಧ ಹೇಗಿದ್ದರೂ ಆಸ್ತಿಯ ವಿಷಯಕ್ಕೆ, ದುಡ್ಡು ಅಂತಸ್ತಿಗಾಗಿ ಸಂಬಂಧ ಹಳಸುವುದನ್ನು ಕಾಣಬಹುದು. ಇಲ್ಲಿ ಯಾರದೇ ಮನಸ್ಸಿನಲ್ಲಿ ಅಹಂಕಾರ ಎದ್ದು ನಿಂತರೆ ಎಂತಹ ಸಂಬಂಧಗಳು ಮೌಲ್ಯ ಕಳೆದುಕೊಳ್ಳುತ್ತವೆ ಎನ್ನುತ್ತಾರೆ ಡಿ.ವಿ.ಜಿ ಅಹಂಕಾರದಿಂದ ಸಂಬಂಧಗಳು ಮುರಿದು ಬೀಳುವುದನ್ನು ಈ ಮುಕ್ತಕದಲ್ಲಿ ಉಲ್ಲೇಖಿಸಿದ್ದಾರೆ. ಸಮಾಜದಲ್ಲಿನ ಜನರು ಒಂದಿಲ್ಲೊಂದು ಕಾರಣದಿಂದ ಮನೋಕ್ಷೋಭೆಯಿಂದ ಬಳಲುವವರೇ ಆಗಿದ್ದಾರೆ, ಮತ್ತು ಅನಾರೋಗ್ಯಪೀಡಿತರೂ ಅಗಿದ್ದಾರೆ, ಇದಕ್ಕೆಲ್ಲಾ ಕಾರಣ ಈಗಿನ ಸಾಮಾಜಿಕ ವ್ಯವಸ್ಥೆ ಮತ್ತು ಜಂಜಡಗಳು ಹೀಗಾಗಿ ಮನುಷ್ಯ ತನ್ನ ಶಾಂತಿ ನೆಮ್ಮದಿ, ಸಂತೋಷವನ್ನು

[illegible]

[illegible]

[illegible]

[illegible]

ಕಳೆದುಕೊಂಡು ಅತ್ಯಂತ ಸಂಕೀರ್ಣ ಮನೋಸ್ಥಿತಿಯವನಾಗುತ್ತಿದ್ದಾನೆ. ಇದರಿಂದಾಗಿ ಮನೋವಿಕಾಸ ಕೇಂದ್ರಗಳು, ಆಸ್ಪತ್ರೆಗಳು, ಎದ್ದು ನಿಲ್ಲುತ್ತಿವೆ. ಇಲ್ಲಿ ತಂದೆ–ತಾಯಿ ಮಕ್ಕಳ ನಡುವಿನ ಸಂಬಂದಗಳು ಅಕ್ಕ–ತಂಗಿಯರ ಅಣ್ಣ–ತಮ್ಮಂದಿರ ನಡುವಿನ ಸಂಬಂಧಗಳು ಮೌಲ್ಯ ಕಳೆದುಕೊಳ್ಳುತ್ತಿವೆ.

*12. ಹಿಂದಿನ ಕಾಲದಂತೆ ಹಲ್ಲು ಕಚ್ಚಿಕೊಂಡು ಸಹಿಸಿಕೊಂಡು ಹೋಗುವ ತಾಳ್ಮೆ ಇಂದಿನವರಿಗೆ ಇಲ್ಲವಾದ್ದರಿಂದ ಅಪ್ಪ–ಅಮ್ಮ ಮತ್ತು ಮಕ್ಕಳ ಪರಸ್ಪರ ಸಂಬಂಧಗಳು ಹದಗೆಡುತ್ತಿವೆ. ಅವಿಭಕ್ತ ಕುಟುಂಬಗಳಲ್ಲಿ ಇರಬೇಕಾದರೆ, ನಿಸ್ವಾರ್ಥ, ಸಹನೆ ಒಪ್ಪಿಕೊಳ್ಳುವಿಕೆ, ಅಪ್ಪಿಕೊಳ್ಳುವಿಕೆ, ಬಿಟ್ಟುಕೊಡುವಿಕೆ ಮುಂತಾದ ಗುಣಗಳು ಸದಸ್ಯರೆಲ್ಲರಲ್ಲೂ ಇರಬೇಕು. ಅದು ಇಲ್ಲದಿದ್ದರೆ ದೂರ ಸರಿಯುವುದು ಸಹಜ. ಆ ತಂದೆ ತಾಯಿಗಳೂ ಸಹ ನಮಗೆ ವಯಸ್ಸಾಯಿತು, ಇನ್ನು ನಾವು ಸಾಧಿಸುವುದೇನು ಇಲ್ಲ ಮಕ್ಕಳ ಸಂತೋಷಕ್ಕಾಗಿ ಇನ್ನು ಶ್ರೇಷ್ಠ ಜೀವನವನ್ನು ಶಾಂತಿಯಿಂದ ಕಳೆದರೆ ಸಾಕು ಎಂದು ತಮ್ಮ 'ಅಹಂ' ಬಿಟ್ಟು ಬಾಳಿದರೆ ಮಕ್ಕಳೂ ಸಹ ಆ ತಂದೆ ತಾಯಿಯರ ಮೇಲೆ ಪ್ರೀತಿ ವಿಶ್ವಾಸವನ್ನು ಬೆಳೆಸಿಕೊಂಡು ಅವರ ಅಂತ್ಯ ಕಾಲದವರೆಗೆ ಅವರನ್ನು ಚೆನ್ನಾಗಿ ನೋಡಿಕೊಳ್ಳುವ ಸಾಧ್ಯತೆ ಇದೆ ಇಲ್ಲದಿದ್ದರೆ, ಅಹಂಕಾರದ ಹಗ್ಗವನ್ನು ಇಬ್ಬರೂ ಕಟ್ಟಿಕೊಂಡು "ನಾ ಹೆಚ್ಚೋ ನೀ ಹೆಚ್ಚೋ" ಎಂದು ಎಳೆದಾಡಿದರೆ ಬಂಧನವು ಮುರಿದು ಬೀಳುವುದು ಖಂಡಿತ.*12

ಮಕ್ಕಳು ಪೋಷಕರನ್ನು ಇವರು ನಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿದವರು ನಾವಿಂದು ಹೀಗೆ ಸುಖ ಸಂತೋಷದಿಂದ ಇರಲು ಕಾರಣಕರ್ತರು ಎಂಬುದನ್ನು ಅರಿತು ಬಾಳುವ ಒಂದು ವ್ಯವಧಾನತೆಯನ್ನು ಉಳಿಸಿಕೊಂಡಲ್ಲಿ ಮಾತ್ರ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಯಶಸ್ವಿಯಾಗುತ್ತಾರೆ. ತಂದೆತಾಯಿಗಳು ಸಹ ಹೊಸ ಪೀಳಿಗೆಯ ಮಕ್ಕಳು ಮನಸ್ಸಿಗೆ ತಕ್ಕಂತೆ ಇರಬೇಕಾಗುತ್ತದೆ. Generation-gap ನ ವ್ಯತ್ಯಾಸದಿಂದ ಇಂತಹ ಪರಿಸ್ಥಿತಿಗಳು ಬರುತ್ತವೆ. ನಮ್ಮ ಕಾಲ ಮುಗಿಯಿತು ಇನ್ನು ಮಕ್ಕಳ ಸಂತೋಷವೇ ನಮ್ಮ ಸಂತೋಷ ಎಂದು ಅವರ ಸಂತೋಷದಲ್ಲಿ ಇವರ ಸಂತೋಷವನ್ನು ಕಂಡುಕೊಂಡು ಸಾವಿನಂಚಿನವರೆಗೆ ಸುಖಜೀವನ ನಡೆಸುವ ಮಾರ್ಗವನ್ನು ಕಂಡುಕೊಳ್ಳಬೇಕಾಗಿರುತ್ತದೆ. ಇದರಿಂದ ಇಬ್ಬರ ಸಂಬಂಧಗಳು ಮತ್ತು ಪ್ರೀತಿ ವಿಶ್ವಾಸಗಳು ಚೆನ್ನಾಗಿಯೇ ಇರುತ್ತವೆ.

ಇಂದು ಅವಿಭಕ್ತ ಕುಟುಂಬಗಳು ಒಡೆದು ವಿಭಕ್ತ ಕುಟುಂಬಗಳಾಗಿ ಮಾರ್ಪಡುತ್ತವೆ. ಕಾರಣ ಈ ಸಂಬಂಧಗಳಲ್ಲಿನ ಒಡಕುಗಳೇ ಕಾರಣ ಕೆಲವರ ಧೋರಣೆಗಳು ದೂರವಿದ್ದೇ ಪ್ರೀತಿ–ವಿಶ್ವಾಸದಿಂದ ಇರೋಣ ಎಂದು ಮತ್ತು ಕೆಲವರು ನಮ್ಮ ಜೀವನ ನಾವು ನೋಡಿಕೊಂಡರೆ ಸಾಕಾಗಿದೆ ಎನ್ನುವವರು ಕೆಲವರು. ಇಂತಹ ಸಾಮಾಜಿಕ ವಾತಾವರಣ ಬದಲಾಗಬೇಕು. ಆಗ ಮಾತ್ರ ಸಮಾಜದ ಶಾಂತಿ, ನೆಮ್ಮದಿ ವಾತಾವರಣ ಕಾಪಾಡಲು ಸಾಧ್ಯ.

ಮುಕ್ತಕ 175

ಕಾಂಕ್ಷೆಗಳ ಬೋಧಿಸುವ ಬಂಧುಸಖರುಪಕಾರ।
ಯಕ್ಷಿಯರು ಮ್ಯಾಕ್‌ಬೆತನಿಗೆಸಗಿದುಪದೇಶ॥
ಉತ್ಸಾಹವಿದ್ದೇನು? ವಾತ್ಸಲ್ಯವಿದ್ಧೇನು?।
ಅಕ್ಷಿ ನಿರ್ಮಲವೇನೋ? – ಮಂಕುತಿಮ್ಮ॥

ಅಡಿ ಟಿಪ್ಪಣಿ *12 ಕಗ್ಗರಸಧಾರೆ – ಲೇ – ರಪಿ ತಿರುಮಲೈ – ಪುಟ ಸಂ.241. ಸಂಪುಟ–1. 2ನೇ ಪ್ಯಾರ

ನಮ್ಮಲ್ಲಿ ಆಸೆ ಆಕಾಂಕ್ಷೆಗಳನ್ನು ಹುಟ್ಟಿಸುವ ಬಂಧು ಸ್ನೇಹಿತರುಗಳ ಉಪಕಾರಗಳು, ಯಕ್ಷಿಯರು ಮ್ಯಾಕ್‌ಬೆತ್ ದೊರೆಗೆ ಕೊಟ್ಟ ಉಪದೇಶಗಳಂತೆ, ಎಷ್ಟು ಉತ್ಸಾಹವಿದ್ದರೇನು? ಅಥವಾ ವಾತ್ಸಲ್ಯವಿದ್ದರೇನು? ಎಂದು ಮತ್ತು ನಮ್ಮನ್ನು ನೋಡುವ ಕಣ್ಣುಗಳು ನಿರ್ಮಲವೇನೊ ಅಲ್ಲದಿದ್ದರೆ ಕೆಡಕಾಗುವುದು ಖಚಿತ ನಮ್ಮಲ್ಲಿ ಆಸೆ, ಪ್ರಲೋಭನೆಗಳನ್ನು ಹುಟ್ಟಿಸಿ ಜೀವನವನ್ನು ಅಧಃಪತನಕ್ಕೆಳಸುವ ಒಂದು ಪರಿ. ಇಲ್ಲಿ ಡಿ.ವಿ.ಜಿಯವರು ಆಂಗ್ಲ ನಾಟಕಕಾರ ಷೇಕ್ಸ್‌ಪಿಯರ್‌ನ ಒಂದು ದುರಂತ ನಾಟಕವಾದ ಮ್ಯಾಕ್‌ಬೆತ್ ನಾಟಕದ ಸನ್ನಿವೇಶವನ್ನು ಉಲ್ಲೇಖಿಸಿದ್ದಾರೆ. ಇಲ್ಲಿ ರಾಜ ಡಂಕೆನ್‌ನನ್ನು ಕೊಂದು ತಾನೇ ರಾಜನಾಗುವ ಒಂದು ಪಿತೂರಿ ನಡೆಯುತ್ತದೆ. ಇದರಿಂದಾಗಿ ಅತ್ಯಂತ ತೊಂದರೆಗೆ ಸಿಲುಕಿಕೊಳ್ಳುತ್ತಾರೆ. ಮನುಷ್ಯನ ಜೀವನದಲ್ಲಿ ಯಾರಾದರೊಬ್ಬರು ಸಲಹೆ ಕೊಡುವವರು ಇದ್ದೇ ಇರುತ್ತಾರೆ. ಅವಶ್ಯಕತೆ ಇದೆಯೋ ಇಲ್ಲವೋ ಆದರೂ ಸಲಹೆಯನ್ನಂತೂ ಕೊಡುತ್ತಾರೆ. ಅಂತಹ ಹಗುರವಾದ ಸಲಹೆಗಳನ್ನು ಕೇಳುತ್ತಾ ಹೋದರೆ ತೊಂದರೆಗೆ ಸಿಲುಕುವುದು ಖಚಿತ. ಯಾರೂ ಏನೇ ಸಲಹೆ ಸೂಚನೆಗಳನ್ನು ಕೊಟ್ಟರೂ ಕೂಡ ನಮ್ಮದೇ ಆದ ನಿಲುವನ್ನು ತಳೆಯಬೇಕು. ಇವರ ಸಲಹೆ ಸೂಚನೆಗಳನ್ನು ಕೇಳಿದಾಗ ಒಮ್ಮೊಮ್ಮೆ ಒಳ್ಳೆಯದು ಆಗಬಹುದು. ಆಗದೇ ಇರಬಹುದು.

ಮುಕ್ತಕ 176

ಇಂಗಿತ ಜ್ಞಾನವಿಲ್ಲದ ಬಂಧುಪರಿವಾರ।
ಹಂಗಿಸುವ ಛಲವುಳ್ಳ ಸತಿಪುತ್ರಸಖರು॥
ಬಂಗಾರದಸಿ ಚುಚ್ಚೆ ಸಿಂಗರದ ಬೊಟ್ಟೆನುವ।
ಮಂಗ ಬುದ್ಧಿಯ ಜನರು – ಮಂಕುತಿಮ್ಮ॥

ಮತ್ತೊಬ್ಬರ ಮನಸ್ಸಿನಲ್ಲಿ ಏನಿದೆಯೆಂಬುದು ಯಾರಿಗೂ ತಿಳಿಯದ ಸತ್ಯ ವ್ಯರ್ಥವಾಗಿ ಬುದ್ಧಿವಾದವನ್ನು ಹೇಳುವ ಬಂಧುಗಳು ಮತ್ತು ಪರಿವಾರದವರು ನಮ್ಮನ್ನು ಹಂಗಿಸುವುದೇ ಆಗಿರುತ್ತದೆ. ಚಿನ್ನದ ಕತ್ತಿಯಲ್ಲಿ ನಮ್ಮನ್ನು ಚುಚ್ಚಿ ಅದು ಅಲಂಕಾರದ ತಿಲಕ ಎಂದು ನಂಬಿಸುವ ಮಂಗಬುದ್ಧಿಯ ಜನರು ಇವರು ಎಂದು ಡಿ.ವಿ.ಜಿ ಯವರು ಹೇಳುತ್ತಾರೆ. 'ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ' ಎಂಬ ಉಕ್ತಿಯಂತೆ ತಮ್ಮನ್ನು ಇನ್ನೊಬ್ಬರ ಸ್ಥಾನದಲ್ಲಿ ಇಟ್ಟು ನೋಡಿದರೆ ಕೊಡುವ ಸಲಹೆ ಸೂಚನೆಗಳು ಬದಲಾಗಬಹುದು ಆದರೂ ಇನ್ನೊಬ್ಬರು ನೀಡುವ ಸಲಹೆ ಸೂಚನೆಗಳನ್ನು ಎಷ್ಟು ಬೇಕೋ ಅಷ್ಟು ಮಾತ್ರ ತೆಗೆದುಕೊಂಡು ಉಳಿದದ್ದನ್ನು ನಿರ್ಲಕ್ಷಿಸುವುದು ಒಳ್ಳೆಯದು. ಏಕೆಂದರೆ ಅವರವರ ದೃಷ್ಟಿಯಲ್ಲಿ ನೀಡಿರುವ ಸಲಹೆ ಸೂಚನೆಗಳು ಅವರವರ ಮೂಗಿನ ನೇರಕ್ಕೆ ಇರುತ್ತವೆ. ಇಂತಹವರ ಸಲಹೆ ಸೂಚನೆಗಳನ್ನು ಕೇಳುವ ಸಂದರ್ಭದಲ್ಲಿ ಸಮಾಧಾನದಿಂದಲೇ ಇರಬೇಕು. ಯಾವುದಕ್ಕೂ ನಾವು ತಲೆಕೆಡಿಸಿಕೊಳ್ಳಬಾರದು.

[illegible]

ಮುಕ್ತಕ 177

ಬಂಧುವುಂ ಮಿತ್ರನುಂ ಭೃತ್ಯಮಂ ಶತ್ರುವೊಲೆ।
ದಂಡಧರನೋಲಗಕೆ ನಿನ್ನನೆಳೆವವರೋ॥
ಅಂದದೊಡವೆಯ, ಮೊನೆಗಳಿಂದೆದೆಯನೊತ್ತುವಾ।
ಮಂದಹಸಿತದ ಕೊಲೆಯೊ – ಮಂಕುತಿಮ್ಮ।

ಬಂಧುಗಳು, ಮಿತ್ರರು, ಸೇವಕರು ಶತ್ರುಗಳಂತೆ ಯಮನ ಸಭೆಗೆ ನಮ್ಮನ್ನು ಎಳೆದೊಯ್ಯುವಂತೆ ಅತ್ಯಂತ ಸುಂದರವಾದ ಒಡವೆಗಳಿಂದ ಅವುಗಳ ಮೊನೆಯಿಂದ ಎದೆಯನ್ನು ಒತ್ತುವ ರೀತಿ ಅವರ ವರ್ತನೆ ಇರುತ್ತದೆ. ಯಾರು ನಮಗೆ ಮಿತ್ರರಂತೆ ಕಂಡರೂ ಕೂಡ ವಾಸ್ತವಿಕವಾಗಿ ತಮ್ಮ ತಮ್ಮ ಬೇಳೆ ಬೇಯಿಸಿಕೊಂಡಿರುತ್ತಾರೆ.

*13 ತೈತ್ತರೀಯ ಉಪನಿಷತ್ತು ಅನ್ಯರಿಗೆ ಯಾವುದಾದರೂ ಒಂದು ವಸ್ತುವನ್ನೊ ಸಲಹೆಯನ್ನೋ ಸಹಾಯವನ್ನು ಕೊಡುವ ಅಥವಾ ಮಾಡುವ ವಿಷಯದಲ್ಲಿ ಹೀಗೆ ಹೇಳುತ್ತದೆ. ಶ್ರದ್ಧೆಯಿಂದ ಕೊಡು, ಒಳ್ಳೆಯದನ್ನೆ ಕೊಡು, ಹೃತ್ಪೂರ್ವಕವಾಗಿ ಕೊಡು, ಸಂಪೂರ್ಣವಾಗಿ ಕೊಡು, ಹೆದರಿಕೆಯಿಂದ ಕೊಡು, ಹಾಗೆ ಏನು ಕೊಡುವುದು ಎಂದು ಅನುಮಾನ ಬಂದಾಗ, ಪ್ರಾಜ್ಞರನ್ನು ಕೇಳಿ ಯೋಗ್ಯವಾದ ವಸ್ತುವನ್ನು ಕೊಡು" ಎಂದು ಹೇಳುತ್ತದೆ.

ಈ ರೀತಿ ಯೋಚನೆ ಮಾಡಿ, ಒಳ್ಳೆಯ ಉಪಕಾರವನ್ನು ಮಾಡುವವರು ಇಂದು ಯಾರು ಇದ್ದಾರೆ ಹೇಳಿ? ಒಂದು ಕಾಲಕ್ಕೆ "ಪರೋಪಕಾರಂ ಇದಂ ಶರೀರಂ ಎನ್ನುತ್ತಿದ್ದರು. ಈಗಿನ ಕಾಲಕ್ಕೆ ಪರಾಪಕಾರಂ ಇದಂ ಶರೀರಂ" ಎಂದು ಬದಲಾಯಿಸಿಕೊಳ್ಳುವ ಸ್ಥಿತಿ ಬಂದಿದೆ. ಇಂತಹ ಸ್ಥಿತಿಯಲ್ಲಿ ನಾವು ಪರರಿಂದ ಉಪಕಾರದ ಅಪೇಕ್ಷೆ ಪಡೆದಂಥಾ ಸ್ಥಿತಿಯನ್ನು ಕರುಣಿಸು ದೇವಾ!॥" ಎಂದು ಬೇಡುವುದೇ ಒಳ್ಳೆಯದು.*13

ಮುಕ್ತಕ 178

ದ್ವೇಷ ದೋಷಗಳವೊಲೆ ನೇಹಮುಂ ಮೋಹಮುಂ।
ಪಾಶವಾಗಲ್ಬಹುದು ನಿನಗೆ ಮೈ ಮರೆಸಿ॥
ವಾಸನೆಗಳುರುಬಿ ಚಿತ್ತ ಜ್ವರಂಗಳ ಬಿತ್ತಿ।
ಮೋಸದಲಿ ಕೊಲ್ಲುವವೋ – ಮಂಕುತಿಮ್ಮ॥

ಈ ಜಗತ್ತಿನ ಸಂಬಂಧಗಳು ದ್ವೇಷರೋಷ, ಪ್ರೀತಿ, ಪ್ರೇಮ ಮೋಹದಿಂದ ಕೂಡಿದ್ದು, ನಿನ್ನ ಮೈ ಮರೆಸಿ ಅಂಟಿಕೊಳ್ಳುವ ಗುಣಗಳು ಉಕ್ಕಿ ಹರಿದು ಮನಸ್ಸಿನ ಜ್ವರ ಅಂದರೆ ತಾಪವನ್ನು ಉಂಟು ಮಾಡಿ ನಮಗರಿವಿಲ್ಲದಂತೆಯೇ ಮೋಸದಿಂದ ಕೊಲ್ಲುವುವೇ ಆಗಿವೆ ಎನ್ನುತ್ತಾರೆ ಡಿ.ವಿ.ಜಿ.

ನಾವು ಎಲ್ಲರನ್ನೂ ಪ್ರೀತಿಸುವುದಕ್ಕೆ ಹೋಗುವುದಿಲ್ಲ, ಎಲ್ಲರನ್ನೂ ದ್ವೇಷಿಸುವುದಿಲ್ಲ. ಒಟ್ಟಾರೆಯಾಗಿ ಒಬ್ಬರಿಗೊಬ್ಬರು ಭಾವನಾತ್ಮಕವಾದ ಬಂಧನವನ್ನು ಬಿಗಿದುಕೊಳ್ಳುತ್ತ ಹೋಗುತ್ತೇವೆ. ಧೀರ್ಘಕಾಲದವರೆಗೂ ಉಳಿಯುವ ಸ್ನೇಹ ಸಂಬಂಧಗಳೂ ಇರುತ್ತವೆ. ಅಲ್ಪಕಾಲದಲ್ಲಿಯೇ ಮುಗಿಯುವ ಸಂಬಂಧಗಳೂ ಇರುತ್ತವೆ. ಇಲ್ಲಿ ಅನಿವಾರ್ಯ ಸಂಬಂಧಗಳು ಮನುಷ್ಯನಿಗೆ ಹುಟ್ಟಿನಿಂದ ಮರಣದ ತನಕವೂ ಬೇಕಾಗುತ್ತದೆ. ಬೇಕಿದ್ದೊ ಬೇಕಿಲ್ಲವೋ ಈ ಸಂಬಂಧಗಳ ಕೊಂಡಿಯಂತೂ ತಗುಲಿಹಾಕಿಕೊಂಡೇ ಇರುತ್ತದೆ.ಅಡಿ ಟಿಪ್ಪಣಿ

*13 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.245. ಸಂಪುಟ–1.

ನಮ್ಮ ಭಾವನಾತ್ಮಕ ಸ್ನೇಹಗಳಿಂದಾಗಿ ಸಂಬಂಧಗಳು ಬೆಸದುಕೊಂಡು ನಮ್ಮ ಮನಸ್ಸು ಬುದ್ಧಿಗಳ ಮೇಲೆ ಪರಿಣಾಮ ಬೀರುವತ್ತಾ ಯೋಚನೆಗಳು ಆವರಿಸಿಕೊಂಡು ಬಿಡುತ್ತವೆ. ಆ ಕಾರಣದಿಂಗಾಗಿ ನಮ್ಮನ್ನು ಒಂದು ಕೋತಿಯಂತೆ ಆಟ ಆಡಿಸುವ ಸಾಧ್ಯತೆಗಳೂ ಇರುತ್ತವೆ. ತಲೆ ಕೆಡಿಸಿ ಹುಚ್ಚು ಹಿಡಿಸುತ್ತವೆ. ಈ ಪ್ರಪಂಚದಲ್ಲಿ ಬೆರಳೆಣಿಕೆಯಷ್ಟು ಮಂದಿಗೆ ಮಾತ್ರ ಸಾರ್ಥಕ್ಯ ಜೀವನ ನಡೆಸುವ ಭಾಗ್ಯವಿದೆ.

ಮುಕ್ತಕ 179

ಕರುಮ ಬಂದಿದಿರಬಹುದು ಮೋಹನದ ರೂಪಿನಲಿ।
ಕಿರುನಗುವುನ ಕುಡಿ ನೋಟ ಕೊಂಕು ನುಡಿಗಳಲ್ಲಿ॥
ಕರೆದು ತಳ್ಳುವ, ತಳ್ಕರಿಸುತೊಳಗೆ ಕಿಚ್ಚಿಡುವ।
ತರಳತೆಯದೇಂ ತಂತ್ರ? – ಮಂಕುತಿಮ್ಮ॥

ನಮ್ಮ ಎದುರಿನಲ್ಲಿ ಕರ್ಮ ಎಂಬುದು ಒಂದು ಮೋಹಕ ರೂಪದಲ್ಲಿ ನಮ್ಮನ್ನು ಕಾಡುತ್ತದೆ. ಕಿರುನಗೆ, ಕುಡಿನೋಟ, ಕೊಂಕುನುಡಿಗಳು, ನಮ್ಮನ್ನು ಆಕರ್ಷಿಸಿ, ತಬ್ಬಿಕೊಳ್ಳುವ, ನಂತರ ಬೆಂಕಿಯಿಡುವಂತಹ ತರಳತೆ ಅಂದರೆ ಚಪಲತೆಯ ಉಪಾಯವೇ ತಿಳಿಯದಾಗಿದೆ. ನಮ್ಮ ಕರ್ಮವೆಂಬುದು ನಮ್ಮನ್ನು ಈ ಜಗತ್ತನ್ನು ಪ್ರೀತಿಸುವಂತೆ ಆಕರ್ಷಿಸುತ್ತದೆ. ನಮ್ಮ ಪೂರ್ವಜನ್ಮದ ಕರ್ಮಗಳನ್ನು ಕಳೆಯಲೆಂದೇ ಈ ಜಗತ್ತಿಗೆ ಬರುತ್ತೇವೆ. ಅಂದರೆ ಅದರ ಕರ್ಮವೇ ಈ ಜಗತ್ತಿನಲ್ಲಿ ಆಸೆ ಮತ್ತು ಆಸ್ಥೆಯನ್ನು ಮನಸ್ಸಿನಲ್ಲಿ ಉಂಟು ಮಾಡಿ, ಈ ಜಗತ್ತಿನೊಂದಿಗೆ ನಂಟನ್ನೂ ನಮಗೆ ಮೋಹವನ್ನು ಉಂಟು ಮಾಡುತ್ತದೆ. ಈ ಜಗತ್ತಿನಲ್ಲಿ ಜನರ ಸಂಬಂಧಗಳು ಒಮ್ಮೊಮ್ಮೆ ಅಂಟಿಕೊಳ್ಳುತ್ತವೆ. ಇನ್ನು ಕೆಲವೊಮ್ಮೆ ವ್ಯಕ್ತಿಗಳೊಂದಿಗೆ ಆಕರ್ಷಣೆಯುಂಟಾಗಿ ಕೆಲವೊಮ್ಮೆ ಒಳ್ಳೆಯದಾಗುವ ಸಂದರ್ಭಗಳು, ಕೆಲವೊಮ್ಮೆ ವ್ಯಕ್ತಿಗಳೊಂದಿಗೆ ಕೆಟ್ಟದಾಗುವ ಸಂಬಂಧವೇರ್ಪಡುತ್ತದೆ.

*14. ವ್ಯಕ್ತಿಗಳೊಂದಿಗಂತೂ ಈ ವಿಷಯ ಬಹಳ ಸತ್ಯ "Familiarity breeds contempt" ಎನ್ನುವ ಮಾತಿದೆ, ಹಾಗೆಯೇ ಮೊದಲು ಆಕರ್ಷಣೆ, ಅದನ್ನು ಪಡೆದುಕೊಳ್ಳುವ ಆಸೆ, ಪಡೆದ ಮೇಲೆ ನಿಜರೂಪದ ಅರಿವಾದಾಗ, ನಿರಾಸೆ, ಅಸಹನೆ, ಅಸಹ್ಯ, ನೋವು ಎಲ್ಲ ಉಂಟಾಗುತ್ತದೆ. ನಮ್ಮ ವೈಫಲ್ಯವನ್ನು ಕಂಡು ನಗುವವರು ಕುಟಿಲ ವಾಡುವವರು, ಅಣಕವಾಡುವವರು, ನಮ್ಮನ್ನು ಅಪ್ಪಿಕೊಂಡು ಅಪ್ಯಾಯತೆ ತೋರಿದವರು ನಮ್ಮನ್ನು ದೂಡುವುದು, ನಮ್ಮಿಂದ ದೂರಾಗುವುದು ಸರ್ವೇ ಸಾಮಾನ್ಯ ಎಲ್ಲರ ಜೀವನದಲ್ಲೂ ಇದು ನಡೆಯುತ್ತದೆ. ಹೀಗೆ ದಿನ ದಿನಕ್ಕೆ ಬದಲಾಗುವ ನಮ್ಮ ಸ್ಥಿತಿ ಮತ್ತು ನಮ್ಮ ಸುತ್ತಲಿನ ಜನಗಳ ವರ್ತನೆಗೆ ಕಾರಣವೇನೆಂದು ಯೋಚಿಸಿದರೆ ನಮಗೆ ಸರಿಯಾದ ಉತ್ತರ ಸಿಗುವುದಿಲ್ಲ. ಬಹಳಷ್ಟು ಸಾರಿ ನಾವು ಪರರನ್ನು ನಮ್ಮ ಅನಿಷ್ಟಕ್ಕೆ ಕಾರಣವಾಗಿಸುತ್ತೇವೆ. ಮತ್ತೆ ಕೆಲ ವೇಳೆ ನಮ್ಮನ್ನೇ ದೂಷಿಸಿಕೊಳ್ಳುತ್ತೇವೆ. ಆವೇಶದಲ್ಲಿ ಹಳಹಳಿಸುತ್ತೇವೆ. ಆದರೆ ಸ್ಪಷ್ಟ ಕಾರಣ ನಮಗೆ ಕಾಣುವುದಿಲ್ಲ ಆಗ 'ಆಯ್ಯೋ ನಮ್ಮ ಕರ್ಮ ಕೆಟ್ಟಿತ್ತು ಎಂದು ಎಲ್ಲವನ್ನೂ ನಮ್ಮ ಕರ್ಮಕ್ಕೆ ಅಂಟಿಸಿ ಬಿಡುತ್ತೇವೆ."*14

ಅಂದರೆ ನಮ್ಮ ನಮ್ಮ ಸಮಸ್ಯೆಗಳಿಗೆ ಕರ್ಮ ಎಂಬ ಹೆಸರನ್ನಿಟ್ಟು ಎಲ್ಲವನ್ನು ಕರ್ಮ ನೆಪದಲ್ಲಿ ಜೀವನ ಸಾಗಿಸುವುದನ್ನು ರೂಢಿಸಿಕೊಂಡು ಬಿಟ್ಟಿದ್ದೇವೆ.

ಅಡಿ ಟಿಪ್ಪಣಿ *14 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.248. ಸಂಪುಟ–1. 2ನೇ ಪ್ಯಾರ

ಮುಕ್ತಕ 184

ನೋಡುನೋಡುತ ಲೋಕ ಸಹವಾಸ ಸಾಕಹುದು।
ಬಾಡುತಿಹ ಹೂಮಾಲೆ, ಗೂಢವಿಹ ಕಜ್ಜಿ॥
ತೋಡದಿರು ಬಾಳ್ವೆಯಾಳವನು; ಮೇಲ್ಮೇಲೆ ನೀ।
ನೋಡಾಡು ಹಗುರದಿಂ – ಮಂಕುತಿಮ್ಮ॥

ಅಂದರೆ ಈ ಲೋಕದಲ್ಲಿ ಜೀವಿಸುವ ಪರಿಯು ಮಾನವನಿಗೆ ಆಳವಾಗಿ ಇಳಿದಾಗ ಜೀವನ ಬೇಸರವೆನಿಸದಿರದು. ಆದ್ದರಿಂದ ನೋಡು ನೋಡುತ್ತ ಈ ಲೋಕದ ಸಹವಾಸ ಸಾಕು. ಅಂದರೆ ಈ ಜೀವನವನ್ನು ಅತ್ಯಂತ ಆಳವಾಗಿ ನೋಡಲು ಹೋಗದೆ ಮೇಲು ನೋಡಿಕೊಂಡು ಹೋಗು. ಈ ಜೀವನ ಎಂಬುದು ಒಂದು ಬಾಡುತಿಹ ಹೂಮಾಲೆ, ಮತ್ತು ಗೂಢವಿಹ ಕಜ್ಜಿ ಅಂದರೆ ಗೂಢವಾಗಿರುವ ಕಜ್ಜಿಯ ತುರಿಕೆಯಂತೆ ನಮಗೆ ಈ ಜೀವನ ಬೇಸರವನ್ನುಂಟು ಮಾಡದಿರದು. ಈ ಜಗತ್ತಿನಲ್ಲಿ ನಮ್ಮ ಬಾಳು ಆರಂಭದಲ್ಲಿ ಅನಂದದಿಂದಿರುತ್ತದೆ. ಎಲ್ಲವೂ ಹೊಸತನವಾಗಿರುತ್ತದೆ. ಆನಂತರ ಎಲ್ಲವೂ ಹಳತಾಗುತ್ತದೆ. ಜೀವನ ಬೇಸರವೆನಿಸಿ ಸಾಕೆನಿಸುತ್ತದೆ. ಈ ಜಗತ್ತಿನಲ್ಲಿ ಯಾರೂ ಶಾಶ್ವತರಲ್ಲ ಆದ್ದರಿಂದಾಗಿ ಬದುಕಿರುವಷ್ಟು ದಿನ ಮೌಲ್ಯಯುತ ಬದುಕನ್ನು ಬದುಕಬೇಕು. ಸಮಾಜಕ್ಕೆ ಒಳಿತನ್ನು ಮಾಡುವಂತೆ ಇರಬೇಕು ಮತ್ತು ಸಮಾಜಮುಖಿ ಚಿಂತನೆಗಳನ್ನು ಅಳವಡಿಸಿಕೊಂಡು ಬದುಕಬೇಕು. ಇಲ್ಲಿ ಡಿವಿಜಿಯವರು ನಮ್ಮ ಬದುಕನ್ನು 'ಬಾಳು' ಎಂದು ಕರೆಯುತ್ತಾರೆ.

ನಮ್ಮ ಜೀವನವು ಸಾಗುತ್ತಾ ಸಾಗುತ್ತಾ ಬಾಡುತ್ತಿರುವ ಹೂಮಾಲೆಯಂತಾಗುತ್ತದೆ, ಇಲ್ಲಿ ಹಳತಾಗಿರುವ ಕಜ್ಜಿಯಂತೆ ಅನ್ನಿಸತೊಡಗುತ್ತದೆ, ವಯಸ್ಸಾಗುತ್ತಾ ಆಗುತ್ತಾ ಯೌವನದ ದಿನಗಳು, ಗತ ಜೀವನದ ದಿನಗಳು ನೆನಪಾಗಿ ಆಗಿನ ಶಕ್ತಿ ಕುಂದಿ ಹೋಗಿರುತ್ತದೆ. ಆಗಿನ ಜೀವನದ ಹುಮ್ಮಸ್ಸು ಕಂದಿರುತ್ತದೆ. ನಿರಾಳವಾಗಿರಬೇಕು ಎಂದರೂ ಮುಪ್ಪಿನ ಜೀವನ ಕೈಲಾಗದ ಪರಿಸ್ಥಿತಿ ಮತ್ತೊಬ್ಬರ ಮೇಲೆ ಅವಲಂಬಿತರಾಗುವ ಪರಿಸ್ಥಿತಿ ತಲುಪಿರುತ್ತವೆ. ಆದ್ದರಿಂದ ಯಾವಾಗಿದ್ದರೂ ಈ ಜೀವನ ನಶ್ವರ ಅದಕ್ಕಾಗಿ ಇರುವಾಗ ಏನೆಲ್ಲ ಸ್ವಾರ್ಥ, ಜಗಳ, ದ್ವೇಷ, ಅಸೂಯೆ, ಅತಿ ಆಸೆಗಳಿಂದ ಬದುಕುತ್ತೇವೆ, ಇದೆಲ್ಲವನ್ನು ಅರಿತು ಹೊರತಾಗಿಸಿ ಬಾಳಬೇಕು ಈ ಬಾಳು ನಶ್ವರ ಇದರ ನಶ್ವರತೆಯನ್ನು ಅರಿತು ಬಾಳ್ವೆ ನಡೆಸಬೇಕು.

ಮುಕ್ತಕ 192

ದೇವದಾನವರ ರಣರಂಗ ಮಾನವಹೃದಯ।
ಭಾವ ರಾಗ ಹಠಂಗಳವರ ಸೇನೆಗಳು॥
ಭೂವಿಭವಜಯಗಳ ಭ್ರಾಂತಿಯಲಿ ಮರೆಯುವರು।
ಜೀವಾಮೃತವನವರು – ಮಂಕುತಿಮ್ಮ॥

[illegible]

[illegible]

[illegible]

[illegible]

ಮಾನವ ಹೃದಯ ಎಂಬುದು ದೇವತೆ ಮತ್ತು ದಾನವರ ರಣರಂಗ ಮತ್ತು ಭಾವ ರಾಗ ಹಠಂಗಳವರ ಸೇನೆಗಳು. ಅಂದರೆ ನಮ್ಮ ಹೃದಯ ನಮ್ಮ ಜೀವನವು ಮತ್ತು ಶೈಲಿಯು ಪ್ರತಿಯೊಬ್ಬರ ಅನಿಸಿಕೆಯಂತೆ ಒಳ್ಳೆಯದಾಗೆ ಇರಬೇಕು ಎಂಬುದಾಗಿರುತ್ತದೆ. ಆದರೆ ಕೆಲವರು ಆ ಭ್ರಮೆಯಲ್ಲಿಯೇ. ಉತ್ಕಟೇಚ್ಛೆಗಳಿಂದ ಬಾಳ್ವೆ ನಡೆಸುವ ಸಂದರ್ಭದಲ್ಲಿ ಭಾವೋದ್ವೇಗಗಳಿಗೆ ಒಳಗಾಗಿ ವೈಭವೋಪೇತ ಜೀವನ ನಡೆಸಲೆಣಿಸುತ್ತಾರೆ. ಆಗಲೇ ದ್ವೇಷ, ಅಸೂಯೆ ಕೋಪ ತಾಪಗಳು ಉಂಟಾಗುತ್ತವೆ. ಮತ್ತು ಮನುಷ್ಯನು ಅಡ್ಡದಾರಿ ಹಿಡಿಯಲೆತ್ನಿಸುತ್ತಾನೆ. ಇಂದಿನ ಜೀವನ ಶೈಲಿಯ ಗತಿಯು ಅತ್ಯಂತ ವೇಗವಾಗಿರುವುದರಿಂದ ಮತ್ತು ಮನುಷ್ಯನು ಐಷಾರಾಮಿ ಜೀವನವನ್ನು ಆಶಿಸುತ್ತಿರುವುದರಿಂದ ಅತ್ತ ಕಡೆಗೆ ಆಕರ್ಷಿತನಾಗಿ ಬಾಳುವ ಭರದಲ್ಲಿ ತಾನು ತುಳಿಯುತ್ತಿರುವ ಹಾದಿಯು ಎಂತಹುದಾದರೂ ಕೂಡ ಜೀವನದ ಮೌಲ್ಯವನ್ನು ಲೆಕ್ಕಿಸದೆ ಅತ್ತ ಸಾಗುತ್ತಿದ್ದಾರೆ.

ಪುರಾಣದ ಪ್ರಕಾರ ದೇವತೆಗಳು ಮತ್ತು ದಾನವರು ಇಬ್ಬರೂ ಕಶ್ಯಪ ಬ್ರಹ್ಮನ ಮಕ್ಕಳು ಹಾಗಾಗಿ ಇವರನ್ನು ಅಣ್ಣ ತಮ್ಮಂದಿರು ಎನ್ನುತ್ತಾರೆ. ಈ ದೇವತೆಗಳು ಮತ್ತು ದಾನವರು ಸಮುದ್ರ ಮಂಥನಗೈದು ಮೊದಲಿಗೆ ಹಾಲಾಹಲ ಉತ್ಪತ್ತಿಯಾಗುತ್ತದೆ. ಅನಂತರ ಅಮೃತ ಉತ್ಪತ್ತಿಯಾಗುತ್ತದೆ. ಹೀಗಾಗಿ ಮನುಷ್ಯನ ಮನಸ್ಸು ವಿಷ ಮತ್ತು ಅಮೃತದ ಸಮ್ಮಿಶ್ರಣಗೊಂಡಿದ್ದು, ಯಾವ ಕ್ಷಣದಲ್ಲಿ ಹೇಗೆ ಬೇಕಾದರೂ ಮನುಷ್ಯ ತನ್ನತನವನ್ನು ಕಳೆದುಕೊಂಡು ಬಾಳಬಹುದು ಅಂತಹ ಸ್ಥಿತಿಯನ್ನು ತಂದುಕೊಳ್ಳುತ್ತಾನೆ.

ಪ್ರತಿಯೊಬ್ಬ ಮನುಷ್ಯನು ತಾನು ಅಂತರಂಗದ ವ್ಯಕ್ತಿತ್ವ ಹೊಂದಿರುವುದಕ್ಕಿಂತ ಭಿನ್ನವಾಗಿ ವ್ಯಕ್ತಿತ್ವವನ್ನು ಸಮಾಜಕ್ಕೆ ಬಿಂಬಿಸುತ್ತಾನೆ. ತಾನಿರುವ ಆಂತರಿಕ ರೂಪವನ್ನೆ ಜಗತ್ತಿಗೂ ತೋರಿದರೆ ತನ್ನ ಅಸ್ತಿತ್ವಕ್ಕೆ ಧಕ್ಕೆಯುಂಟಾಗುತ್ತದೆ ಎಂಬುದು ಮನುಷ್ಯರೆಲ್ಲರ ಹಿಂಗಿತ.

ಮುಕ್ತಕ 196

ಮನುಜಲೋಕವಿಕಾರಗಳನು ನೀನಳಿಸುವೊಡೆ।
ಮನಕೊಂದು ದರ್ಪಣವ ನಿರವಿಸೆಂತಾನುಂ॥
ಅನುಭವಿಪರವರಂದು ತಮ್ಮಂತರಂಗಗಳ।
ಅನುಪಮಾಸಹ್ಯಗಳ – ಮಂಕುತಿಮ್ಮ॥

ಮನುಷ್ಯನ ಜೀವನದ ವಿಕಾರಗಳನ್ನು ಅಳಿಸಿ ಹಾಕುವಂತಿದ್ದರೆ ನೀ ಅವನ ಜೀವನವನ್ನು ನಿಷ್ಕಲ್ಮಶಗೊಳಿಸುವುದಾದರೆ ಮನಸ್ಸಿಗಾಗಿ ಒಂದು ದರ್ಪಣವನ್ನು (ಕನ್ನಡಿ) ತಯಾರಿಸು. ಆಗ ಮನುಸ್ಸಿನ ಬಿಂಬವನ್ನು ಕನ್ನಡಿಯಲ್ಲಿ ನೋಡಿಕೊಂಡು ತಮ್ಮ ಮನೋವಿಕಾರಗಳನ್ನು ಅರಿಯಲನುವಾಗುತ್ತದೆ. ನಾವು ಯಾವಾಗಲೂ ನಮ್ಮ ಶುದ್ಧ ವ್ಯಕ್ತಿತ್ವವನ್ನು ಬಿಂಬಿಸುವಲ್ಲಿ ಮುಂದಾಗುತ್ತೇವೆ. ನಮ್ಮಲ್ಲಿರುವ ಕಪಟತನವನ್ನು ಸುಳ್ಳುತನವನ್ನು ನಾವು ಮರೆಮಾಚಲೆತ್ನಿಸುತ್ತೇವೆ, ಇಂತಹ ಆಂತರ್ಯದ ಕಲ್ಮಶಗಳನ್ನು ಯಾವ ಕಾರಣಕ್ಕೂ ಯಾರಲ್ಲೂ ಹಂಚಿಕೊಳ್ಳುವುದಿಲ್ಲ. ಹೀಗೆ ಅಡಗಿಟ್ಟುಕೊಳ್ಳುವ ವಿಚಾರಗಳೆಲ್ಲಾ ಒಟ್ಟುಗೂಡಿ ಕೊನೆಗೊಮ್ಮೆ ಮನುಷ್ಯನು ಬೌದ್ಧಿಕ ವಿಕಾರಗೊಳ್ಳುತ್ತಾನೆ. ಮನುಷ್ಯನು ಪೂರ್ವಾಗ್ರಹ ಪೀಡಿತನಾದಾಗಲೇ ಮನೋಕ್ಷೋಭೆಗೊಳಗಾಗುವ ಸಾಧ್ಯತೆಗಳಿರುತ್ತವೆ.

ಮುಕ್ತಕ 829

ಕೊಳದ ಜಲ ನಿನ್ನ ಮನ; ಲೋಗರದರೊಳಗಿಳಿಯೆ।
ತಳದ ಕಸ ತೇಲುತ್ತ ಬಗ್ಗಡವದಹುದು॥
ಕಲಕದದ್ದದೆ ಕೊಂಚ ಬಿಟ್ಟಿದೋಡದು ಮರಳಿ।
ತಿಳಿಯಬಹುದು ಶಾಂತಿಯಲಿ – ಮಂಕುತಿಮ್ಮ।

ನಿನ್ನ ಮನಸ್ಸು ಎನ್ನುವುದು ತಿಳಿನೀರು ಕೊಳದಂತಿರುತ್ತದೆ. ಅದರಲ್ಲಿ ಜನರು ಇಳಿದರೆ ತಳದಲ್ಲಿನ ಕಸ ತೇಲುತ್ತ ಮೇಲೆ ಬಂದು ಬಗ್ಗಡವಾಗುತ್ತದೆ. ಕಲಕದೇ ಇದ್ದು ಕೊಂಚ ಹಾಗೆ ಬಿಟ್ಟಿದ್ದರೆ ಮತ್ತೆ ಅದು ತಿಳಿಯಾಗಿಯೇ ಇರುವುದು ಶಾಂತಿಯಿಂದ ಎನ್ನುವುದೇ ಈ ಮುಕ್ತಕದ ಆಂತರ್ಯ. ಒಂದು ಕೊಳ ಎಂದ ಮೇಲೆ ಜನರು ಅದನ್ನು ಬಳಕೆ ಮಾಡದೇ ಇರುವುದಿಲ್ಲ. ಬಟ್ಟೆ ಒಗೆಯುವುದು. ಸ್ನಾನ ಮಾಡುವುದು, ದನಕರುಗಳಿಗೆ ನೀರು ಕುಡಿಸುವುದು ಪಾತ್ರೆ ತೊಳೆಯುವುದು. ದನಕರುಗಳ ಮೈತೊಳೆಯುವುದು ಅಲ್ಲದೆ ತಮ್ಮ ನಿತ್ಯ ಕರ್ಮಗಳನ್ನು ಅಲ್ಲಿಯೇ ಪೂರೈಸುವವರಾಗಿರುತ್ತಾರೆ, ಹಾಗೆಯೇ ಒಬ್ಬ ಮನುಷ್ಯನ ಮನಸ್ಸು ಎಂಬುದನ್ನು ಸಮಾಜದಲ್ಲಿನ ಜನರು ನಮ್ಮ ಮನಸ್ಸನ್ನು ಕಲಕಲು ಯತ್ನಿಸುತ್ತಾರೆ. ಆಗ ಅವುಗಳನ್ನು ತಡೆಯುವ ಶಕ್ತಿಯು ನಮ್ಮಲ್ಲಿರುತ್ತದೆ, ನಾವು ಅಚಲ ಮನಸ್ಕರಾಗಿದ್ದರೆ ಯಾವುದೇ ಅಚಾರ ವಿಚಾರಗಳು ಯಾರೇ ಹೇಳಲಿ ನಾವು ನಮ್ಮ ತನವನ್ನು ಕಾಯ್ದುಕೊಂಡೇ ಇರುತ್ತೇವೆ. ಇಂತಹ ಕೆಲವು ವಿಚಾರಗಳೇ ತಿಳಿ ನೀರಿನಂತಹ ಮನಸ್ಸನ್ನು ಕದಡಿ ಬಗ್ಗಡ ಮಾಡುತ್ತವೆ. ಅಂದರೆ ಕೆಲವು ವಿಚಾರಗಳೇ ತಿಳಿ ನೀರಿನಂತಹ ಮನಸನ್ನು ಕದಡಿ ಬಗ್ಗಡ ಮಾಡುತ್ತವೆ. ಅಂದರೆ ಕೆಲವು ವಿಚಾರಗಳ ಗಲೀಜು ಲೋಗರದೊಳಗಿಳಿಯೆ ಅಂದರೆ ಲೋಕದ ಜನರ ಪ್ರಭಾವದಿಂದಾಗಿ ಜಗತ್ತಿನ ಎಲ್ಲ ವಿಚಾರಗಳು ಕೆಟ್ಟದ್ದು, ಒಳ್ಳೆಯದು. ಬೇಕಾದ್ದು, ಬೇಡವಾದ್ದು ಎಲ್ಲವೂ ಮನದೊಳಗೆ ನುಗ್ಗಿ ಒಳಗಿರುವ ವಿಚಾರಗಳನ್ನೆಲ್ಲಾ ಕೆದರುತ್ತದೆ, ನಮ್ಮ ಮನಸ್ಸು ಕದಡಿದ ಸರೋವರದಂತಾಗುತ್ತದೆ.

*15 ಇರುವ ಕಸ ಹೊಲಸನ್ನು ಹೊರಹಾಕಲು ಮತ್ತು ಹೊಸ ಹೊಲಸು ಬರದಂತೆ ತಡೆಯಲು ನಮಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಶಕ್ತಿ ಎರಡೂ ಇದೆ. ಮೊಟ್ಟಮೊದಲಿಗೆ ಯಾವುದು ಹೊಲಸು ಯಾವುದು ಹೊಲಸಲ್ಲ ಎಂದು ಅರಿತುಕೊಳ್ಳುವ ಕ್ಷಮತೆಯನ್ನು ಬೆಳೆಸಿಕೊಳ್ಳಬೇಕು ಗುಣವನ್ನು ಮಾತ್ರ ಗ್ರಹಿಸುವ ಪ್ರಯತ್ನ ನಮ್ಮದಾಗಬೇಕು. ಹಾಗಾದರೆ ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಳ್ಳ ಬಹುದು. ಜಗತ್ತಿನ ಅಂಟು ಮತ್ತು ನಂಟು ಅಧಿಕವಾದಷ್ಟು ಮನದೊಳಕ್ಕೆ ನುಗ್ಗುವ ಹೊಲಸು ಅಧಿಕವಾಗುತ್ತದೆ. ಹಾಗಾಗಿ ಇರುವುದನ್ನು ಹೊರತಳ್ಳಿ, ಬರುವುದನ್ನು ತಡೆದು ನಮ್ಮ ಮನಸ್ಸಿನ ಪ್ರಶಾಂತತೆಯನ್ನು ಕಾಪಾಡಿಕೊಂಡರೆ ನಾವು ಊರ್ಧ್ವಮುಖವಾಗಿ ಬೆಳೆಯಲು ಮತ್ತು ಪರತತ್ವವನ್ನು ಅರಿಯಲು ಸಹಾಯಕವಾಗುತ್ತದೆ, ಪ್ರಯತ್ನದಿಂದ ಆ ಸ್ಥಿತಿಯನ್ನು ಸಾಧಿಸಬಹುದು.*15

ಅಡಿ ಟಿಪ್ಪಣಿ *15 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.183–184. ಸಂಪುಟ–4.

[illegible]

[illegible]

[illegible]

[illegible]

ಮುಕ್ತಕ 830

ಕೊಳಕೆಂದು ಹುಳುಕೆಂದು ಹೇಸಿಗೆಯ ಹುಳುವೆಂದು।
ಇಳೆಯೊಳಾವುದರೊಳಮಸಹ್ಯಪಡಬೇಡ॥
ಬೆಲೆಯುಂಟು ಕೊಳೆಗಮೀ ಜೀವಸಾಮಗ್ರಿಯಲಿ।
ಕೊಳೆ ಶುಚಿಖ್ಯಾಪಕವೊ – ಮಂಕುತಿಮ್ಮ॥

ಹಿಂದಿನ ಮುಕ್ತಕದಲ್ಲಿ ಡಿ.ವಿ.ಜಿಯವರು ಮನಸ್ಸು ತಿಳಿನೀರಿನಂತೆ ಬೇಡದ ವಿಚಾರಗಳಿಂದ ಮನಸ್ಸನ್ನು ಬಗ್ಗಡಗೊಳಿಸಿಕೊಳ್ಳಬಾರದು ಎಂದು ಹೇಳಿದ್ದಾರೆ. ಅದರೆ ಈ ಮುಕ್ತಕದಲ್ಲಿ ಮನಸ್ಸನ್ನು ತಿಳಿಯಾಗಿರಿಸಿಕೊಳ್ಳಬೇಕೆಂದು ಬೇಡವಾದದನ್ನೆಲ್ಲಾ 'ಹೊಲಸು' ಕೆಟ್ಟದ್ದು, ಹೇಸಿಗೆ, ಹುಳಕು, ಎಂದು ಜಗದಲ್ಲಿರುವುದನ್ನೆಲ್ಲಾ ನೋಡಿ ಅಸಹ್ಯಪಟ್ಟುಕೊಳ್ಳದೆ ಜಗತ್ತಿನ ಸಮಸ್ತವನ್ನು ತೂಗಿ ಅಳತೆ ಮಾಡಿದಂತೆ ಮನಸ್ಸಿಗೆ ಒಪ್ಪಿತಗೊಳಿಸಿಕೊಳ್ಳಬೇಕು. ಕೈ ಕೆಸರಾದರೇನೇ ಬಾಯಿ ಮೊಸರಾಗಲು ಸಾಧ್ಯ ಎಂಬ ನಾಣ್ಣುಡಿಯಂತೆ ಕೆಲವೊಂದು ವಿಚಾರಗಳನ್ನು ಒಪ್ಪಿಕೊಂಡು ಜೀವನಕ್ಕೆ ಅಳವಡಿಸಿಕೊಳ್ಳಬೇಕಾಗುತ್ತದೆ, ಆ ಪರಮಾತ್ಮನ ಜಗತ್ ಸೃಷ್ಟಿಯಲ್ಲಿ ಪ್ರತಿಯೊಂದು ಕೂಡ ಅಣು, ರೇಣು ತೃಣ ಕಾಷ್ಠವೂ ಕೂಡ ಪ್ರಯೋಜನವಾಗಿರುತ್ತದೆ.

ಜಗತ್ತಿನ ಜೀವಚರಗಳಲ್ಲಿ ಕೆಲವು ದುಷ್ಟವೂ, ಕೆಲವು ಸಾಧುವೂ ಇರುತ್ತವೆ. ಆದರೆ ಅವುಗಳಿಗೆ ಪ್ರಪಂಚದಲ್ಲಿ ಬದುಕಲನುಕೂಲವಾಗುವಂತೆ ಅವುಗಳದ್ದೇ ಸ್ವಭಾವವನ್ನು ಅವುಗಳಿಗೆ ಭಗವಂತನು ನೀಡಿದ್ದಾನೆ. ಹಾಗಂತ ನಾವು ಎಲ್ಲವನ್ನು ಸಾಧು ಪ್ರಾಣಿಗಳಂತಲೂ ಎಲ್ಲವನ್ನು ದುಷ್ಟ ಪ್ರಾಣಿಗಳೆಂತಲೂ ಪರಿಗಣಿಸಿ ಅವುಗಳನ್ನು ಆ ರೀತಿ ಕಾಣುವುದು ತಪ್ಪಾಗುತ್ತದೆ. ನಮ್ಮ ಅನುಕೂಲಕ್ಕೆ ತಕ್ಕಂತೆ ನಮ್ಮ ಅವಶ್ಯಕತೆಗಳಿಗೆ ತಕ್ಕಂತೆ ಅವುಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಅಂದರೆ ಹಸುವಿನಿಂದ ಹಾಲು ಕರೆದು ಉಪಯೋಗಿಸುವುದು. ಹೊಲ ಹೂಳಲು ಎತ್ತುಗಳನ್ನು ಮತ್ತು ಕುರಿ, ಕೋಳಿ, ಮೇಕೆ,ಕತ್ತೆ, ಕುದರೆ ಒಂಟೆಗಳನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಬೇಕಾಗುತ್ತದೆ, ಇದರ ಸದ್ಬಳಕೆಯ ಬಗ್ಗೆ ಯೋಚಿಸಲು ಸಾಧ್ಯವಾಗುವುದು ಮನುಷ್ಯನಿಗೆ ಮಾತ್ರ. ಇವನು ಪ್ರಾಣಿಗಳಲ್ಲೆಲ್ಲ ಅತ್ಯುತ್ತಮವಾದ ಪ್ರಾಣಿಯಾಗಿದ್ದಾನೆ. ಈತನಿಗೆ ಮಾತನಾಡುವ, ಯೋಚಿಸುವ, ನಗುವ ಒಂದು ಪ್ರಾಣಿಯನ್ನು ಪಳಗಿಸುವ ಶಕ್ತಿಯನ್ನು ಭಗವಂತನು ಕೊಟ್ಟಿದ್ದಾನೆ. ಆದ್ದರಿಂದ ತಾನು ಎನ್ನುವ ಅಹಂಮಿಕೆಯನ್ನು ತೊರೆದು ಇತರ ಜೀವಿ ಜಗತ್ತನ್ನು ತನ್ನಂತೆ ಈ ಜಗತ್ತಿನಲ್ಲಿ ಬಾಳುವ, ಜೀವಿಸುವ ಹಕ್ಕನ್ನು ಹೊಂದಿರುವಂತಹವುಗಳೆಂದು ತಿಳಿದು ಬಾಳಬೇಕಾಗುತ್ತದೆ. ಅದೇ ಮನುಷ್ಯ ಧರ್ಮ, ಅದೇ ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಇರಬೇಕಾದ ವ್ಯತ್ಯಾಸ.

ಮುಕ್ತಕ –858

ಪ್ರಿಯಹಿತಗಳನ್ವೇಷೆಯಿಂ ಕರ್ಮ ಪರಿಪೋಷೆ।
ಕ್ರಿಯೆಯ ಪಾರಂಪರ್ಯ ಜನಾಂತರೀಯ॥
ನಿಯತವಿಂತು ಜಗತ್ಪ್ರವರ್ಧನೆಗೆ ನರತೃಷ್ಣೆ।
ಜಯ ಪೂರ್ಣವೆಂದದಕೆ – ಮಂಕುತಿಮ್ಮ॥

[illegible]

ತಾನು ಇಷ್ಟಪಟ್ಟದ್ದನ್ನು ಮತ್ತು ತಾನು ಬಯಸಿದ್ದನ್ನು ಮನುಷ್ಯನು ಹುಡುಕುವುದು ಸಹಜ ಧರ್ಮ. ಈತನು ಕರ್ಮಗಳನ್ನು ಮಾಡುವುದು ಬಹು ಜನ್ಮಗಳಿಂದಲೂ ಬಂದಂತಹುದಾಗಿದೆ, ಜಗತ್ತು ನಿಂತಿರುವುದೇ ಮನುಷ್ಯನ ಬಯಕೆಗಳಿಂದ, ಆಸೆಗಳಿಂದ, ಈ ಆಸೆಗಳು, ಬಯಕೆಗಳು ಎಂದಿಗೂ ಪೂರೈಸುವುದಿಲ್ಲ ಆತನಿಗೆ ಸಂತೃಪ್ತಿ ಎನ್ನುವುದೂ ಇಲ್ಲ. ಮನುಷ್ಯನ ನಿರಂತರ ಹುಡುಕುವ ಬಯಕೆಯು ಆತನನ್ನು ಆಸೆಗಳ ಮೂಲಕ್ಕೆಳಸುತ್ತದೆ. ತನ್ನ ಆಸೆಗಳ, ಬಯಕೆಗಳ ಪೂರೈಕೆಗೆ ಪ್ರಯತ್ನಗಳು ಅವ್ಯಾಹತವಾಗಿ ನಡೆಯುತ್ತಲೇ ಇರುತ್ತದೆ. ಇದಕ್ಕೆ ಕೊನೆಯೇ ಇಲ್ಲ. ಒಂದು ತೃಪ್ತಿ ಎನ್ನುವುದೇ ಇಲ್ಲ. ಈತನು ಬಯಸಿದ್ದೆಲ್ಲವೂ ಸಿಕ್ಕಿಬಿಟ್ಟರೆ ಈತ ಸ್ತಬ್ಧ ಮನಸ್ಕನಾಗುತ್ತಾನೆ. ಅಂದರೆ ತನ್ನ ಚೈತನ್ಯವನ್ನು ಕಳೆದುಕೊಂಡವನಂತೆ ನಿರ್ಲಿಪ್ತ ಮನಸ್ಕನಾಗತೊಡಗಿ ಈ ಜಗತ್ತಿನಲ್ಲಿ ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ.

*16 ಮನುಷ್ಯನ, ಈ ಜಗತ್ತಿನ ಜೀವನದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಸಹಸ್ರಾರು ವರ್ಷಗಳ ಹಿಂದೆ ಎರಡು ಕಲ್ಲುಗಳನ್ನು ತಿಕ್ಕುವುದರಿಂದ ಬೆಂಕಿಯನ್ನು ಸೃಷ್ಟಿಸಿದ. 'ಗಾಲಿ'ಯನ್ನು ಕಂಡು ಹಿಡಿದ ಮನಷ್ಯನ ಸಂತತಿಯೇ ಇಂದಿಗೂ ಇನ್ನೂ ಹೊಸ ಹೊಸತನ್ನು ಕಂಡುಹಿಡಿಯುವ ಪ್ರಯತ್ನವನ್ನು ಮಾಡುತ್ತಾ ತನ್ನ ಈ ಜಗತ್ತಿನ ಜೀವನವನ್ನು ಮತ್ತಷ್ಟು ಸುಖಮಯ ಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇದೆ ಅಲ್ಲವೆ? ಇದನ್ನೆ ಮಾನ್ಯ ಗುಂಡಪ್ಪನವರು ಕ್ರಿಯೆಯ ಪಾರಂಪರ್ಯ ಜನ್ಮಾಂತರೀಯ ಎಂದು ಹೇಳಿ ಈ ಹೊಸತನ್ನು ಕಂಡುಹಿಡಿಯುವ ಕ್ರಿಯೆ ಜನ್ಮಜನ್ಮಾಂತರದಿಂದ, ಪರಂಪರಾನುಗತವಾಗಿ ನಡೆದು ಬಂದಿದೆ ಎನ್ನುತ್ತಾರೆ.

ಜೀವನದಲ್ಲಿ ಅಭಿವೃದ್ಧಿ ಎಂದರೆ ಮನುಷ್ಯನ ಜೀವನ ಮತ್ತು ಸಕಲ ಜೀವರಾಶಿಗಳ ಜೀವನ ನಿರಾಮಯವಾಗುವುದು, ಎಂದರೆ ಶಾಂತವಾಗಿ ನಡೆಯುವುದು. ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ, ನಮ್ಮ ಪೂರ್ವಜರು ನಮಗಾಗಿ ಮತ್ತು ನಮ್ಮ ಸುಖ ಶಾಂತಿ ಮತ್ತು ಹಿತಕ್ಕಾಗಿ ಆವಿಷ್ಕರಿಸಿದ ಸಕಲವನ್ನೂ ನಾವು ಮೂಲೆಗೆ ತಳ್ಳಿ, ಹೊಸತನ್ನೇನೊ ಕಂಡು ಹಿಡಿದಿದ್ದೇವೆ" ಎಂದು ಬೀಗುತ್ತಾ ಮನುಷ್ಯನ ಅಹಂಕಾರವನ್ನು ತಣಿಸುವ ಮತ್ತು ಮನುಷ್ಯನನ್ನು ಅಧೋಗತಿಗೆ ಕೊಂಡು ಹೋಗುವ ಎಲ್ಲಾ ಸಾಧನಗಳನ್ನು ಕಂಡು ಹಿಡಿದಿದ್ದೇವೆ. ಇದು ಖಂಡಿತ ಪ್ರಗತಿಯಲ್ಲ, ಇದು ಅಧೋಗತಿ. ಇದರ ಅರಿವುಂಟಾಗಿ ಮತ್ತೆ ಸಕಲರಿಗೂ ಹಿತವನ್ನುಂಟು ಮಾಡುವ ಮಾರ್ಗದಲ್ಲಿ ನಡೆದರೆ ಇಂದಿನ "ಕ್ಲೇಷೆ ಮತ್ತು ಸಂಕಟ" ದಿಂದ ಕೂಡಿದ ಜೀವನ ಬದಲಾಗಿ ಶಾಂತಿ ನೆಮ್ಮದಿಗಳು ನೆಲೆಸಬಹುದು"*16

ಮುಕ್ತಕ 874

ಮಡಕೆಯನು ಬಡಿದು ಹೊನ್ ಕೊಡವ ತೋರುವ ಸಖನೆ।
ಪಡೆದಿಹೆಯ ರಹದಾರಿಯನು ಹೊನ್ನ ಗಣಿಗೆ?॥
ಒಡಲಿಗೊಗ್ಗಿದ ನೀರ ಚೆಲ್ಲಿದೊಡದೇಂ ಪಾಲ।
ಕುಡಿವ ಸಂತಸಕೆಣೆಯೆ? – ಮಂಕುತಿಮ್ಮ॥

ಅಡಿ ಟಿಪ್ಪಣಿ *16 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.226. ಸಂಪುಟ–4, 3ನೇ ಪ್ಯಾರ

[illegible]

ಮಣ್ಣಿನ ಮಡಕೆಯನ್ನು ಒಡೆದು ಹೊನ್ನಿನ ಕೊಡವನ್ನು ತೋರುವ ಸಖನೆ, ಸ್ನೇಹಿತನೆ, ನೀನು ಚಿನ್ನದ ಗಣಿಯನ್ನು ಹೊಂದಲು ರಹದಾರಿಯನ್ನು ಪಡೆದಿರುವೆಯ? ಒಬ್ಬ ಮನುಷ್ಯನಿಗೆ ಒಗ್ಗಿದ ನೀರೆ ಸಾಕಾಗಿರುವಾಗ ಅದನ್ನು ಚೆಲ್ಲಿ ಹಾಲನ್ನು ಕುಡಿ ಎಂದು ಹೇಳಿದರೆ ಹಾಲು ಕುಡಿದಾಗ ನೀರ ಕುಡಿದ ಸಂತೋಷ ಸಿಕ್ಕುವುದೆ? ಅವರವರಿಗೆ ಯಾವುದು ಒಗ್ಗುತ್ತದೆಯೋ ಅದನ್ನೆ ಅವರು ಮಾಡಲು ಬಿಡು, ಅದರಲ್ಲಿ ಮಧ್ಯೆ ತೂರಬೇಡ ಎಂದು ಹೇಳುತ್ತದೆ ಈ ಮುಕ್ತಕ. ಇಲ್ಲಿ ಸ್ವಾಭಿಮಾನವೇ ಪ್ರಮುಖವಾಗುತ್ತದೆ ಅಂದರೆ ಒಬ್ಬ ಬಡವನಿಗೆ ಮಣ್ಣಿನ ಮಡಕೆಯನ್ನು ಒಡೆದು ಹಾಕಿ ಚಿನ್ನದ ಕೊಡವನ್ನು ಕೊಡುವ ಅಮಿಷ ತೋರಿದರೆ ಆತನಿಗೆ ಮಣ್ಣಿನ ಮಡಕೆಯಲ್ಲಿನ ನೀರು ಕುಡಿದಷ್ಟು ತೃಪ್ತಿಯಾಗುತ್ತದೆಯಾ? ಮತ್ತು ಅವನು ಅದನ್ನು ತೆಗೆದುಕೊಳ್ಳಲು ಸ್ವಾಭಿಮಾನ ತಡೆಯುತ್ತದೆ, ತನ್ನ ಅಂತಸ್ತನ್ನೆ ಅಳೆಯುವ ಭಾವನೆ ಅವನಲ್ಲಿ ಹಿಂಜರಿಕೆಯನ್ನುಂಟು ಮಾಡುತ್ತದೆ. ಸ್ವಾಭಿಮಾನಕ್ಕೆ ಪೆಟ್ಟು ನೀಡುತ್ತದೆ. ಈ ಜಗತ್ತಿನಲ್ಲಿ ಅನೇಕ ಮಂದಿ ಬಡತನದಿಂದ ಇದ್ದರೂ ಕೂಡ ಸ್ವಾಭಿಮಾನವನ್ನು ಬಿಡದೆ ಜೀವನವನ್ನು ನಡೆಸುತ್ತಿದ್ದಾರೆ. ಅವರೆಲ್ಲರ ಬಡತನವನ್ನು ನೀಗಲು ಯಾರಿಂದಲೂ ಸಾಧ್ಯವಾಗದು.

ಇನ್ನೊಬ್ಬರ ಹಂಗಿಲ್ಲದೆ ಸ್ವಾಭಿಮಾನದಿಂದ ಯಾರಿಗೆ ಯಾವುದು ತೃಪ್ತಿ ನೀಡುತ್ತದೆಯೋ ಅದನ್ನೆ ಅವರು ಅನುಭವಿಸುವ ಸಂಪೂರ್ಣವಾದ ಸ್ವಾತಂತ್ರ್ಯ ಅವರಿಗಿರುತ್ತದೆ. ಆ ಸ್ವಾಭಿಮಾನವನ್ನು ಕಸಿಯಲು ಯಾರಿಂದಲೂ ಆಗದು ಯಾರ್‍ಯಾರಿಗೆ ಯಾವ್ಯಾವುದು ಸಮಂಜಸವೋ ಮತ್ತು ಸಂತೋಷವಿದೆಯೋ ಅದದೇ ಕೆಲಸಗಳನ್ನು ಮಾಡಿ ತೃಪ್ತಿ ಪಡಬೇಕಾಗುತ್ತದೆ. ಅವರ ಸುಖವನ್ನು ನೆಮ್ಮದಿಯನ್ನು ಕಳೆದುಕೊಂಡು ಬದುಕುವ ಬಾಳುವ ಅವಶ್ಯಕತೆ ಇಲ್ಲ.

ಮುಕ್ತಕ 929

ಸದ್ದು ಮಾಡದೆ ನೀನು ಜಗಕೆ ಬಂದವನಲ್ಲ।
ಒದ್ದಾಟ ಗುದ್ದಾಟ ಬಾಳೆಲ್ಲವಾಯ್ತು॥
ಗದ್ದಲವ ಬಿಡಲು ಕಡೆದಿನವಾನುಮಾದೀತೆ।
ನಿದ್ದೆವೊಲು ಸಾವ ಪಡೆ – ಮಂಕುತಿಮ್ಮ॥

ಅಂದರೆ ಈ ಜಗಕ್ಕೆ ಬರುವಾಗ ಸದ್ದು ಮಾಡದೆ ಬಂದವನಲ್ಲ ಬಾಳೆಲ್ಲ ಒದ್ದಾಟದಿಂದ ಗುದ್ದಾಟದಿಂದಲೇ ಕೂಡಿದೆ. ಈ ಗದ್ದಲವ ಬಿಡಲು ಕಡೆದಿನವಾನುಮಾದೀತೆ ಅಂದರೆ ಸಾವಿನವರೆಗೂ ಅಗುವುದಿಲ್ಲ ಈ ಗದ್ದಲವನ್ನು ಬಿಡಲು ಸಾವಿನವರೆಗೂ ಕಾಯಬೇಕು. ನಿದ್ದೆಯಲ್ಲಿದ್ದಾಗಲೆ ಸಾವು ಬಂದರೆಗಬಹುದು. ಕೆಲವರು ಏನೇ ಸಾಧನೆ ಮಾಡಿದ್ದರೂ ಪ್ರಚಾರಕ್ಕೆಳಸದೆ ಸದ್ದು ಗದ್ದಲವಿಲ್ಲದೆ ಜೀವಿಸುತ್ತಾರೆ ಅಂದರೆ ಸಾಮಾನ್ಯ ಜೀವನ ಮಾಡುತ್ತಾ ಹೆಚ್ಚುಗಾರಿಕೆ ತೋರದೆ ಸಾಧಾರಣ ಜೀವನ ನಡೆಸುತ್ತಿರುತ್ತಾರೆ.

ಬದುಕಿನಲ್ಲಿ ಗದ್ದಲವಿಲ್ಲದೆ ಬದುಕುವುದು ಸ್ವಲ್ಪ ಕಷ್ಟ ಸಾಧ್ಯವೇ ಹೊರತು ಸುಲಭವಲ್ಲ. ಇಲ್ಲಿ ಯಾವುದು ಹೆಚ್ಚಾದರೂ ಕಷ್ಟವೆ. ಶಬ್ಧ ಹೆಚ್ಚಾದರೂ ಕಷ್ಟ, ಮೌನ ಹೆಚ್ಚಾದರೂ ಕಷ್ಟ, ಏಕಾಂಗಿಯಾಗಿದ್ದು ಶಾಂತವಾಗಿ ಸಾವನ್ನಪ್ಪಿದರೆ ಅದೇ ನಾವು ಜಗತ್ತಿಗೆ ನೀಡುವ ಒಂದಿಷ್ಟು ನೆಮ್ಮದಿ ಎನ್ನಬಹುದು.

ಮುಕ್ತಕ 930

ಆರ ಕೈತುತ್ತಿಗಂ ನಿನ್ನ ಕಾಯಿಸದೆ ವಿಧಿ।
ಯಾರ ಭುಜಕಂ ನಿನ್ನ ಭಾರವಾಗಿಸದೆ॥
ಆರ ಸೆಲೆ ಸುಳಿವುದುಂಟದವೊಲಾಗಿಸಿ ನಿನ್ನ।
ಪಾರಗಾಣಿಸ ಬೇಡು – ಮಂಕುತಿಮ್ಮ॥

ಬೇರೆ ಯಾರ ಕೈತುತ್ತಿಗೂ ನಿನ್ನನ್ನು ಕಾಯಿಸದೆ ಯಾರ ಭುಜಕ್ಕೆ ನಿನ್ನನು ಭಾರವಾಗಿಸದೆ ವಿಧಿಯೇ ಈ ಜಗತ್ತಿನಿಂದ ನಿರ್ಗಮಿಸುವ ದಾರಿ ತೋರೋ ಎಂದು ಪರಮಾತ್ಮನಲ್ಲಿ ಬೇಡಿಕೊ ಎಂದು ತಿಳಿಸುತ್ತಾರೆ ಡಿ.ವಿ.ಜಿಯವರು. ಈ ಮುಕ್ತಕದಲ್ಲಿ

*17ಸದ್ದಿಲ್ಲದೇ ನಮ್ಮ ಕೈಲಾದದ್ದನ್ನು ಜಗತ್ತಿಗೆ ನೀಡಿ ತಾನ್ ಎಲೆಯ ಪಿನಿಂತರ್ದು ಥೀನತೆಯ ತೋರಿ ಅಭಿಮಾನವನು ತೊರೆದು ಎಂದು ಮಾನ್ಯ ಗುಂಡಪ್ಪನವರು ಹೇಳುವಂತೆ ಇದ್ದು ಈ ಜಗತ್ತಿನಿಂದ ನಿರ್ಗಮಿಸುವ ವರವನ್ನು ಬೇಡಬೇಕು. ಅಂತಹ ವರದಿಂದ ಆತ್ಮ ಬಂಧನಗಳಿಂದ ಮುಕ್ತವಾಗುತ್ತದೆ ಮತ್ತು ಹೊಸ ಹೊಸ ಬಂಧನಗಳನ್ನು ಅಂಟಿಸಿಕೊಳ್ಳದಂತಹ ಸ್ಥಿತಿಗೆ ತಲುಪುತ್ತದೆ. ನಮ್ಮೆಲ್ಲ ದುಃಖಗಳಿಗೂ ಈ ಬಂಧನಗಳೇ ಕಾರಣವೆಂದಾದ ಮೇಲೆ, ಅದರಿಂದ ಬಿಡುಗಡೆಯ ಬೇಡುವುದೇ ಸೂಕ್ತವಲ್ಲವೆ? ಈ ಜಗತ್ತಿನಲ್ಲಿ ಪಡೆದುಕೊಳ್ಳುವುದನ್ನೆಲ್ಲ ಪಡೆದು, ಕೊಡುವುದನ್ನೆಲ್ಲ ಕೊಟ್ಟು ನಮ್ಮ ಜಾಡ್ಯಗಳು ನಿ:ಶೇಷವಾಗಿ, ನಾವು ಹಗುರಾಗಿ ಈ ಜಗತ್ತಿನಿಂದ ನಿರ್ಗಮಿಸುವ ಆಸೆಯನ್ನು ಹೊಕ್ಕು ಆ ಪರಮಾತ್ಮನಲ್ಲಿ ನಮ್ಮನ್ನು ಹಾಗೆ ಇಲ್ಲಿಂದ ಪಾರುಮಾಡಿಸು ಎಂದು ಬೇಡಬೇಕು ಎನ್ನುವುದೇ ಈ ಮುಕ್ತಕದ ಹೂರಣ. ಅಂತಹ ಸ್ಥಿತಿ ಯಾರಿಗೆ ಬೇಡ ಹೇಳಿ ಕೇವಲ ಬೇಕೆಂದರೆ ಸಾಲದು ಅದಕ್ಕೆ ಅರ್ಹತೆಯನ್ನು ಬೆಳೆಸಿಕೊಳ್ಳಬೇಕು.*17

ಹೀಗೆ ಡಿ.ವಿ.ಜಿ.ಯವರು ಮನುಷ್ಯನು ಸಾಮಾಜಿಕ ಜವಾಬ್ದಾರಿಗಳನ್ನೊಳಗೊಂಡಂತೆ ಹೇಗೆ ಜೀವನ ನಡೆಸಿದರೆ ಸಾರ್ಥಕವೆನಿಸುತ್ತದೆ ಎಂದು ಈ ಮೇಲಿನ ಮುಕ್ತಕಗಳ ಮುಖಾಂತರ ಹೇಳುತ್ತಾ ಹೋಗುತ್ತಾರೆ. ಅಷ್ಟಲ್ಲದೆ ಇವುಗಳೊಂದಿಗೆ ಇನ್ನೂ ಅನೇಕ ಮುಕ್ತಕಗಳಲ್ಲಿ ಸಾಮಾಜಿಕ ಜೀವನದ ಬಗೆಗೆ ತಿಳಿಸಿದ್ದಾರಾದರೂ ಇಲ್ಲಿ ಎಲ್ಲ ಮುಕ್ತಕಗಳನ್ನು ವಿವರಿಸಿ ವಿಶ್ಲೇಷಿಸಲು ಕಾಲಮಿತಿ ಮತ್ತು ವಿಷಯಮಿತಿ ಇರುವುದರಿಂದ ಆಯ್ದ ಮುಕ್ತಕಗಳ ಬಗ್ಗೆ ಮಾತ್ರ ಇಲ್ಲಿ ವಿಶ್ಲೇಷಣೇಯನ್ನು ಮಾಡಲಾಗಿದೆ.

ಸಾಂಸ್ಕೃತಿಕ ಅಂಶಗಳು:–

ಡಿ.ವಿ.ಜಿಯವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಯಾವ ವಿಷಯಗಳನ್ನು ಹೇಳಿಲ್ಲ, ಯಾವ ವಿಷಯಗಳನ್ನು ಹೇಳಿದ್ದಾರೆ. ಎನ್ನುವಂತಿಲ್ಲ. ಬದುಕಿನ ಎಲ್ಲ ಮಗ್ಗುಲುಗಳನ್ನು ಕೈಯಾಡಿಸಿ ತಮ್ಮ ಅನುಭವಗಳಿಂದ ಕಡೆದು ತೆಗೆದ ನವನೀತದಂತೆ ಈ ಮುಕ್ತಕಗಳನ್ನು ರಚಿಸಿದ್ದಾರೆ. ಅದರಲ್ಲಿ ಪ್ರಮುಖವಾದ ಮತ್ತೊಂದು ಅಂಶ ಸಾಂಸ್ಕೃತಿಕ ಅಂಶ.

ಅಡಿ ಟಿಪ್ಪಣಿ *17 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.325. ಸಂಪುಟ–4.

ಮುಕ್ತಕ– 274

ನಯದಿಂದ ಸೋಕು ನೀಂ ದಯೆಯಿಂದ ನೋಡದನು।
ಭಯದಿನೋಲಗಿಸು ನೀಂ ಪೂಜೆಗೈಯದನು॥
ಸ್ವಯಮಂಕುರಿತ ಸಕಲ ವಿಶ್ವಸತ್ವವೋ; ಜೀವ।
ಪ್ರಿಯತಮವೊ ಸೃಷ್ಟಿಯಲಿ – ಮಂಕುತಿಮ್ಮ॥

ನಯವಾಗಿ ಸೋಕು ನೀನು ದಯೆಯಿಂದ ನೋಡು ಅದನು ಓಲೈಸು, ಪೂಜಿಸು, ಪ್ರಪಂಚದದಲ್ಲಿ ಜೀವವೇ ಪ್ರಿಯವಾದುದು. ಇಲ್ಲಿ ಪೂಜಿಸು ಎನ್ನುವುದು ನಮ್ಮ ಹಿಂದೂ ಸಂಸ್ಕೃತಿಯ ಅದರಲ್ಲೂ ಧಾರ್ಮಿಕ ಸಂಸ್ಕೃತಿಯ ಪ್ರತೀಕವಾಗಿದೆ. ಡಿ.ವಿ.ಜಿಯವರು ಪ್ರತಿಯೊಂದು ವಿಚಾರವನ್ನು ಬಳಸಿಕೊಂಡು ಮುಕ್ತಕಗಳನ್ನು ರಚಿಸಿದ್ದಾರೆ. ಈ ಸಂಸ್ಕೃತಿಯನ್ನು ಬಿಂಬಿಸುವಂತಹ ವಿಚಾರಗಳನ್ನು ಒಳಗೊಂಡಂತಹ ಮುಕ್ತಕಗಳನ್ನು ಇಲ್ಲಿ ಪರಾಮರ್ಶಿಸಿ ನೋಡೋಣ. ಅಂತೆಯೇ ಈ ಮುಕ್ತಕದಲ್ಲಿ ಸೃಷ್ಟಿಯಿಂದಲೇ ಎಲ್ಲವೂ ಆಗಿರುವಂತದ್ದು ಇಲ್ಲಿರುವುದು ಪರಮಾತ್ಮ ಎಂದು ಎಲ್ಲ ಜೀವಿಗಳಲ್ಲೂ ಆತ್ಮವು ಸರ್ವೇ ಸಾಮಾನ್ಯವಾಗಿರುತ್ತದೆ. ಇದು ಪರಮಾತ್ಮನ ಕೃಪೆ. ಇದನ್ನು ನಾವು ಅತೀ ಜಾಗರೂಕತೆಯಿಂದ ನೋಡಿಕೊಳ್ಳಬೇಕಾಗುತ್ತದೆ.

*18. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ನಮ್ಮ ಬದುಕನ್ನು 'ರಥಂ ವಿದ್ಧಿ" ಎನ್ನುತ್ತಾನೆ. ಈ ರಥದ ಯಜಮಾನ ಅಥವಾ ರಥಿಕನೇ 'ಆತ್ಮ' ಸಾರಥಿಯೇ 'ಬುದ್ಧಿ' ಮತ್ತು ಅವನ ಕೈಲಿರುವ ಲಗಾಮೇ 'ಮನಸ್ಸು' ಈ ರಥವನ್ನು ಎಳೆಯುವ ಕುದುರೆಗಳೇ ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯಗಳಾದ ಅರಿಷಡ್ವರ್ಗಗಳು.

ಎಲ್ಲಿಯತನಕ ಈ ಕುದುರೆಗಳು ಮನಸ್ಸೆಂಬ ಲಗಾಮಿನ ಮೂಲಕ, ಬುದ್ಧಿಯೆಂಬ ಸಾರಥಿಯ ಹಿಡಿತದಲ್ಲಿ ಇರುತ್ತದೆಯೊ ಅಲ್ಲಿಯ ತನಕ ಯಜಮಾನನಾದ 'ಆತ್ಮ' ತನ್ನ ಗಮ್ಯವನ್ನು ಸುಲಭವಾಗಿ ಸೇರಿಕೊಳ್ಳುತ್ತದೆ. ಆದರೆ ಸಾರಥಿಯಾದ ಬುದ್ಧಿಯ ಹಿಡಿತವಿಲ್ಲದೆ ಕುದುರೆಗಳು ಹಿಡಿತಕ್ಕೆ ಸಿಗದೇ ಓಡಿದರೆ, ಆಗ ಕುದುರೆಗಳು ಎಲ್ಲಿಗೆ ಎಳೆದುಕೊಂಡು ಹೋಗುತ್ತವೆಯೊ ಅಲ್ಲಿಗೆ ರಥ ಓಡುತ್ತದೆ. ಆಗ ಆತ್ಮ ಸೊರಗುತ್ತದೆ. ಕರ್ಮದ ಭಾರ ಹೊತ್ತು ಸೊರಗುತ್ತದೆ.

ಸದ್ವಸ್ತುಗಳನ್ನು, ಸತ್ಸಂಗ ಸದ್ವಿಚಾರಗಳನ್ನು, ಸದ್ಸಂಸ್ಕಾರಗಳನ್ನು ಬೆಳೆಸಿಕೊಂಡು ನಮ್ಮ ಬದುಕಿನ ಒಡೆಯನಾದ 'ಆತ್ಮ'ನನ್ನು ಪರಮಾತ್ಮನೇ ಎಂದು ಅರಿತು ಈ ಎಲ್ಲ ಸದ್ವಸ್ತು, ಸತ್ಸಂಗ, ಸದ್ವಿಚಾರ, ಸದ್ಸಂಸ್ಕಾರಗಳಿಂದ ಅದನ್ನು ಅಲಂಕರಿಸಿ ಪೂಜಿಸಬೇಕು. ಶುದ್ದವಾಗಿಟ್ಟುಕೊಳ್ಳಬೇಕು. ಆಗ ಬದುಕಿನ ರಥ ಸರಿಯಾದ ದಿಕ್ಕಿನಲ್ಲಿ ಓಡಿ ಆತ್ಮನೆಲ್ಲಿ ಸೇರಬೇಕೋ ಅಲ್ಲಿಗೆ ಹೋಗಲು ಸುಗಮವಾಗುತ್ತದೆ. ನಮ್ಮ ಪ್ರಯತ್ನ ಗುರುಕೃಪೆ ಮತ್ತು ಪರಮಾತ್ಮನ ದಯೆಯಿಂದ ಅದು ಸಾಧ್ಯವೆಂದು ಅನಿಸುತ್ತದೆ. ಆತ್ಮವನ್ನು ಶುದ್ಧವಾಗಿಟ್ಟುಕೊಳ್ಳುವ ಪ್ರಯತ್ನವನ್ನು ನಾವೇ ಮಾಡಬೇಕು" *18

ಅಡಿ ಟಿಪ್ಪಣಿ *18 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.91. ಸಂಪುಟ–2.

ಮುಕ್ತಕ– 275

ಸರ್ವರುಂ ಸಾಧುಗಳೆ ಸರ್ವರುಂ ಬೋಧಕರೆ।
ಜೀವನಪರೀಕ್ಷೆ ಬಂದಿದಿರು ನಿಲುವನಕ॥
ಭಾವಮರ್ಮಂಗಳೇಳುವುವಾದಗ ತಳದಿಂದ।
ದೇವರೇ ಗತಿಯಾಗ – ಮಂಕುತಿಮ್ಮ॥

ಈ ಭಾಗದಲ್ಲಿ ಪ್ರತಿಯೊಬ್ಬರೂ ಒಳ್ಳೆಯವರಂತೆಯೇ ಬದುಕು ಸಾಗಿಸಬೇಕೆಂದು ಅಪೇಕ್ಷಿಸುತ್ತಾನೆ. ಇದಕ್ಕೆ ಕಾರಣ ಆಯಾ ಜನರ ರೂಢಿಯಲ್ಲಿರುವ ಸಂಸ್ಕೃತಿಯೆನ್ನಬಹುದು. ಇಲ್ಲಿ ಸಾಧುಗಳೆ ಸರ್ವರುಂ ಬೋಧಕರೆ ಜೀವನ ಪರೀಕ್ಷೆ ಅಂದರೆ ಸಾಧುಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುವವರಾಗಿದ್ದಾರೆ. ಈ ಭಾರತ ದೇಶದಲ್ಲಿರುವಷ್ಟು ಸಾಧು ಸಂತರು ಬೇರೆಲ್ಲೂ ಕಾಣಿಸುವುದಿಲ್ಲ ಮತ್ತು ಹಾಗೆಯೇ ಇಲ್ಲಿನ ಜನರು ಭಯ ಭಕ್ತಿಗಳಿಂದ ಅವರನ್ನು ಕಾಣುತ್ತಾರೆ. ಇದಕ್ಕೆಲ್ಲಾ ಕಾರಣ ನಮ್ಮ ಇಲ್ಲಿನ ಸಂಸ್ಕೃತಿಯೆನ್ನಬಹುದು.

ಜೀವನವೆಂಬ ಪರೀಕ್ಷೆ ಬಂದು ಎದುರು ನಿಲ್ಲುವ ತನಕ ಭಾವಗಳು ಅದರ ಮರ್ಮಂಗಳು ಏಳುವವು ತಳದಿಂದ. ಆಗ ಆ ದೇವರೇ ಗತಿಯಾಗುತ್ತಾನೆ. ಅಂದರೆ ಸಂಕಟ ಬಂದಾಗ ವೆಂಕಟರಮಣ ಎನ್ನುವಂತಹ ಪರಿಸ್ಥಿತಿ ಜನರದ್ದು. ಈ ಜಗತ್ತಿನಲ್ಲಿ ಅನೇಕರು ಸಭ್ಯರಂತೆ ಒಳ್ಳೆಯವರಂತೆ ಕಾಣುತ್ತಾರೆ. ಅಂದರೆ ಜನರಿಗೆ ಒಂದು ರೀತಿಯ ಒಂದು ಕಷ್ಟ ಬರುವವರೆಗೆ ಮಾತ್ರ ಹೀಗೆ ಇರುತ್ತಾರೆ ಆನಂತರ ಸತ್ಯದ ಅರಿವಾಗುತ್ತದೆ ಇವರಿಗೆ. ಈ ಜಗತ್ತಿನಲ್ಲಿ ಜನರು ಮಾಡುವ ಪ್ರಮುಖ ಕೆಲಸಗಳೆಂದರೆ ಎರಡು ಒಂದು ಇನ್ನೊಬ್ಬರ ತಪ್ಪನ್ನು ಎತ್ತಿ ತೋರಿಸುವುದು ಇನ್ನೊಂದು ಇತರರಿಗೆ ಉಚಿತ ಸಲಹೆಗಳನ್ನು ನೀಡುವುದು.

ಕೆಲವರಿಗೆ ವಿಷಯವೇ ಬೇಕಿಲ್ಲ ಅವರುಗಳು ಇತರರ ತಪ್ಪುಗಳನ್ನು ಎತ್ತಿ ಹಿಡಿಯುತ್ತಾರೆ. ಆದ್ದರಿಂದ ಕೆಲವರ ಇಂತಹ ಸ್ವಭಾವಗಳನ್ನು ನೋಡಿದವರು ಕೈಲಾದರೆ ಸಹಾಯ ಮಾಡಬೇಕು. ಆಗದೆ ಇದ್ದರೆ ಸುಮ್ಮನಿರಬೇಕೆಂದು ಹೇಳುವುದನ್ನು ಕೇಳಿದ್ದೇವೆ. ಇನ್ನೊಬ್ಬರ ತಪ್ಪನ್ನು ಎತ್ತಿ ತೋರುವುದು ಮತ್ತು ಅನಗತ್ಯ ಅನವಶ್ಯಕ ಸಲಹೆ ನೀಡುವುದು ಎರಡೂ ಕೂಡ ಸಲ್ಲದು ಅವರವರೇ ಅಂತಹ ಪರಿಸ್ಥಿತಿಗೆ ಸಿಕ್ಕಾಗ ಅವರಿಗೆ ಪರಿಸ್ಥಿತಿಯ ಅರಿವಾಗುತ್ತದೆ. ಇನ್ನೊಬ್ಬರನ್ನು ಸಂಕಷ್ಟಕ್ಕೆ ಸಿಲುಕಿಸುವ ಬದಲು ನಾವು ವಿವೇಚನೆಯಿಂದ ವರ್ತಿಸಬೇಕು.

ಮುಕ್ತಕ– 435

ರಾಮಣೀಯಕದಿ ನಲಿವಕ್ಷಿಯೊಡನಚಲಮನ।
ಪ್ರೇಮಮಯಮನದೊಡನೆ ಮೋಹಬಡದಾತ್ಮ॥
ಭೀಮಬಲದೊಡನೆ ರಾಮನ ಅಭಯ ನಿಯಮವಿರೆ।
ಯಾಮಳ ವರಂಗಳವು – ಮಂಕುತಿಮ್ಮ॥

[illegible]

[illegible]

[illegible]

[illegible]

ಮನುಷ್ಯನು ಸುಂದರವಾದುದೆಲ್ಲವೂ ನನಗೆ ಇರಲಿ ಎಂದು ಬಯಸುವವನು. ಅಂದರೆ ಸುಂದರವಾದ ಕಣ್ಣಳಿಗೆ ಆನಂದವೀಯುವ ವಸ್ತುವೊಂದನ್ನು ನೋಡಿದರೂ ಸಹ ಅದಕ್ಕೆ ಮನಸೋಲದಷ್ಟು ಗಟ್ಟಿ ಮನಸ್ಸಿರುವಂತಹ ಭೀಮನಂತಹ ಶಕ್ತಿ, ಯುಕ್ತಿ ವಿವೇಚನೆ ಮತ್ತು ರಾಮನ ಅಭಯವಿರುವಂತೆ ಲೋಕದ ಸಂಗ್ರಹಕ್ಕಾಗಿ ಮಾತ್ರ ಉಪಯೋಗಿಸುವಂತಹ ತಮಗೆ ತಾವೇ ನೀತಿ ನಿಯಮಗಳ ಬೇಲಿ ಹಾಕಿಕೊಂಡಂತೆ ಈಗಲೂ ರಾವಣನು ಕ್ಷಮೆ ಯಾಚಿಸಿದರೆ ಈಗಲೂ ಕ್ಷಮಿಸುತ್ತೇನೆ ಎಂದು ರಾಮಾಯಣದಲ್ಲಿ ರಾಮನು ಹೇಳುವಂತೆ ಎರಡು ವರಗಳು ಮಾತ್ರ ನಮ್ಮ ಜೀವನದ ನಿಯಮಗಳಾಗಿರುವಂತಿರಬೇಕು. ಅಂದರೆ ಇಲ್ಲಿ ಸಂಸ್ಕೃತಿಯು ಕ್ಷಮಾಗುಣ ಎಲ್ಲಕ್ಕಿಂತ ಹಿರಿದು ಎಂಬುದನ್ನು ತೋರಿಸುತ್ತದೆ.

ಭೀಮನಂತೆ ಬಲಶಾಲಿಯಾಗಿದ್ದರೂ, ವಿಚಲಿತನಾಗದಂತೆ ರಾಮನಂತೆ ಆತನ ಶಕ್ತಿಯನ್ನು ಲೋಕೋದ್ಧಾರಕ್ಕಾಗಿ ಮತ್ತು ಜನರ ಹಿತಕ್ಕಾಗಿ ಉಪಯೋಗಿಸುವಂತಹ ಎರಡು ಗುಣಗಳು ನಮ್ಮಲ್ಲಿ ವರಗಳಿದ್ದಂತೆ. ದಿನನಿತ್ಯದ ಆಗುಹೋಗುಗಳಲ್ಲಿ ಯಾವುದೇ ಸುಂದರ ವಸ್ತುಗಳು ಕಣ್ಣಿಗೆ ಬಿದ್ದರೂ ಅದನ್ನೆಲ್ಲ ಪಡೆಯಬೇಕು ಅನುಭವಿಸಬೇಕು ಎನ್ನುವ ಆಸೆ ಇರುತ್ತದೆ. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಈ ಮುಕ್ತಕದಲ್ಲಿ ರಾಮನ ಗುಣಗಳನ್ನು ರಾವಣನ ಗುಣಗಳನ್ನು ಭೀಮನ ಸಾಮರ್ಥ್ಯವನ್ನು ಪ್ರತಿಪಾದಿಸುತ್ತದೆ. ಇನ್ನು ಸಮಾಜದಲ್ಲಿ ಬದುಕುವುದು ಒಂದು ಸಂಸ್ಕೃತಿ ಸಂಪ್ರದಾಯದ ಆಧಾರವು ಇದ್ದೇ ಇರುತ್ತದೆ.

ಮುಕ್ತಕ– 438

ತಳಿರ ನಸುಗೆಂಪು, ಬಳುಕೆಲೆಯ ಹಸುರಿನ ಸೊಂಪು।
ತಿಳಿಮನದ ಯುವ ಜನದ ನಗುಗಣ್ಣ ಹೊಳಪು॥
ಬೆಳೆವರಿವು ಮಗುದುಟಿಯಿನುಣ್ಮೆಸುವ ನುಡಿಚಿಗುರು।
ಇಳೆಯೊಳಿವನೊಲ್ಲನಾರ್? – ಮಂಕುತಿಮ್ಮ॥

ಚಿಗುರಿನ ನಸುಗೆಂಪು ಬಳುಕುವ ಹಸಿರಿನೆಲೆಯ ಸೊಂಪು ಎಲೆಗಳ ಬಳ್ಳಿಗಳು ಯುವ ಜನರ ಕಣ್ಣನಗುವಿನ ಹೊಳಪುಗಳು ಎಳೆ ಮಗುವಿನ ಮಾತು ಕಲಿಯುವಾತುರದ ತೊದಲ್ನುಡಿಗಳು ಇದೆಲ್ಲವನ್ನೂ ನೋಡಿ ಅನಂದಿಸದೆ ಇರುವ ಮನುಷ್ಯರುಂಟೆ ಭೂಮಿಯ ಮೇಲೆ? ಎಂದು ಪ್ರಶ್ನಿಸುತ್ತಾರೆ ಡಿ.ವಿ.ಜಿಯವರು.

ಅಷ್ಟಲ್ಲದೆ ಪ್ರಾಣಿ ಮರಿಗಳು, ಪುಟ್ಟ ಮಗು ಹೀಗೆ ಇವೆಲ್ಲವುಗಳೂ ಕೂಡ ಮನುಷ್ಯನ ಮನಸ್ಸಿಗೆ ಒಂದಲ್ಲ ಒಂದು ರೀತಿಯಲ್ಲಿ ಮುದ ನೀಡುತ್ತವೆ. ಕಪಟವಿಲ್ಲದತನ ಮುಗ್ಧತೆ, ಉತ್ಸಾಹ, ಇನ್ನೂ ಅನೇಕ ವಿಷಯಗಳು ನಮ್ಮ ಮನಸ್ಸಿಗೆ ಉಲ್ಲಾಸ ನೀಡುತ್ತವೆ. ಇವುಗಳನ್ನು ಇಳೆಯೊಳು ವಲ್ಲೆ ಎನ್ನುತ್ತಾರೆಯೆ? ಎಂದು ಕೇಳುತ್ತಾರೆ ಡಿ.ವಿ.ಜಿ.

ಇಂತಹ ಸುಂದರವಾದ ವಸ್ತುಗಳನ್ನು ನೋಡಿ ಸಂತಸಪಡಲಾರೆ ಎನ್ನುವ ಅರಸಿಕ ಶಿಖಾಮಣಿಗಳು ಯಾರಿದ್ದಾರೆ? ಎಂದು ಪ್ರಶ್ನಿಸುತ್ತಾರೆ ಮನುಷ್ಯ ಸಣ್ಣ ಪುಟ್ಟ ಆನಂದಗಳನ್ನು ಅನುಭವಿಸದೇ ನಿರ್ಲಿಪ್ತ ಮನಸ್ಕನಾಗಿದ್ದರೆ ಅದು ಅವರವರ ಭಾವಕ್ಕೆ ಭಕುತಿಗೆ ಎನ್ನುವಂತಾಗುತ್ತದೆ.

ಮುಕ್ತಕ– 439

ಏಳಿಸುವುದೊಂದು ಹೊರಸುಳಿವೆನ್ನ ಹೃದಯದಲಿ।
ಗಾಳಿಸುಂಟರೆಯನದು ಹರಣಗಳ ಕುಲುಕಿ॥
ಬಾಳನಲ್ಲಾಡಿಪುದು ಬೇರಿಂದ ತುದಿಗೆ।
ಧೂಳದೊರಳೀ ಜನ್ಮ – ಮಂಕುತಿಮ್ಮ॥

ನಮ್ಮ ಬದುಕಿಲ್ಲಿ ನಾವು ಒಂದು ಬಿಂದುವಾಗಿದ್ದರೆ ಅನೇಕ ವಿಚಾರಗಳ ದಾಳಿಗಳು ನಡೆಯುತ್ತಲೇ ಇರುತ್ತವೆ. ಇಂತಹ ವಿಚಾರಗಳ ವಿಷಯದಲ್ಲಿ ಕೆಲವನ್ನು ಸ್ವೀಕರಿಸಿ, ಕೆಲವನ್ನು ತಿರಸ್ಕರಿಸುವ ಕಲೆ ಸಂಸ್ಕೃತಿ ನಮಗಿರಬೇಕು.

*19. ಬಿರುಗಾಳಿಗೆ ಒಡ್ಡಿನಿಂತ ಮರದಂತೆ ನಾವೂ ಸಹ ನಮ್ಮ ಹೊರಗಿನಿಂದ ಆಗುವ ದಾಳಿಗೆ ಒಡ್ಡಿ ನಿಲ್ಲುತ್ತೇವೆ. ಹೀಗೆ ಆ ಮರ ಬೀಸುವ ಗಾಳಿಯಿಂದ ಸುಡುವ ಬಿಸಿಲಿನಿಂದ, ಸುರಿಯುವ ಮಳೆಯಿಂದ ಬೇರು ಬಿಟ್ಟ ಇಳೆಯಿಂದ ಪ್ರಭಾವಿತಗೊಂಡು ತಾನು ರೂಪುಗೊಳ್ಳುತ್ತದೆಯೋ ಹಾಗೆಯೇ ನಾವೂ ಸಹ ನಮ್ಮ ಮನೆ, ಸಮಾಜ, ಮಿತ್ರರು, ಹಿರಿಯರು, ಕಿರಿಯರು, ಪರಿಚಿತರು, ಅಪರಿಚಿತರು ಹೀಗೆ ಯಾವುದೇ ರೀತಿಯಿಂದ ನಮ್ಮ ಸಂಪರ್ಕಕ್ಕೆ ಬರುವ ಎಲ್ಲರಿಂದಲೂ ಪ್ರಭಾವಿತರಾಗುತ್ತೇವೆ. ಏನೇ ಆಗಬೇಕಾದವರು ಏನೋ ಆಗಿಬಿಡುತ್ತೇವೆ. ಎಷ್ಟೋ ಬಾರಿ ಮೂಲ ಗುಣ ಕಳೆದುಹೋಗಿ ಪ್ರಭಾವಿತ ಗುಣಗಳೇ ಹೆಚ್ಚಾಗಿ ಒಳ್ಳೆಯ ಸಂಗಿತಗಾರನಾಗಬೇಕೆಂದಿದ್ದವನು. ಮೇಲಿನ ಕನಿಷ್ಠ ಬಿಲ್ಲೆಯಾಗಿ ಬಿಡುತ್ತಾನೆ. ಅಥವಾ ವೇದ ಪಂಡಿತನಾಗಬೇಕು ಎಂದಿದ್ದವನು, ನ್ಯಾಯವಾದಿಯಾಗುತ್ತಾನೆ. ಹಾಗಾಗಿ ನಾವು ಏನಾಗಬೇಕು ಅಥವಾ ಏನಾಗುತ್ತೇವೆ ಎನ್ನುವುದು ನಮ್ಮ ಕೈಯಲ್ಲಿ ಇಲ್ಲವೆಂಬುದು ಶತಃಸಿದ್ಧ.*19

"ಧೂಳದೊರಳಿ ಜನ್ಮ" ಎಂದು ಗುಂಡಪ್ಪನವರು ಹೇಳುವಂತೆ ನಾವು ಹೊರ ಸುಳಿಯಲ್ಲಿ ಸಿಕ್ಕ ಧೂಳ ಕಣದಂತೆ ಆದರೆ ಸಕಲ ಚರಾಚರಗಳು ಇದೇ ಸ್ಥಿತಿಯಲ್ಲಿದ್ದಾಗ್ಯೂ ಮಾನವರಾದ ನಮಗೆ ವಿವೇಚನೆ, ವಿವೇಕ ಮತ್ತು ವಿಷಮ ಸ್ಥಿತಿಯಲ್ಲಿಯೂ ನಮ್ಮನ್ನು ನಾವು ರೂಪಿಸಿಕೊಳ್ಳುವ ಕ್ಷಮತೆಯನ್ನು ಪರಮಾತ್ಮ ಸ್ವಲ್ಪ ಅಧಿಕವಾಗೇ ಕೊಟ್ಟಿದ್ದಾನೆ. ಅದನ್ನುಪಯೋಗಿಸಿಕೊಂಡು ನಮ್ಮ ಬಾಳನ್ನು ಹಸನಾಗಿಸಿಕೊಳ್ಳಬಹುದಲ್ಲವೇ?

ಮುಕ್ತಕ– 440

ಹೊರಗೆ ಹೊಳೆವೊಂದು ಹೊಳಪಿನ ಕಿರಣವೆನ್ನೆದೆಯೋ।
ಉರಿಯನೆಬ್ಬಿಸಿ ಹೊಗೆಯನೆರಚಿ ಕಣ್ಣಾಳಿಗೆ॥
ಕೆರಳಿಪುವು ಕರಣಗಳ, ಮರಳಿಪುದು ಹರಣಗಳ।
ಹೊರಮೋಹವೊಳದಾಹ – ಮಂಕುತಿಮ್ಮ॥

ಅಡಿ ಟಿಪ್ಪಣಿ *19 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.279. ಸಂಪುಟ–2.

ಹೊರಗಿನ ಹೊಳೆವ ಹೊಳಪಿನ ಕಿರಣವೊಂದು ಎದೆಯ ಹೊಗೆಯನ್ನು ಎಬ್ಬಿಸಿ ಕಣ್ಣಳನ್ನು, ಕಿವಿಗಳನ್ನು, ಕೆರಳಿಸುತ್ತವೆ. ನಿತ್ಯವೂ ನಮ್ಮ ಜೀವನದಲ್ಲಿ ಘಟಿಸುವ ಹೊರಗಿನ ಹೊಳಪುಗಳು ಎಂದರೆ ವಸ್ತುಗಳ ಆಕರ್ಷಣೆಯೇ ಕಾರಣ ಅವುಗಳ ವಿಶೇಷತೆಗಳೇ ನಮ್ಮನ್ನು ಆಕರ್ಷಿಸುತ್ತವೆ, ನಮ್ಮನ್ನು ಚಂಚಲಗೊಳಿಸುತ್ತವೆ. ಇದರಿಂದಲೇ ನಮ್ಮ ಇಂದ್ರಿಯಗಳ ಮೇಲಿನ ಹಿಡಿತ ತಪ್ಪುವ ಸಾಧ್ಯತೆಯಿರುತ್ತದೆ. ಕಂಡ ಕಂಡ ವಸ್ತುಗಳ ಮೇಲಿನ ಆಕರ್ಷಣೆಯು ನಮ್ಮ ಮನಸ್ಸಿನಲ್ಲಿ ಮಂಥನ ನಡೆಸುತ್ತದೆ.

*20.ಪ್ರತಿನಿತ್ಯ ನಮ್ಮ ಜೀವನದಲ್ಲಿ ನಡೆಯುವ ಎಲ್ಲಕ್ಕೂ ಹೊರಗಿನ ಹೊಳಪುಗಳು ಎಂದರೆ ಆಕರ್ಷಣೆಗಳೇ ಕಾರಣ. ಅವು ತಮ್ಮ ವಿಶೇಷತೆಗಳನ್ನು ನಮಗೆ ತೋರುತ್ತಾ ನಮ್ಮ ಮೇಲೆ ಪ್ರಭಾವ ಬೀರುತ್ತಾ ನಮ್ಮ ಒಳಗನ್ನು ತುಂಬುತ್ತವೆ. ಹಾಗೆ ತುಂಬಿದ ಅವುಗಳು ನಮ್ಮನ್ನು ಪ್ರಭಾವಿತಗೊಳಿಸುತ್ತಾ ನಮ್ಮನ್ನು ರೂಪಿಸುತ್ತವೆ. ನಮ್ಮ ಇಂದ್ರಿಯಗಳನ್ನು ಕೆರಳಿಸುತ್ತಾ ನಮ್ಮ ಶಕ್ತಿಯನ್ನು ಹೆಚ್ಚಿಸುವುದೋ ಅಥವಾ ಕುಂದಿಸುವುದೋ ಮಾಡುತ್ತದೆ. ನಾವು ಇಷ್ಟಪಡಲಿ ಬಿಡಲಿ ವಸ್ತು ವಿಷಯಗಳು ಮತ್ತು ವ್ಯಕ್ತಿಗಳು ನಮಗೆ ಕಾಣುತ್ತವೆ. ಕಂಡ ವಸ್ತುಗಳ ವಿಶ್ಲೇಷಣೆ ಮನದಲ್ಲಿ ನಡೆಯುತ್ತದೆ. ಬೇಕು ಬೇಡಗಳ ಮಂಥನ ನಡಯುತ್ತದೆ. ಮೋಹ ಮತ್ತು ವಿವೇಕಗಳ ನಡುವೆ ಯುದ್ಧವಾಗುತ್ತದೆ. ಯಾವುದರ ಕೈ ಮೇಲಾಗುತ್ತದೋ. ಅದರ ವಿಜಯ ಮತ್ತು ಅದರ ಪರಿಣಾಮ ನಮ್ಮ ಮೇಲೆ ಇರುತ್ತದೆ.

"ಭದ್ರಂ ಕರ್ಣಣೇಭಿಶೃಣುಯಾಮ ದೇವಾ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾ" ಎಂಬ ಆಶಯವನ್ನು ಬೋಧಿಸುವ ವೇದವು ಮನುಷ್ಯನನ್ನು ಒಳ್ಳೇಯದನ್ನೆ ನೋಡುವ ಮತ್ತು ಕೇಳುವುದಕ್ಕೆ ಪ್ರೇರೇಪಿಸುತ್ತದೆ. ಹಾಗಾಗಿ ನಾವು ಸಚೇತರಾಗಿ ಅಂತರ್ಮುಖಿಗಳಾಗಿ ಹೊಸ ಮೋಹಗಳು ಮತ್ತು ಒಳದಾಹಗಳಿಂದ ನಮ್ಮನ್ನು ನಾವು ಕಾಪಾಡಿಕೊಳ್ಳುವ ಪ್ರಯತ್ನವನ್ನು ಮಾಡಲೇ ಬೇಕು.*20

ಅಂದರೆ ಇಲ್ಲಿ ಎಲ್ಲವೂ ನಮ್ಮ ಮೇಲೆ ಪ್ರಭಾವ ಬೀರುವಂತಹುದೇ ಆಗಿದೆ. ಜಗತ್ತಿನ ಪ್ರತಿಯೊಂದು ವಸ್ತುವೂ ಕೂಡ ತನ್ನದೇ ಆದ ಒಂದು ಆಕರ್ಷಣೆಯನ್ನು ಹೊಂದಿದೆ ಹಾಗಾಗಿ ಮನುಷ್ಯ ಅದಕ್ಕೆ ಆಕರ್ಷಿತನಾಗಿ ತನ್ನೊಳಗೆ ತನ್ನತನವನ್ನು ಕಳೆದುಕೊಳ್ಳುವ ಸಮಾಜದಲ್ಲಿ ಒಬ್ಬ ಸುಸಂಸ್ಕೃತ ನೆನಿಸಿಕೊಳ್ಳುವಲ್ಲಿ ಎಡವುತ್ತಾನೆ. ಒಳಮನಸ್ಸಿನಲ್ಲಿ ನಡೆಯುವಂತಹ ಒಳವ್ಯಾಪಾರವು ಹೊರ ಜಗತ್ತನ್ನು ತನ್ನೊಳಗೆ ತುಂಬಿಕೊಂಡು ಒಂದು ಸಮತೋಲನದಿಂದಲೇ ಜೀವನ ಸಾಗಿಸುವುದನ್ನು ಸ್ವಾಂತದಿಕ್ಕೆಲಗಳವು' ಎಂದು ಹೇಳುತ್ತಾರೆ.ಡಿ.ವಿ.ಜಿ.

ಅಡಿ ಟಿಪ್ಪಣಿ *20 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.280. ಸಂಪುಟ–2.

ಅಧ್ಯಾಯ – 04

'ಮಂಕುತಿಮ್ಮನ ಕಗ್ಗ'ದಲ್ಲಿ ಕಂಡುಬರುವ ರಾಜಕೀಯ ಮತ್ತು ವ್ಯಾವಹಾರಿಕ ಅಂಶಗಳು

ರಾಜಕೀಯ ಅಂಶಗಳು

ಡಾ॥ ಡಿ.ವಿ.ಗುಂಡಪ್ಪನವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಎಲ್ಲ ವಿಚಾರಗಳನ್ನು ಕೈಯಾಡಿಸಿ ಅನುಭವದ ನವನೀತವನ್ನು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಚೌಪದಿಗಳ ರೂಪದಲ್ಲಿ ಮುಕ್ತಕಗಳ ರೂಪದಲ್ಲಿ ನೀಡಿದ್ದಾರೆ. ಮಂಕುತಿಮ್ಮನ ಕಗ್ಗದ 945 ಮುಕ್ತಕಗಳಲ್ಲಿ ಅನೇಕ ಮುಕ್ತಕಗಳು ರಾಜಕೀಯ ವಿಷಯಗಳನ್ನು ಒಳಗೊಂಡಿವೆ. ಆದರೆ ಇಲ್ಲಿ ಕೆಲವನ್ನು ಮಾತ್ರ ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ.

ಮುಕ್ತಕ– 658

ಎದ್ದೆದ್ದು ಬೀಳುತಿಹೆ ಗುದ್ದಾಡಿ ಸೋಲುತಿಹೆ।
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ॥
ಉದ್ಧರಿಸುವೆನು ಜಗವನೆನ್ನುತಿಹ ಸಖನೆ ನಿ।
ನ್ನುದ್ಧಾರವೆಷ್ಟಾಯ್ತೊ? – ಮಂಕುತಿಮ್ಮ॥

ಎದ್ದೆದ್ದು ಬೀಳುತ್ತಿರುವೆ ಮತ್ತೆ ಮತ್ತೆ ಈ ಜಗದಲ್ಲಿ ಗುದ್ದಾಟ ಹೊಡೆದಾಟಗಳನ್ನು ಮಾಡಿ ಬಾಳುತ್ತಿರುವೆ. ಹಾಗೆಯೇ ಪ್ರಸಿದ್ಧನಾಗುತಿರುವೆ ಜನವನ್ನು ಉದ್ಧಾರ ಮಾಡುತ್ತೇನೆಂದು ಹೇಳಿಕೊಳ್ಳುತ್ತಿರುವ ನನ್ನ ಗೆಳೆಯನೆ ಈ ಗದ್ದಲಗಳಲ್ಲಿ ನಿನ್ನ ಉದ್ಧಾರ ಎಷ್ಟಾಯ್ತು ಎನ್ನುವ ಲೆಕ್ಕವನ್ನೇನಾದರೂ ಇಟ್ಟಿರುವೆಯೇನು? ಎನ್ನುತ್ತಾರೆ ಡಿ.ವಿ.ಜಿಯವರು.

ಈ ಮೇಲಿನ ಸಾಲುಗಳು ಡಿ.ವಿ.ಜಿಯವರ ಈ ಕಗ್ಗವನ್ನು ಬರೆದ ಕಾಲಕ್ಕೆ ಅನ್ವಯವಾಗುವುದಕ್ಕಿಂತ ಇಂದಿನ ದಿನಕ್ಕೆ ಹೆಚ್ಚು ಪ್ರಸ್ತುತವೆನಿಸುತ್ತದೆ. ಕೆಲವರು ಏನೇ ಬಿರುದು ಬಾವಲಿಗಳು ಬಂದರೂ ಎಷ್ಟೇ ಶ್ರೀಮಂತರಾಗಿದ್ದರೂ ಕೂಡ ಯಾವುದೇ ರೀತಿಯ ಅಬ್ಬರ ಪ್ರಚಾರಗಳಿಲ್ಲದೆ ಸಮಾಧಾನ ಚಿತ್ತರಾಗಿ ಬದುಕುತ್ತಿರುತ್ತಾರೆ. ಅದರೆ ಕೆಲವರು ಡಂಬಾಚಾರದಿಂದ ಬದುಕುವವರು ಪ್ರಸಿದ್ಧಿ ಹೊಂದಲು ತವಕಿಸುತ್ತಾರೆ. ಇಂತಹವರಲ್ಲಿ ಪ್ರಮುಖವಾಗಿ ಕಂಡುಬರುವವರು ರಾಜಕಾರಣಿಗಳಲ್ಲಿ ಹೆಚ್ಚು.

*21. ಆದರೆ ಅಂತಹ ಅಂತಃಸತ್ವವಿಲ್ಲದವರು ಡಂಬಾಚಾರದಿಂದ ಪ್ರಸಿದ್ಧಿ ಹೊಂದುತ್ತಾರೆ. ಅದಕ್ಕೆ ಇಂದಿನ ನಮ್ಮ ರಾಜಕಾರಣಿಗಳೇ ಸೂಕ್ತ ಉದಾಹರಣೆ, ವಿದ್ಯೆ, ಸಂಸ್ಕಾರ, ಸನ್ನಡತೆ, ಸದ್ವಿಚಾರಗಳಂತಹ ಗುಣಗಳ ಬಲವಿಲ್ಲದೆ ಕೇವಲ ಗುಂಪುಗಾರಿಕೆ ಮಾಡಿಕೊಂಡು ತಮ್ಮನ್ನು ತಾವೇ ದ್ರೋಹ ಮಾಡಿಕೊಳ್ಳುತ್ತಾ ಇಡೀ ಜಗತ್ತಿಗೆ ದ್ರೋಹ ಮಾಡಬಲ್ಲ ಕ್ಷಮತೆಯನ್ನು ಬೆಳೆಸಿಕೊಂಡು, ಕೇವಲ ಪ್ರಚಾರದಿಂದ ಮಾತ್ರ ತಮ್ಮ ಹೆಸರನ್ನು ಉಳಿಸಿಕೊಳ್ಳಲು, ಹೆಣಗುವ ಇವರನ್ನು ನೋಡಿಯೇ ಇರಬೇಕು. ಮಾನ್ಯ ಗುಂಡಪ್ಪನವರು ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ ಎಂದು ಹೇಳಿರಬೇಕು.

ಅಡಿ ಟಿಪ್ಪಣಿ *21 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.260–261. ಸಂಪುಟ–3.

[illegible]

ತಮ್ಮನ್ನು ತಾವು ಸಮಾಜ ಸೇವಕರೆಂದು ಕರೆದುಕೊಳ್ಳುವ ಇವರುಗಳು ನಿಜ ಸ್ವರೂಪದಲ್ಲಿ ಸಮಾಜ ಘಾತುಕರು, ತಮ್ಮ ಪದವಿ ಪ್ರಾಬಲ್ಯ ಮತ್ತು ಹೆಸರನ್ನು ಉಳಿಸಿಕೊಳ್ಳಲು ಇವರು ಮಾಡುವ ಪ್ರಯತ್ನದ ಫಲವೇ ಸಮಾಜದಲ್ಲಿ ನಡೆಯುವ ದಂಗೆ, ದುಂಡಾವರ್ತಿ ಮುಂತಾದ ಸಾಮಾಜಿಕ ದುರಂತಗಳು, ಅವರು ಸತ್ಕಾರ್ಯಗಳನ್ನು ಮಾಡುವುದೇ ಇಲ್ಲ. ಅವುಗಳ ಬಲದಿಂದ ಅವರಿಗೆ ಒಳ್ಳೆಯ ಹೆಸರು ಬರುವುದೇ ಇಲ್ಲ ಹೀಗಲ್ಲದಿದ್ದರೆ ಹಾಗೆ ಎಂದು ವಾಮಮಾರ್ಗದಲ್ಲಿ ಹೆಸರು ಉಳಿಸಿಕೊಳ್ಳಲು ಬಯಸುವ ಇವರೇ ಗೂಂಡಾಗಳನ್ನು, ದುಷ್ಟರನ್ನು ಸಾಕುವವರು. ಇವರೇ ಅಧೋಗತಿಗೆ ಇಳಿದ ಮೇಲೆ, ಇನ್ನು ಸಮಾಜವನ್ನು ಹೇಗೆ ಉದ್ಧಾರ ಮಾಡಿಯಾರು? ಅಂತರಂಗದಲ್ಲಿ ಕುಸಿದ, ಕೊಳೆತು ನಾರುವ ದುರ್ನಡತೆಯ ಈ ಜನರಿಂದ ಸಮಾಜದ ಉದ್ಧಾರ ಸಾಧ್ಯವೇ ಇಲ್ಲ. ಸತ್ಕಾರ್ಯದಿಂದ ಹೆಸರು ಪಡೆದರೆ, ಆ ಕಾರ್ಯ ಮತ್ತು ಕರ್ತೃ ಇಬ್ಬರೂ ಉದ್ಧಾರವಾದಾರು. ಅಲ್ಲದೆ ದುಷ್ಕಾರ್ಯಗಳಿಂದ ಹೆಸರು ಪಡೆಯಲು ಪ್ರಯತ್ನಪಟ್ಟರೆ ಕಾರ್ಯವೂ ಹಾಳು, ಕರ್ತವ್ಯ ನಾಶವಾಗುತ್ತಾನೆ.*21

ಹೀಗೆ ಡಿ.ವಿ.ಜಿ.ಯವರು ಬರೆದ 'ಮಂಕುತಿಮ್ಮನ ಕಗ್ಗ'ದ ಒಂದೊಂದು ಮುಕ್ತಕವೂ ಒಂದೊಂದು ಮುತ್ತಿನಂತೆ. ಸರ್ವಕಾಲಕ್ಕೂ ಅನ್ವಯವಾಗುವ ಸಾರ್ವಕಾಲಿಕ ಸತ್ಯಗಳಾಗಿವೆ.

ಮುಕ್ತಕ– 660

ಗರುವ ಭಂಗವನಾಗಿಸಿದನು ಗರುಡಂಗೆ ಹರಿ।
ಮುರಿಯಿಸಿದನಂತೆ ಫಲುಗುಣನ ಹೆಮ್ಮೆಯನು॥
ಕರುಬುವಂ ವಿಧಿ ಸೈಸನಾರೊಳಂ ದರ್ಪವನು।
ಶಿರವ ಬಾಗಿಹುದೆ ಸರಿ – ಮಂಕುತಿಮ್ಮ॥

ಹರಿಯು ಗರುಡನಿಗೆ ಗರ್ವಭಂಗವಾಗಿಸಿದನು ಗರುಡನ ತಾಯಿ ವಿನುತೆ. ಸವತಿಯಾದ ಕದ್ರುವಿನೊಡನೆ ಪಂದ್ಯದಲ್ಲಿ ಸೋತು ಅವಳ ದಾಸ್ಯವನ್ನು ಸ್ವೀಕರಿಸುತ್ತಾಳೆ. ತಾಯಿಯನ್ನು ದಾಸ್ಯದಿಂದ ಮುಕ್ತಗೊಳಿಸಲು ದೇವಲೋಕಕ್ಕೆ ತೆರಳಿ ಅಮೃತ ತರಬೇಕಾಗುತ್ತದೆ. ಆ ಮಧ್ಯೆ ಅಮೃತಕ್ಕಾಗಿ ದೇವತೆಗಳೊಂದಿಗೆ ಹೋರಾಡಬೇಕಾಗುತ್ತದೆ. ಆನಂತರ ಇಂದ್ರನ ವಿರುದ್ಧ ಯುದ್ಧಕ್ಕೆ ನಿಲ್ಲಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಇಂದ್ರನು ಹರಿಯ ಮೊರೆಹೋಗುತ್ತಾನೆ ಹರಿಯು ತನ್ನ ಪಾದದಡಿ ನಲುಗುವಂತೆ ಗರುಡನಿಗೆ ಮಾಡುತ್ತಾನೆ. ಆಗ ಗರುಡನ ಗರ್ವಭಂಗವಾಗುತ್ತದೆ. ಇದು ಭಾಗವತ ಪುರಾಣದಲ್ಲಿ ಬರುವ ಕಥೆ. ಇದೇ ರೀತಿ ಮಹಾಭಾರತದಲ್ಲಿಯೂ ಕೂಡ ಅರ್ಜುನನು ಇದೆ ರೀತಿ ಗರ್ವದಿಂದ ಇದ್ದವನಿಗೆ ಹದ್ದಿನಿಂದ ಗರ್ವ ಭಂಗವಾಗುವಂತಹ ಪರಿಸ್ಥಿತಿ ಉಂಟು ಮಾಡುತ್ತಾನೆ ಶ್ರೀ ಕೃಷ್ಣ.

ಹೀಗೆ ರಾಜಕಾರಣದಲ್ಲಿಯೂ ಕೂಡ ದರ್ಪದಿಂದ ಮೆರೆದವರಿಗೆ ಒಂದಿಲ್ಲೊಂದು ದಿನ ದರ್ಪಭಂಗವಾಗದೇ ಇರದು. ರಾಜಕಾರಣಿಗಳು ಅಧಿಕಾರ ದಾಹದಿಂದ, ಧನದ ಕೀರ್ತಿಯ ಹೆಸರು ಪ್ರತಿಷ್ಠೆಗಳ ತುತ್ತ ತುದಿಯಲ್ಲಿ ಮೆರೆಯುತ್ತಿರುವವರಿಗೇನೂ ಕಡಿಮೆಯೇನಿಲ್ಲ. ಆದರೆ ನಾವಾಗಲಿ ಯಾರೇ ಅಗಲಿ ಈ ಜಗತ್ತಿನಲ್ಲಿ ಮೆರೆದವರಿಗೆ ಅಂತ್ಯ ಎನ್ನುವುದೊಂದು ಇದ್ದೇ ಇರುತ್ತದೆ. ಅದು ಯಾರ ಕೈಲೂ ತಪ್ಪಿಸಲಾಗದು ಅದೇ ವಿಧಿಯಾಟ ಎನ್ನಬಹುದು. ಇದೊಂದು ಅತ್ಯಂತ ಬಲಶಾಲಿ ಶಕ್ತಿ. ಇಂದಿನ ರಾಜಕಾರಣಿಗಳು ಮೆರೆಯುವುದಕ್ಕೆ ತಕ್ಕಂತೆ ಉತ್ತರ ಕೊಟ್ಟಂತೆ ಈ ಮುಕ್ತಕದಲ್ಲಿ ತಿಳಿಸಿದ್ದಾರೆ.

ಮುಕ್ತಕ– 706

ಅರಸಡವಿಗೈದಿದೊಡಂ, ಅವನಿತ್ತ ಪಾದುಕೆಗ।
ಳೊರೆಯದೊಡಮೇನನಂ ತಾಂ ವರದಿಯೊರೆದು॥
ದೊರೆತನದ ಭಾರವನ್ನು ಹೊತ್ತು ದೊರೆಯಾಗದಾ।
ಭರತನವೊಲಿದು ನೀನು – ಮಂಕುತಿಮ್ಮ॥

ರಾಜನಾಗಬೇಕಾಗಿದ್ದ ರಾಮನು ತಂದೆಯ ಆಜ್ಞೆಯಂತೆ ಕಾಡಿಗೆ ಹೋದ ಮೇಲೆ, ತಂದೆ ದಶರಥನ ಮರಣಾನಂತರ, ಭರತನು ಅಣ್ಣನನ್ನು ಮತ್ತೆ ರಾಜ್ಯಕ್ಕೆ ಬರಹೇಳಿ, ಒಲೈಸಿ, ವಿಫಲನಾಗಿ, ಕಡೆಗೆ ಅವನ ಪಾದುಕೆಗಳನ್ನು ರಾಜನ ಸ್ಥಾನದಲ್ಲಿಟ್ಟು ರಾಜನೆಂದೇ ತಿಳಿದು ಅವುಗಳನ್ನು ದೊರೆ ಎಂದು ತಿಳಿದು ತನಗೆ ದೊರೆ ಎಂಬ ಅಹಂ ಇಲ್ಲದೆ ದೊರೆತನದ ಭಾರವನ್ನು ಹೊತ್ತಿದ್ದರೂ ಕೂಡ ಬೀಗದೆ ಭರತ ನಡೆದುಕೊಂಡ ರೀತಿ ಈಗಿನ ರಾಜಕಾರಣಕ್ಕೆ ಒಂದು ನೀತಿ ಪಾಠವಾಗಿದೆ.

ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ. ಆದರೂ ನಾವು ಇದು ನನ್ನದು ಅದು ನನ್ನದು ಎನ್ನುತ್ತೇವೆ. ಈ ಜಗತ್ತು ಪರತತ್ವದಿಂದ ಕೂಡಿದುದು. ನಾವೆಲ್ಲರೂ ಪರಾಧೀನರಾದವರು. ಯಾವ ಸ್ವಾತಂತ್ರ್ಯ ಅಧಿಕಾರ ಇಲ್ಲ. ಆದ್ದರಿಂದ ಜಗತ್ತಿನಲ್ಲಿ ಬದುಕುವಷ್ಟು ದಿನವೂ ನಾವು ಶುದ್ಧವಾಗಿ ಜವಾಬ್ದಾರಿಯುತವಾಗಿ ಬದುಕಬೇಕು. ಇದನ್ನು ಇಂದಿನ ರಾಜಕಾರಣಿಗಳು ಮೊದಲು ಅರಿತರೆ ಒಳಿತಾಗುತ್ತದೆ. ಹೀಗೆ ಡಿ.ವಿ.ಜಿಯವರು ರಾಜಕೀಯ ಅಂಶಗಳನ್ನು ಭಗವದ್ಗೀತೆಯ ಸಾರದೊಂದಿಗೆ ಸಮೀಕರಿಸುತ್ತಾ ಅಲ್ಲಿನ ಅಂಶಗಳಿಂದಲೇ ಇಲ್ಲಿನ ಮುಕ್ತಕಗಳನ್ನು ದೃಷ್ಟಾಂತಿಸುತ್ತಾರೆ.

ಮುಕ್ತಕ– 709

ದೊರೆತನದ ಜಟಿಲಗಳ, ಕುಟಿಲಗಳ, ಕಠಿನಗಳ।
ಭರತನುಳಿಸಿದನೆ, ರಾಮನ ತೀರ್ಪಿಗೆಂದು॥
ಅರಿವಿಗಿಹ ಕರ್ತವ್ಯಭಾರವನು ತಾನರಿತು।
ಧುರವ ಧರಿಸಿದನವನು – ಮಂಕುತಿಮ್ಮ॥

ಇಲ್ಲಿ ರಾಜನಲ್ಲದಿದ್ದರೂ ಕೂಡ ರಾಜನಂತೆ ರಾಜ್ಯಭಾರದ ಸಮಸ್ತ ಜವಾಬ್ದಾರಿಗಳನ್ನು ಹೊತ್ತು ತಾನೇ ನಿರ್ವಹಿಸುತ್ತಾನೆ ಭರತ. ಇದು ಒಂದು ರೀತಿಯಲ್ಲಿ ರಾಜಕಾರಣದ ಪಾಠವೆನ್ನಬಹುದು ನಾವು ಬದುಕುವ ರೀತಿಯಿಂದ ನಮಗೆ ಈ ಜಗತ್ತಿನಲ್ಲಿ ಸುಖ ದುಃಖಗಳನ್ನು ಅನುಭವಿಸುವ ಕಲೆ ತಿಳಿಯುತ್ತದೆ.

*22. ಇಡೀ ರಾಜ್ಯವೇ ಅವನ ಅಧೀನದಲ್ಲಿತ್ತು ಅವನೇ ಸಾರ್ವಭೌಮನಾಗಿದ್ದ ತನಗೆ ಬೇಕಾದ ಹಾಗೆ ರಾಜ್ಯವಾಳಬಹುದಿತ್ತು ಆದರೆ ಭರತನ ಮಾರ್ಗವೇ ಬೇರೆಯಾಗಿತ್ತು ಅವನಿಗೆ ಅರಿವಿತ್ತು ತಾನೊಬ್ಬ ಕೇವಲ ಪ್ರತಿನಿಧಿ ಎಂದು ಹಾಗಾಗಿ ಅವನು ಶುದ್ಧವಾಗಿ ರಾಜ್ಯಭಾರ ಮಾಡಿ ರಾಮನಿಗೆ ಒಪ್ಪಿಸಿಬಿಟ್ಟು, ನಿರಾಳನಾದ, ನಾವೂ ಸಹ ಈ ಜಗತ್ತಿನ ನಮ್ಮ ಜೀವನವನ್ನು ಪರತತ್ವ ರೂಪಿಸಿರುವ ವ್ಯವಸ್ಥೆಯಲಿ ಬದುಕಿದರೆ ಸುಖ. ಆ ವ್ಯವಸ್ಥೆಯನ್ನು ಕೆಡಿಸಿ, ನಮ್ಮ ಅಹಂಕಾರ ರಕ್ತಿ, ಆಸೆ, ಸ್ವಾರ್ಥ ಮುಂತಾದ ದುರ್ಗಣಗಳಿಂದ ಬದುಕಿದರೆ ನಮ್ಮ ರಾಮನಾದ ನಮ್ಮ ಅಂತರಾತ್ಮಕ್ಕೆ ಸೂಕ್ತ ಉತ್ತರಗಳನ್ನು ನೀಡಲು ಸಾಧ್ಯವಾಗುವುದಿಲ್ಲ.*22

ಅಡಿ ಟಿಪ್ಪಣಿ *22 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಪುಟ ಸಂ.13. ಸಂಪುಟ–4.

ಇದಕ್ಕೆ ಸೂಕ್ತವಾಗಿ ಉದಾಹರಿಸಬಹುದೆಂದರೆ ಇಂದು ನಮ್ಮನ್ನು ಆಳುತ್ತಿರುವ ರಾಜಕಾರಣಿಗಳು. 05 ವರ್ಷದ ಕಾಲಾವಧಿಗೆ ಒಂದು ಬಾರಿ ಚುನಾವಣೆಯಲ್ಲಿ ಗೆದ್ದರೆ ಸಾಕು ಸ್ವತಃ ತಾವೇ ದೇವರಂತೆ ಮೆರೆಯಲಾರಂಭಿಸುತ್ತಾರೆ. ಅವರನ್ನು ಗೆಲ್ಲಿಸಿದ ಮತದಾರರು ಇವರ ತುಳಿತಕ್ಕೆ ಒಳಗಾಗಿ ಶೋಷಣೆಗಳಿಗೆ ಒಳಗಾಗಿ ಇರಬೇಕಾಗುತ್ತದೆ. ಇವರಿಂದ ಇಂದು ಸಾಮಾಜಿಕ ವ್ಯವಸ್ಥೆಯೇ ಕುಲಗೆಟ್ಟು ಹೋಗಿದೆ. ಇದೆಲ್ಲವನ್ನು ಕಲ್ಮಶಗಳನ್ನು ತೊರೆದು, ಶುದ್ಧ, ವಿರಕ್ತ ಭಾವದಿಂದ ಆಡಳಿತ ನಡೆಸಿದರೆ. ದೇಶದಲ್ಲಿ ಶಾಂತಿ, ನೆಮ್ಮದಿ ನೆಲಸುತ್ತದೆ.

ವ್ಯಾವಹಾರಿಕ ಅಂಶಗಳು

ಮುಕ್ತಕ– 723

ಸ್ವಸ್ಥತೆಯ ಕದಲಿಸದ ಜಗದಾಸ್ಥೆಯೊಂದು ಗುಣ।
ಆಸ್ಥೆಯನು ಕುಂದಿಸದ ತಾಟಸ್ಥ್ಯವೊಂದು॥
ನಷ್ಟಲಾಭಂಗಳಲಿ ಲಘು ಹಾಸ್ಯನಯವೊಂದು।
ಸ್ವಸ್ತಿಗಾವಶ್ಯಕವೊ – ಮಂಕುತಿಮ್ಮ॥

ಇಲ್ಲಿ ಡಿ.ವಿ.ಜಿಯವರು ಬದುಕಿನ ವ್ಯಾವಹಾರಿಕ ಅಂಶವನ್ನು ತಿಳಿಸುತ್ತಾರೆ. ಅನೇಕ ಮುಕ್ತಕಗಳಲ್ಲಿ ವ್ಯಾವಹಾರಿಕ ವಿಷಯಗಳನ್ನು ತಿಳಿಸಿದ್ದಾರೆ ಆದರೆ ಇಲ್ಲಿ ಎಲ್ಲವುಗಳನ್ನು ವಿವರಿಸಿ ವಿಶ್ಲೇಷಿಸಲಾಗುವುದಿಲ್ಲ. ನಮ್ಮ ಮನಸ್ಸಿನ ಸ್ವಾಸ್ಥ್ಯವನ್ನು ಕದಲಿಸದ ಜಗದ ಆಸ್ಥೆ ಅಂದರೆ ಆಸೆಗಳು. ಒಂದು ಮನುಷ್ಯನ ಗುಣ ಆದರೆ ಈ ಆಸ್ಥೆ ಎನ್ನುವುದು ಮನುಷ್ಯನ ನೆಮ್ಮದಿಯನ್ನು ಕದಡಬಾರದು. ಆಸ್ಥೆ ಮತ್ತು ಆಸೆಗಳು ಒಂದಕ್ಕೊಂದು ಬಹಳ ವ್ಯತ್ಯಾಸ ಹೊಂದಿವೆ. ಆಸ್ಥೆಗೆ ವೈಯಕ್ತಿಕವಾದ ಕ್ಷಮತೆಯನ್ನು ಹೊಂದಿರುವಂತಹುದು. ಆದರೆ ಆಸೆಗೆ ಆ ಮಿತಿಯ ಕಟ್ಟುಪಾಡುಗಳಿರುವುದಿಲ್ಲ. ಇವುಗಳೆಲ್ಲವನ್ನು ಮೆಟ್ಟಿ ನಾವು ಆರೋಗ್ಯವನ್ನು ಮತ್ತು ಸಮಾಜದ ಆರೋಗ್ಯವನ್ನು ಕಾಪಾಡಬೇಕಾಗುತ್ತದೆ. ಇದರ ವ್ಯತ್ಯಾಸಗಳನ್ನು ಕಲಿಸದ ವಿದ್ಯೆಯು ಕೇವಲ ಅವಿದ್ಯೆ ಎನಿಸಿಕೊಳ್ಳುತ್ತದೆ. ಇದಕ್ಕೆಲ್ಲ ತಾಳ್ಮೆ, ಸಹನೆ ಮುಖ್ಯವಾಗುತ್ತದೆ. ನಾವುಗಳು ಆಸೆಗಳನ್ನು ಈಡೇರಿಸಿಕೊಳ್ಳುವ ನೆಪದಲ್ಲಿ ಅಧೋಗತಿಗೆ ಇಳಿಯುತ್ತಿದ್ದೇವೆ.
ಆದರೆ ಆಸೆಯೆನ್ನುವುದೇ ಇಲ್ಲದಿದ್ದರೆ ಜಗತ್ತಿನ ವ್ಯಾಪಾರ ನಡೆಯುವುದು ಹೇಗೆ ಎನ್ನುತ್ತಾರೆ ಡಿ.ವಿ.ಜಿಯವರು.

ಮುಕ್ತಕ– 755

ಮತಿಗರ್ಥವಾದೊಡೇಂ? ಸ್ಮೃತಿಯೊಳದು ನೆಲೆಸಿರಲಿ।
ಸತತ ಸಂಧಾನದಲಿ ಪರಮಾರ್ಥವಿರಲಿ॥
ಶತಲಕ್ಷಧನದ ಲೆಕ್ಕವ ಬಾಯಿ ನುಡಿದೊಡೇಂ?।
ಭೃತಿಯೆಷ್ಟು ವೆಚ್ಚಕ್ಕೆ? – ಮಂಕುತಿಮ್ಮ॥

ಬುದ್ಧಿಗೆ ಅರ್ಥವಾದರೇಂ ಅದು ನೆನಪಿನಲ್ಲೇ ಉಳಿಯಬೇಕು. ಹಾಗೇ ಉಳಿದದ್ದೇ ಅಂತರಂಗದಲ್ಲಿ ಅನುಸಂಧಾನಗೊಳ್ಳುವುದು. ಬಾಯಿಯಲ್ಲಿ ಕೋಟಿ ಕೋಟಿ ಧನದ ಲೆಕ್ಕಾಚಾರ ಮಾಡಿದರೂ ಖರ್ಚು ಮಾಡಿದರೂ ನಮ್ಮ ಜೇಬಿನಲ್ಲಿ ಉಳಿದುದೆಷ್ಟು ಎನ್ನುವುದನ್ನು ತಿಳಿದುಕೊಳ್ಳಬೇಕು.

ನಾವು ದಿನನಿತ್ಯವೂ ಕೋಟಿ ಕೋಟಿ ಹಣದ ಲೆಕ್ಕಾಚಾರವನ್ನು ಬಾಯಿಯಲ್ಲೇ ಮಾಡುತ್ತಿದ್ದರೆ. ನಮ್ಮ ಜೇಬಿಗೆ ಏನಾದರೂ ಇಳಿದು ಬರುತ್ತದೆಯೇ? ಬ್ಯಾಂಕು ಎಂದ ಕೂಡಲೇ ಹಣವನ್ನು ಸಂಗ್ರಹಿಸುವ, ಸಂರಕ್ಷಿಸುವ ಕೇಂದ್ರ, ಆದರೆ ಇಲ್ಲಿ ಕ್ಯಾಷಿಯರ್ ಆಗಿರುವಾತ ದಿನವೂ ಕೋಟಿಗಟ್ಟಲೆ ಹಣವನ್ನು ಲೆಕ್ಕ ಮಾಡುತ್ತಲೇ ಇರುತ್ತಾರೆ. ಆದರೆ ಅಷ್ಟು ಹಣವೂ ಆತನಿಗೆ ಜೇಬಿಗೆ ಬರುತ್ತದೆಯೆ? ಆತನಿಗೆ ತಿಂಗಳಿಗಿಷ್ಟು ಸಂಬಳ ಅಂತ ಇರುತ್ತದೆ ಅಷ್ಟೆ.

ಮುಕ್ತಕ– 840

ಭುಕ್ತಿ ನಿನಗೆಲ್ಲಿಯದು? ಭತ್ತ ತಾನೆಲ್ಲಿಯದೊ!।
ಎತ್ತಲಿನ ಗೊಬ್ಬರವೊ! ಎತ್ತಲಿನ ನೀರೋ!॥
ಭಾಕ್ತವಾರರ ದುಡಿತದಿನೊ ನಿನಗಾಗಿಹುದು!।
ಗುಪ್ತಗಾಮಿನಿಯೇ ಋಣ – ಮಂಕುತಿಮ್ಮ॥

ಭುಕ್ತಿ ಎಂದರೆ ಆಹಾರ ನಿನಗೆಲ್ಲಿ ಸಿಕ್ಕರುವುದು? ಭತ್ತ ಎಲ್ಲಿಯದು? ಗೊಬ್ಬರ ಎಲ್ಲಿಯದೋ? ನೀರು ಎಲ್ಲಿಯದೋ? ಇದನ್ನು ಬೆಳೆಸಲು ಯಾರು ಯಾರ ಶ್ರಮವಿಹುದೋ ಇದಾವುದು ತಿಳಿಯದು ಎಂದು ಹೇಳುತ್ತಾರೆ ಡಿ.ವಿ.ಜಿಯವರು. ಅಂದರೆ ನಾವು ದಿನವೂ ಉಣ್ಣುವ ಅನ್ನದ ಮೂಲದ ಬಗ್ಗೆ ಯೋಚಿಸಲು ಯಾರಿಗೂ ಸಮಯವೆಲ್ಲಿಹುದು? ಭೂಮಿಯಿಂದ ಮೊಳೆತ ಗಿಡವು ಭತ್ತವನ್ನು ಬಿಟ್ಟು ಅದರೊಳಗೆ ಅಕ್ಕಿಯನ್ನು ನಮಗೆ ನೀಡುತ್ತದೆ. ಅಂದರೆ ಇಲ್ಲಿ ನಾವು ಭೂಮಿಗೆ 'ಋಣ' ತೀರಿಸುವವರಾಗಬೇಕು.

ಮುಕ್ತಕ– 747

ಅವರೆಷ್ಟು ಧನವಂತರ್, ಇವರೆಷ್ಟು ಬಲವಂತರ್।
ಅವರೆಷ್ಟು ಯಶವಂತರ್ ಎನುವ ಕರುಬಿನಲಿ॥
ಭವಿಕ ನಿನಗೆಷ್ಟಿಹುದೊ ಮರೆತು ನೀಂ ಕೊರಗುವುದು।
ಶಿವನಿಗೆ ಕೃತಜ್ಞತೆಯೇ? – ಮಂಕುತಿಮ್ಮ॥

ಅವರೆಷ್ಟು ಧನವಂತರು, ಇವರೆಷ್ಟು ಬಲವಂತರು, ಅವರೆಷ್ಟು ಯಶವಂತರು ಎನ್ನುತ್ತಾ ಕರುಬುತ್ತಲೇ ನಿನಗೆ ಎಷ್ಟಿದೆ, ಏನೇನಿದೆ ಎಂಬುದನ್ನು ಮರೆತು ನೀ ಕೊರಗುವುದು ಶಿವನಿಗೆ ತೋರುವ ಕೃತಜ್ಞತೆಯೇ? ಎಂದು ಪ್ರಶ್ನಿಸುತ್ತಾರೆ ಡಿ.ವಿ.ಜಿ. ಇಲ್ಲಿ ಒಂದು ರೀತಿ ಮನುಷ್ಯ ತಾನಿರುವುದಕ್ಕಿಂತ ತನಗೆ ಇರುವುದಕ್ಕಿಂತ ಬೇರೆಯವರ ಆಸ್ತಿ, ಕೀರ್ತಿ, ಅಂತಸ್ತು ನೋಡಿ ಕರುಬುವುದು ಜಾಸ್ತಿ. ಬುದ್ಧನು ಹೇಳುವಂತೆ "ಆಸೆಯೇ ದುಃಖಕ್ಕೆ ಮೂಲ" ಎಂಬಂತೆ ಆಸೆಯೇ ಪ್ರತಿಯೊಂದು ಸಮಸ್ಯೆಗೂ ಮೂಲ ಕಾರಣ. ಆಸೆಗೆ ಒಂದು ಮಿತಿಯಿರಬೇಕು. ಅನ್ಯರನ್ನು ನೋಡಿ ಹೊಟ್ಟೇಕಿಚ್ಚು ಪಡುವುದು ಏನೂ ಪ್ರಯೋಜನವಿಲ್ಲದ ಬದುಕು. ನಮಗೆ ಸಿಕ್ಕಿದ್ದರಲ್ಲಿ ತೃಪ್ತಿಪಟ್ಟುಕೊಳ್ಳಬೇಕು. ಅಗಲೇ ನಾವು ನೆಮ್ಮದಿಯ ಬದುಕು ಸಾಗಿಸಲು ಸಾಧ್ಯ.

ಮುಕ್ತಕ– 748

ಅನ್ನವುಣುವಂದು ಕೇಳ್!; ಅದನು ಬೇಯಿಸಿದ ನೀರ್।
ನಿನ್ನದುಡಿತದ ಬೆಮರೊ, ಪೆರರ ಕಣ್ಣೀರೊ?॥
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ।
ಜೀರ್ಣಿಸದ ಋಣಶೇಷ – ಮಂಕುತಿಮ್ಮ॥

ಅನ್ನವುಣ್ಣುವುದು ಅದನ್ನು ಬೇಯಿಸುವ ನೀರನ್ನು ನಿನ್ನ ದುಡಿತದಿಂದ ಬಂದ ಬೆವರೋ ಅಥವಾ ಬೇರೆಯವರ ಕಣ್ಣೀರೊ? ಅಂದರೆ ನೀನೇ ಪ್ರಾಮಾಣಿಕವಾಗಿ ದುಡಿದೆಯೋ ಇಲ್ಲ ಬೇರೆಯವರಿಂದ ಅವರನ್ನು ಪೀಡಿಸಿ ತಂದದ್ದೋ ಮತ್ತು ಜಗತ್ತಿಗೆ ನೀನು ಏನು ಕೊಟ್ಟಿರುವೆ? ಎಷ್ಟು ಕೊಟ್ಟಿರುವೆ ಅಷ್ಟನ್ನು ಮಾತ್ರ ನೀನು ಉಣಲು ಅರ್ಹನು. ಅದಕ್ಕಿಂತ ಹೆಚ್ಚು ಅತಿ ಆಸೆಯಿಂದ ಉಂಡರೆ ಅದು ಅಜೀರ್ಣವಾಗುತ್ತದೆ. ಅದನ್ನು ಮತ್ತೊಬ್ಬರಿಗೆ ಹಿಂದಿರುಗಿಸಲೇ ಬೇಕಾದ ಋಣವಾಗಿ ಉಳಿದು ಬಿಡುತ್ತದೆ.

ನಾವು ದುಡಿಯುತ್ತೇವೆ ನಿಜ ಆದರೆ ಹಾಗೆಯೇ ಉಣ್ಣುತ್ತೇವೆ ಕೂಡ. ದುಡಿಮೆ ಮತ್ತು ಗಳಿಕೆಗಳು ಎಂದೂ ಒಂದೇ ನಾಣ್ಯದ ಎರಡು ಮುಖಗಳು ಇವೆರಡರ ನಡುವಿನ ಲೆಕ್ಕವನ್ನು ನಾವು ಎಂದೂ ಮಾಡುವುದಿಲ್ಲ. ನಮ್ಮ ದುಡಿಮೆಯಿಂದ ಗಳಿಕೆಯು ದುಡಿಮೆಗೆ ಸಮನಾಗಿರಬೇಕೆ ಹೊರತು ಹೆಚ್ಚಾದರೆ ಋಣಭಾರವಾಗುತ್ತದೆ. ಆದ್ದರಿಂದ ಋಣ ಶೇಷಗಳು ಒಂದು ವೃತ್ತ ಎನ್ನಬಹುದು. ಈ ಋಣಭಾರದಿಂದ ಹೊರಬರುವ ಉಪಾಯವನ್ನು ಗುಂಡಪ್ಪನವರು ಹೇಳುತ್ತಾರೆ.

ಮುಕ್ತಕ– 749

ಪರಮಲಾಭವ ಗಳಿಸೆ ಜೀವಿತವ್ಯಾಪಾರ।
ಕಿರಬೇಕು ಮೂಲಧನವದು ತತ್ವದೃಷ್ಟಿ॥
ಚಿರಲಾಭ ಜಗದಾತ್ಮಲೀಲಾವಿಹಾರಸುಖ।
ಧರೆಯ ಸುಖ ಮೇಲ್ ಬಡ್ಡಿ – ಮಂಕುತಿಮ್ಮ॥

ಬದುಕು ಒಂದು ವ್ಯಾಪಾರವಿದ್ದಂತೆ. ಇಲ್ಲಿ ಲಾಭಗಳಿಸಲು ತತ್ವವೇ ಒಂದು ಮೂಲಧನವಾಗಿರಬೇಕು. ಪರಮಾತ್ಮನನುಭವವೇ ಶಾಶ್ವತ ಲಾಭ. ಭೂಮಿಯ ಮೇಲಿನ ಸುಖವು ಕೇವಲ ಮೇಲಿನ ಬಡ್ಡಿ ಎಂದು. 'ಪರಮ ಸುಖ' ವಾವುದು ಎನ್ನುವುದನ್ನು ಡಿ.ವಿ.ಜಿ ತಿಳಿಸಿಕೊಟ್ಟಿದ್ದಾರೆ.

*23. ಬದುಕಿನಲ್ಲಿ ಆತ್ಮೋದ್ಧಾರ, ಮುಕ್ತಿಗಳೇ ಶಾಶ್ವತ ಗುರಿಗಳು ಅದೇ ಜೀವಿತ ವ್ಯಾಪಾರದ ಪರಮ ಲಾಭ, ಆದರೆ ಈ ವ್ಯಾಪಾರಕ್ಕೆ ಒಂದು ಮೂಲಧನವಿದೆ. ಅದೇ ತತ್ವದೃಷ್ಟಿ, ಪ್ರತಿ ವಸ್ತು, ವ್ಯಕ್ತಿ ಮತ್ತು ವಿಷಯದ ಸತ್ಯದರ್ಶನವಾಗಿ ಆ ಸತ್ಯದ ವಿಚಾರ ಮನದಲ್ಲಿ ಮಂಥನವಾಗಿ ಅನ್ಯ ವಿಷಯಗಳನ್ನು ಸರಿಸಿ ಆ ಸತ್ಯದೊಳಗಿನ ಸತ್ವವನ್ನು ಅಂತರಂಗಕ್ಕೆ ಇಳಿಸಿಕೊಂಡು ಆ ತತ್ವ ನಮ್ಮ ಸ್ವಭಾವವಾಗುವುದೇ ಈ ಜಗತ್ತಿನ ಜೀವನದ ಪರಮ ಲಾಭ, ಆದರೆ ಆ ಸತ್ಯದ ದರ್ಶನವಾಗುವುದು ಹೇಗೆ? ಪ್ರತಿಯೊಂದು ವಿಷಯ, ವ್ಯಕ್ತಿ ಮತ್ತು ವಿಷಯದಲ್ಲೂ ಸತ್ಯವಡಗಿರುತ್ತದೆ. ಆದರೆ, ಅದು ವಿದ್ಯೆಯಿಂದ ಆವರಿಸಿ ಮುಚ್ಚಲ್ಪಟ್ಟಿರುತ್ತದೆ. ಮತ್ತು ಕೆಲಬಾರಿ ಆ ವಸ್ತು ವಿಷಯ ಅಥವಾ ವಸ್ತುಗಳೇ ತಮ್ಮ ನಿಜವಲ್ಲದ ರೂಪವನ್ನು ತೋರುತ್ತಿರುತ್ತದೆ.*23

ಈ ಮೇಲಿನ ಮುಕ್ತಕಗಳ ಮುಖಾಂತರ ಡಿ.ವಿ.ಜಿಯವರು ಜಗತ್ತಿನಲ್ಲಿನ ವ್ಯಾವಹಾರಿಕ ಬದುಕು ಹೇಗಿರಬೇಕು? ಹೇಗಿರುತ್ತದೆ? ಹೇಗೆ ನಿಭಾಯಿಸಬೇಕೆಂಬುದನ್ನು ತಿಳಿಸಿಕೊಟ್ಟಿದ್ದಾರೆ.

ಅಡಿ ಟಿಪ್ಪಣಿ *23 ಕಗ್ಗರಸಧಾರೆ – ಲೇ – ರವಿ ತಿರುಮಲೈ – ಮಟ ಸಂ.71. ಸಂಪುಟ–4.

ಅಧ್ಯಾಯ – 5

'ಮಂಕುತಿಮ್ಮನ ಕಗ್ಗ'ದಲ್ಲಿ ಕಂಡುಬರುವ ಭೂಮಿ ಮತ್ತು ಮನುಜನ ಸಂಬಂಧ

"ಮಂಕುತಿಮ್ಮನ ಕಗ್ಗ"ವು ಜೀವನಕ್ಕೆ ಸಂಬಂಧಿಸಿದ ಭೌತಿಕ ಮತ್ತು ಅಭೌತಿಕವಾದ ಅನೇಕ ವಿಷಯಗಳನ್ನು ತನ್ನ ಒಡಲಿನಲ್ಲಿರಿಸಿಕೊಂಡಿದೆ. ಸೃಷ್ಟಿಯಲ್ಲಿರುವ ಜೀವಸಂಕುಲ, ಗಿಡ–ಮರ–ಬಳ್ಳಿ, ಅವುಗಳು ಸೃಷ್ಟಿಯಾದ ಬಗೆ, ಅವುಗಳ ಅಳಿವು, ಸೂರ್ಯ–ಚಂದ್ರ–ನಕ್ಷತ್ರ, ಆಕಾಶ, ಗಾಳಿ, ಬೆಟ್ಟ–ಗುಡ್ಡ ನದಿ, ಸಮುದ್ರ ಮುಂತಾದ ಗೋಚರಾಗೋಚರವಾದ ಬಹುವಿಶ್ಲೇಷಣೆಯ ವಾರಿಧಿಯಾಗಿದೆ. ಇದನ್ನು ಈಸಬಲ್ಲವರಿಗೆ ಇದು ಬಹಳ ಸರಳವಾಗಿ ಕಂಡುಬಂದರೆ, ಇದರಲ್ಲಿ ಈಜಲು ಸಾಧ್ಯವಾಗದವರಿಗೆ ಇದು ಕಬ್ಬಿಣದ ಕಡಲೆಯೇ ಸರಿ. ನಮ್ಮೆಲ್ಲರ ಜೀವ–ಜೀವನಕ್ಕೆ ಆಧಾರವಾಗಿರುವ ಈ ಭೂಮಿಯು, ನಮ್ಮೆಲ್ಲರ ಬೇಕು–ಬೇಡಗಳನ್ನು ಪೂರೈಸುವ ಜೀವನ್ಮಾತೆಯಾಗಿದ್ದಾಳೆ. ಆದರೆ, ದುರಾಸೆಯನ್ನು ಈಡೇರಿಸಿಕೊಳ್ಳುವ ಭರದಲ್ಲಿ ಭೂಮಿಯ ಅಸ್ಥಿತ್ವವನ್ನೇ ಹಾಳುಗೆಡುವುತ್ತಿರುವ ಖಳನಾಯಕರಾಗಿ ಮನುಷ್ಯರು ವರ್ತನೆ ಮಾಡುತ್ತಿದ್ದಾರೆ. ಭೂಮಿ ಮತ್ತು ಮನುಜನ ಸಂಬಂಧವು ತಾಯಿ ಮತ್ತು ಮಗುವಿನ ಸಂಬಂಧವಿದ್ದಂತೆ. ಮಗುವನ್ನೆ ತಾಯಿ ಪ್ರೀತಿಸುವಂತೆ–ಪೋಷಿಸುವಂತೆ, ಮಗುವೂ ತಾಯಿಯನ್ನು ಪ್ರೀತಿಸಿದಲ್ಲಿ ಅದು ಬಾಳ್ವೆಗೆ ಸಾರ್ಥಕತೆಯನ್ನು ನೀಡುತ್ತದೆ. ಇದರ ಹೊರತಾಗಿ, ಈ ಪ್ರೀತಿ ಮತ್ತು ಪೋಷಣೆ ಏಕಮುಖವಾದಲ್ಲಿ, ಅದು ಅಸಹಜ ಮತ್ತು ಅಸಹನೀಯವಾಗುತ್ತದೆ.

ಆಧುನಿಕತೆಯೇ ಮೈದುಂಬಿಕೊಂಡಿರುವ ಈಗಿನ ಕಾಲದ ಸಂದರ್ಭದಲ್ಲಿ ಏಕಮುಖಪ್ರೀತಿಯೇ ಹೆಚ್ಚಾಗಿದ್ದು, ಪೋಷಕರ ಪ್ರೀತಿ ಮಕ್ಕಳಿಗೆ ದೊರೆಯಬಹುದು. ಆದರೆ ಮಕ್ಕಳ ಪ್ರೀತಿ ಪೋಷಕರಿಗೆ ದೊರೆಯುತ್ತಿಲ್ಲ. ಮಕ್ಕಳ ಪ್ರೀತಿಯ ವಿಧಾನವೂ ಅತ್ಯಂತ ಕೃತಕವಾದದ್ದು ಮತ್ತು ಕಾಠಿಣ್ಯವಾದದ್ದೇ ಆಗಿದೆ. ಮಕ್ಕಳು ಕೇಳಿದ ಅಥವಾ ಬಯಸುವ ವಸ್ತುಗಳನ್ನು ತಂದು ಕೈಗಿಡುವುದೇ ಪ್ರೀತಿ ಎಂದು ಕೆಲವೊಂದು ಪೋಷಕರು ಅಂದುಕೊಂಡಿದ್ದರೆ, ವಯಸ್ಸಾದ ಪೋಷಕರನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಅಥವಾ ಪ್ರತ್ಯೇಕ ಮನೆಯಲ್ಲಿರಿಸಿ, ಸ್ವಲ್ಪ ಹಣವನ್ನು ಆಗ್ಗಿಂದಾಗ್ಗೆ ನೀಡುವುದೆಂದು ಭಾವಿಸಿದ್ದಾರೆ. ಇದು ನೈಜ ಪ್ರೀತಿ ಆಗುತ್ತದೆಯೇ? ವಸ್ತು ಮತ್ತು ಹಣದ ಮೂಲಕ ಪ್ರೀತಿಯನ್ನು ವ್ಯಕ್ತಪಡಿಸುವಿಕೆಯು ಅತ್ಯಂತ ಬಾಲಿಶವಾದದ್ದು ಅಥವಾ ಆತ್ಮದ್ರೋಹ ಮಾಡಿಕೊಳ್ಳುವುದಾಗಿರುತ್ತದೆ. ನಮ್ಮೆಲ್ಲರಿಗೂ ಆಶ್ರಯದಾತೆಯಾದ ಈ ಭೂಮಿಯ ಮೇಲೂ ಇದೇ ರೀತಿಯ ಪ್ರೀತಿಯನ್ನು ಮನುಜರು ಹೊಂದಿದ್ದೇವೆಂದರೆ ಅತಿಶಯೋಕ್ತಿಯೇನಲ್ಲ.

ಜೀವಸಂಕುಲಕ್ಕೆ ಆತ್ಮಶಕ್ತಿಯನ್ನು ನೀಡುತ್ತಿರುವ ಗಿಡ–ಮರಗಳನ್ನು ಬುಡಸಮೇತ ಕಿತ್ತುಹಾಕಿ, ಉದ್ಯಾನವನ್ನು ನಿರ್ಮಿಸುವುದರಿಂದ ನಮಗೆ ಅಪರಿಮಿತ ಆನಂದ ದೊರೆಕಿಸಿಕೊಳ್ಳುವಿಕೆಯು ಆತ್ಮದ್ರೋಹದ ಕಾರ್ಯವೇ ಆಗಿದೆ. ಪ್ರಕೃತಿಯಲ್ಲಿ ದೊರೆಯುವ ಎಲ್ಲವೂ ನಮಗೆ ಬೇಕು. ಹಾಗೂ ಅದಿಲ್ಲದೆ ಜೀವಿಗಳು ಬದುಕಲಾರದು ಎಂಬ ಸತ್ಯ ತಿಳಿದಿದ್ದರೂ, ಅದನ್ನು ನಾಶಮಾಡುವ ಮತ್ತು ಮುಂದಿನ ಪೀಳಿಗೆಗೆ ಅದನ್ನು ಉಳಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸದೇ ಇರುವುದು ನಮ್ಮ ಅಂದರೆ ಭೂಮಂಡಲ ವಿನಾಶದ ಹಾದಿಗೆ ನಾಂದಿಯಾಗುತ್ತಿದೆ. ಇಂತಹ ಪ್ರಕೃತಿ ಮತ್ತು ಭೂಮಿಯನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಅನೇಕ ಕೃತಿಗಳಲ್ಲಿ ಪ್ರಸ್ತಾಪವಾಗಿದೆ. ಕವಿಯ ಹಿನ್ನೆಲೆಗೆ ತಕ್ಕಂತೆ, ತನಗೆ ತೋಚಿದಂತೆ ಭೂಮಿಯನ್ನು ಕುರಿತು ಹೊಗಳುವ ಅಥವಾ ಆರಾಧಿಸುವ ಅಥವಾ ಭೂಮಿ–ಮನುಜನ

[illegible]

ಸಂಬಂಧವನ್ನು ದಾಖಲಿಸುವ ಕಾರ್ಯ ಪ್ರಾಚೀನ ಕಾಲದಿಂದಲೂ ನಡೆದುಬಂದಿದೆ. ಕವಿರಾಜಮಾರ್ಗ ಕೃತಿಯಿಂದ ಆಧುನಿಕ ಕನ್ನಡ ಸಾಹಿತ್ಯವರೆಗಿನ ಎಲ್ಲಾ ಕೃತಿಗಳಲ್ಲಿಯೂ–ಭೂಮಿ, ನದಿ, ಬೆಟ್ಟ–ಗುಡ್ಡ, ಜನರ ಮನೋವೃತ್ತಿಗಳ ಬಗ್ಗೆ ವರ್ಣಿಸಿರುವಿಕೆ ಅಥವಾ ಸಂಬಂಧ ಕಲ್ಪಿಸಿರುವಿಕೆ ಕಂಡುಬರುತ್ತದೆ. ಇಂತಹ ಕೃತಿಗಳ ಪಟ್ಟಿಯಲ್ಲಿ ಡಿ.ವಿ.ಗುಂಡಪ್ಪನವರ "ಮಂಕುತಿಮ್ಮನ ಕಗ್ಗ"ವೂ ಸೇರಿಕೊಳ್ಳುತ್ತದೆ. ಸೃಷ್ಟಿ, ಭೂಮಿ ಮತ್ತು ಅದನ್ನಾವರಿಸಿರುವ ಸರ್ವವನ್ನೂ ಒಳಗೊಂಡ ಕೆಲವು ಪದ್ಯಗಳ ವಿಶ್ಲೇಷಣೆ ಮಾಡುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ. ಕಗ್ಗವು ನಿರ್ಧಿಷ್ಟವಾಗಿ ಒಂದು ವಿಷಯವನ್ನು ಮಾತ್ರ ಹೇಳದೆ, ಮನುಷ್ಯನ ವ್ಯಕ್ತಿತ್ವವನ್ನು ರೂಪಿಸಲು ಬೇಕಾದ ಎಲ್ಲಾ ರೀತಿಯ ಬೌದ್ಧಿಕ ಸಿದ್ಧೌಷಧ ಎಂದರೆ ತಪ್ಪಾಗದು. ಭೂಮಿ, ಆಗಸ, ಗ್ರಹ–ತಾರೆಗಳು, ಮನುಜರ ಜೀವನಪ್ರೀತಿ–ಆಲೋಚನೆ, ವೈಷಮ್ಯ, ಇಹ–ಪರ ಲೋಕಗಳ ಪ್ರಸ್ತಾಪ, ಹುಟ್ಟು–ಸಾವಿನ ವಿಷಯ, ಮನುಜನಿಗೆ ಬೇಕಾದ ಸ್ಫೂರ್ತಿ ಮುಂತಾದುವೆಲ್ಲವನ್ನೂ ಕಗ್ಗವು ಒಳಗೊಂಡಿದೆ. ಭೂಮಿ, ಧರೆ, ನೆಲ, ಧರಣಿ, ಪ್ರಕೃತಿ, ಸೃಷ್ಟಿ ಮುಂತಾದುವನ್ನು ಮನುಜನ ಜೀವನದೊಂದಿಗೆ ಬೆಸೆಯುವ ಕಾರ್ಯವನ್ನು ಡಿ.ವಿ.ಜಿ.ಯವರು ಕಗ್ಗದಲ್ಲಿ ಮಾಡಿದ್ದಾರೆ. ಕಗ್ಗವೆಂಬ ವಾರಿಧಿಯಲ್ಲಿ ಒಂದೆರಡು ಹನಿಗಳಷ್ಟನ್ನೇ ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

'ಭೂಮಿ' ಎಂದರೆ ಬರಿಯ ಮಣ್ಣಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದ್ದು, ಅದರಲ್ಲಿ ಜೀವಂತಿಕೆಯನ್ನು ಕಾಣುವಿಕೆಯನ್ನು ಮುಂದಿನ ಪದ್ಯದಲ್ಲಿ ಕಾಣಬಹುದು.

ಮುಕ್ತಕ– 848

ಸ್ಥಿರ ಹಿಮಾಚಲ ಬೊಮ್ಮ, ಚರ ಜಾಹ್ನವಿಯೆ ಮಾಯೆ।
ಪರಸತ್ವಘನದ ವಿದ್ರವರೂಪ ವಿಶ್ವ॥
ಪರಮಾರ್ಥಕೊಂದಕ್ಷಿ ವೆವಹಾರಕಿನ್ನೊಂದು।
ಎರಡುಮೊಂದಾಂತರ್ಯ – ಮಂಕುತಿಮ್ಮ॥

ಜೀವನಪ್ರೀತಿಯೆಂದರೇನು? ನಾನು ಮತ್ತು ನನ್ನ ಸುತ್ತಮುತ್ತಲಿನವರ ಬದುಕುವಿಕೆ ದೇವರನ್ನು ಓಲೈಸಿಕೊಳ್ಳಲು ವಿವಿಧ ರೀತಿಯಲ್ಲಿ ಶ್ರಮಪಡುತ್ತಿರುವುದನ್ನು ಇಡೀ ವಿಶ್ವದಲ್ಲಿ ಕಾಣಬಹುದು. ಕವಿಯ ಪ್ರಕಾರ ಇದನ್ನು ಹೊರತಾದ ಮತ್ತೊಂದು ತತ್ವವಿದ್ದು, ಬ್ರಹ್ಮನು ಹಿಮಾಲಯ ಪರ್ವತದಂತೆ ಸ್ಥಿರವಾಗಿದ್ದು, ಚಲಿಸುವ ಗಂಗೆಯೇ ನಮ್ಮನ್ನಾವರಿಸುವ ಮಾಯೆಯಾಗಿದೆ. ಪರಮಾತ್ಮನ ದ್ರವರೂಪವೇ ಈಗಿರುವ ಜಗತ್ತಾಗಿದ್ದು, ಒಂದು ಕಣ್ಣನ್ನು ಪರಮಾರ್ಥದಲ್ಲಿಯೂ ಮತ್ತೊಂದನ್ನು ವ್ಯವಹಾರದಲ್ಲಿಯೂ ಇರುತ್ತದೆ. ಇವು ಎರಡರಂತೆ ಕಂಡುಬಂದರೂ ಒಂದೇ ವಸ್ತುವಿನ ಎರಡು ರೂಪಗಳಾಗಿವೆ. ಪ್ರಕೃತಿಯಾರಾಧನೆಯನ್ನು ಇಲ್ಲಿ ಗುರುತಿಸಬಹುದಾಗಿದ್ದು, ಇಂತಹ ಪ್ರಕೃತಿ ದೇವರೂ ಹೌದು. ನಮ್ಮನ್ನಾವರಿಸಿರುವ ಮಾಯೆಯೂ ಹೌದು. ನಮ್ಮ ಕಣ್ಣುಗಳು ಲೌಕಿಕ–ಅಲೌಕಿಕಗಳೆರಡರಲ್ಲೂ ತೊಡಗಿಸಿಕೊಳ್ಳಬೇಕೆಂದು ಡಿ.ವಿ.ಜಿ.ಯವರು ಹೇಳಿದ್ದಾರೆ.

[illegible]

ಮುಕ್ತಕ– 859

ಪ್ರಕೃತಿಯನವರತ ಮನುಜನ ತಿದ್ದುತಿರುವಂತೆ।
ವಿಕೃತಿಗೊಳಿಸುವನವನುಮ್ ಆಕೆಯಂಗಗಳ॥
ಭೂಕೃಷಿಕ ರಸತಂತ್ರಿ ಶಿಲ್ಪಿವಾಹನಯಂತ್ರಿ।
ವ್ಯಾಕೃತಿಸರೇನವಳ? – ಮಂಕುತಿಮ್ಮ॥

ಪ್ರಕೃತಿಯು ಸದಾಕಾಲ ಮನುಷ್ಯನು ಒಳ್ಳೆಯ ಕಾರ್ಯಗಳನ್ನು ಎಸಗುವಂತೆ ಪ್ರಚೋದಿಸುತ್ತಾ ಇರುತ್ತಾಳೆ. ಆದರೆ, ಮನುಷ್ಯನು ನಿರಂತರವಾಗಿ ಪ್ರಕೃತಿಯನ್ನು ವಿಕಾರಗೊಳಿಸುತ್ತಿರುತ್ತಾನೆ. ರೈತನು ಭೂಮಿಯನ್ನು ಉಳುಮೆ ಮಾಡಿ, ಭೂಮಿತಾಯಿಯನ್ನು ವಿಕಾರಗೊಳಿಸಿದರೆ, ಭೂಮಿಯಲ್ಲಿರುವ ಅದಿರು/ಲೋಹವನ್ನು ವಿಜ್ಞಾನಿ ಹೊರತರುತ್ತಾನೆ. ಶಿಲ್ಪಿಯು ತನ್ನ ಕಾರ್ಯಕುಶಲತೆಗಾಗಿ, ಮರ–ಕಲ್ಲುಗಳನ್ನು ಉಪಯೋಗಿಸುತ್ತಾನೆ. ಲೋಹವನ್ನು ಉಪಯೋಗಿಸಿ ವಾಹನ ತಯಾರಿಸಿ ಭೂಮಿಯ ಮೇಲೆ ಓಡಾಡುವುದರ ಮೂಲಕ ಮನುಷ್ಯನು ಭೂಮಿಯನ್ನು ನಿರಂತರವಾಗಿ ವಿಕಾರಗೊಳಿಸುತ್ತಿರುತ್ತಾನೆ. ಹಾಗಿದ್ದರೆ, ರೈತರು ಭೂಮಿಯನ್ನು ಉಳಬಾರದೇ? ಬೆಳೆಯನ್ನು ಬೆಳೆಯಬಾರದೇ? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಇಲ್ಲಿ ಬಂದಿರುವ ವಿಕೃತಿ ಎಂದರೆ, ರಾಸಾಯನಿಕವನ್ನು ಸಿಂಪರಣೆ ಮಾಡುವಿಕೆ ಅಥವಾ ಕೃತಕ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಸರಿಯಲ್ಲವೆಂದು ಅರ್ಥೈಸಿಕೊಳ್ಳಬೇಕಾಗಿದೆ. ಡೈನಮೈಟ್‌ಗಳನ್ನು ಸಿಡಿಸುವುದರ ಮೂಲಕ ಭೂಮಿಯ ಒಡಲನ್ನು ಬಗೆದು ಬರಿದು ಮಾಡುತ್ತಿರುವಿಕೆಯು ಭೂಮಿಯನ್ನು ವಿಕೃತಿಗೊಳಿಸುವಿಕೆಯೇ ಆಗಿದೆ. ನಮಗೆ ಆಸರೆಯಾಗಿರುವ ಭೂಮಿಯನ್ನು ಈ ರೀತಿ ಹಾಳುಗೆಡಹಿದರೆ ಇನ್ನು ನಮಗೆಲಿ ಆಶ್ರಯ ದೊರೆಯುತ್ತದೆ ಎಂಬು ಕವಿಯ ನೋವಾಗಿದೆ.

ಮುಕ್ತಕ– 847

ನೆಲದ ಬೇಸಾಯ ತಾನೊಳ್ಳಿತ್ತಾಗಿರೆ ನಿನಗೆ।
ಫಲವದೆಂತಹುದೆಂಬ ಶಂಕೆಗೆಡೆಯುಂಟೆ?॥
ಒಳಿತರೊಳೆ ನೀಂ ಬಾಳು; ಪರವದೆಂತಿರ್ದೊಡೇಂ?।
ಇಳೆಯ ಬಾಗಿಲು ಪರಕೆ – ಮಂಕುತಿಮ್ಮ ॥

ರೈತನು ವ್ಯವಸಾಯವನ್ನು ಸಮರ್ಪಕವಾಗಿ ಮಾಡಿದ್ದಲ್ಲಿ ನಿರೀಕ್ಷಿತೆ ಫಲಗಳು ದೊರೆಯುವುದರಲ್ಲಿ ಸಂದೇಹವಿಲ್ಲ. ಜೀವನವೂ ಇದೇ ರೀತಿ ಒಳ್ಳೆಯ ಉದ್ದೇಶದಿಂದ ಕೂಡಿದ್ದರೆ, ಉತ್ತಮ ಫಲವು ದೊರೆಯುತ್ತದೆ. ಪರಲೋಕದ ಬಗ್ಗೆ ಚಿಂತಿಸದೆ ಭೂಲೋಕದ ಜೀವನವನ್ನು ನಡೆಸಿದಲ್ಲಿ ದೇವರು ಮೆಚ್ಚುತ್ತಾನೆಂಬುದು ಡಿ.ವಿ.ಜಿ.ಯವರ ಅಭಿಪ್ರಾಯವಾಗಿದೆ. ಒಳ್ಳೆಯ ಉದ್ದೇಶವಿದ್ದರೆ ಒಳ್ಳೆಯದೇ ಆಗುತ್ತದೆ ಎಂಬುದು 'ಮಾಡಿದ್ದುಣ್ಣೋ ಮಹಾರಾಯ' ಗಾದೆಯು ಹೇಳುತ್ತದೆ. ರೈತನಿಗೂ ದುರಾಸೆ ಇರಬಾರದು. ನಾಳೆಗೂ ನೆಲವನ್ನು ಉಳಿಸಬೇಕೆನ್ನುವ ಅರಿವು ಇರಬೇಕು.

ಮುಕ್ತಕ– 711

ಧರೆಯೆ ಕೋಸಲ, ಪರಬ್ರಹ್ಮನೆ ರಘುವರನು।
ಭರತನವೊಲನುಪಾಲನಕ್ರಿಯರು ನಾವು॥
ಅರಸನೂಳಿಗ ನಮ್ಮ ಸಂಸಾರದಾಡಳಿತ।
ಹರುಷದಿಂ ಸೇವಿಸೆಲೊ – ಮಂಕುತಿಮ್ಮ

ಈ ಭೂಮಂಡಲವೆಲ್ಲವೂ ಕೋಸಲ ದೇಶವಾಗಿದ್ದು, ಶ್ರೀರಾಮನೇ ಪರಮಾತ್ಮನೆಂದು, ಅಣ್ಣನ ಮಾತನ್ನು ಪರಿಪಾಲಿಸಿದ ಭರತನಂತೆ ಇಲ್ಲಿರುವ ಮನುಜರು. ಪರಮಾತ್ಮನು ಸೂಚಿಸಿದಂತೆ ನಡೆಯುತ್ತಿರುವ ನಾವುಗಳೆಲ್ಲರೂ ಮನುಷ್ಯರಾಗಿದ್ದೇವೆ. ರಾಜನಿಗೆ, ಸೇವೆ ಸಲ್ಲಿಸುವಂತೆಯೇ ನಾವು ನಮ್ಮ ಸಂಸಾರವನ್ನು ನಡೆಸುವ ರೀತಿಯಾಗಿದ್ದು, ಅದನ್ನು ಸಂತೋಷದಿಂದ ನಿರ್ವಹಿಸು ಎಂದು ಕವಿ ಡಿ.ವಿ.ಜಿ. ಹೇಳಿದ್ದಾರೆ. ಇದನ್ನು ಸಂಕುಚಿತಾರ್ಥದಲ್ಲಿ ನೋಡದೆ, ಇಡೀ ಭೂಮಂಡಲವೆಲ್ಲಾ ಒಂದೇ ಎಂದುಕೊಂಡಲ್ಲಿ ಅಂತರ್ಯುದ್ಧಗಳು ನಡೆಯಲು ಸಾಧ್ಯವಿಲ್ಲ. ಭ್ರಾತೃತ್ವ ಭಾವನೆ ಬೆಳೆಸಿಕೊಳ್ಳುವುದರಿಂದ ಮನುಷ್ಯರ ನಡುವಿರುವ ಭೇದ–ಬಾವಗಳು ನಶಿಸುವುದರ ಮೂಲಕ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬುದನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕವಿ ಅಭಿಪ್ರಾಯಪಟ್ಟಿದ್ದಾರೆ.

ಮುಕ್ತಕ– 661

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ॥
ಬೆಳಕೀವ ಸೂಯಚಂದ್ರರಿದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ಭೂಮಿಯಿಂದ ಮೊಳಕೆ ಹೊರಬರುವಾಗ ಯಾವುದೇ ರೀತಿಯ ತಮಟೆ ವಾದ್ಯ ಬಾರಿಸದೆ, ತನ್ನ ಪಾಡಿಗೆ ತಾನು ಹೊರಬರುತ್ತದೆ. ಗಿಡಮರಗಳಲ್ಲಿ ಕಾಯಿಗಳು ಪಕ್ವವಾಗಿ ಹಣ್ಣುಗಳದಾರು ಯಾರೂ ತುತ್ತೂರಿ ಊದಿ ಸಂಭ್ರಮಾಚರಣೆ ಮಾಡುವುದಿಲ್ಲ. ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯ–ಚಂದ್ರರು ಯಾವುದೇ ರೀತಿಯ ಸದ್ದು ಮಾಡದೆ, ತಮ್ಮ ಪಾಡಿಗೆ ತಾವು ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ತಾನೇ ಶ್ರೇಷ್ಠ; ತನ್ನಿಂದಲೇ ಎಲ್ಲವೂ ನಡೆಯಬೇಕು; ತನ್ನದೆ ಸರ್ವಸ್ವ ಎಂದು ಭಾವಿಸಿರುವ ಮನುಜ ತನ್ನ ಕೆಲಸಗಳನ್ನು ಕುರಿತು ಹೊಗಳಿಕೊಳ್ಳುವ ಅಹಂಕಾರಿಗಳಿಗೆ ಕವಿ ಕಿವಿಮಾತೊಂದನ್ನು ಹೇಳುತ್ತಾರೆ. ಯಾವುದೇ ಪ್ರಚಾರವಿಲ್ಲದೆ ಪ್ರಕೃತಿಯಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಅನುಭವಿಸುವ ನೀನು ನಿನ್ನ ಬಗ್ಗೆ ಹೇಳಿಕೊಳ್ಳದೆ ನಿನ್ನತುಟಿಗಳನ್ನು ಹೊಲಿದುಕೊಳ್ಳುವುದು ಸೂಕ್ತವೆಂದು ಡಿ.ವಿ.ಜಿ.ಯವರು ಹೇಳುತ್ತಾರೆ. ಭೂಮಿತಾಯಿಯು ಸಹನಾಮಯಿ. ಎಲ್ಲವನ್ನು ನೀಡುವ ಶಕ್ತಿ ಹೊಂದಿದ್ದರೂ ಸದಾ ಮೌನವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾಳೆ. ತಾನು ನೀಡುವ ಯಾವುದೇ

[illegible]

ಕೊಡುಗೆ ಸಂದರ್ಭದಲ್ಲೂ ಯಾವುದೇ ಪ್ರಚಾರವನ್ನು ಮಾಡುವುದಿಲ್ಲ. ಹಾಗೆಯೇ, ಭೂಮಿಯ ಭಾಗವೇ ಆಗಿರುವ ಸೂರ್ಯ–ಚಂದ್ರರು ನಿರಂತರವಾಗಿ ಬೆಳನ್ನು ನೀಡುತ್ತಾ. ಭೂಮಿಯ ಜೀವಸಂಕುಲಕ್ಕೆ ಚೈತನ್ಯವನ್ನು ನೀಡುತ್ತದ್ದಾರೆ. ಇವೂ ಸಹ ಏನೂ ಗದ್ದಲ ಎಬ್ಬಿಸುವುದಿಲ್ಲ. ಆದರೆ, ತಾನು ಮಾಡುವ ಎಲ್ಲಾ ಕೆಲಸಗಳಿಗೂ ಪ್ರಚಾರ ಕೊಡುವ ಮನುಜರಿಗೆ ಎಚ್ಚರಿಕೆಯ ಕಿವಿಮಾತನ್ನು ಕವಿ ಹೇಳಿರುವುದು ಪ್ರಶಂಸನೀಯವಾಗಿದೆ.

ಮುಕ್ತಕ– 603

ಧರಣಿಗೋಳವು ಮೂಸೆ: ಜೀವಗಳನದರೊಳಗೆ।
ಪರಿಶುದ್ಧಿಗೊಳಿಸುವುದು ಸಂಸಾರತಾಪ॥
ಪರಿಪರಿಯ ಬಂಧುಧರ್ಮದಿನ್ ಅಹಂಮತಿ ಕರಗೆ।
ಹರಡಿ ಹಬ್ಬುವುದಾತ್ಮ – ಮಂಕುತಿಮ್ಮ॥

'ಭೂಮಿ' ಎಂಬುದು ಲೋಹಗಳನ್ನು ಕರಗಿಸಿ ಶುದ್ಧಮಾಡುವ ಗೋಳಾಕಾರದ ಕುಡಿಕೆಯಂತೆ. ಮನುಜನ ಜೀವನವನ್ನು ಸಂಸಾರವೆಂಬ ಬೇಗೆ ಪರಿಶುದ್ಧಗೊಳಿಸುತ್ತದೆ. ಸಂಸಾರದಲ್ಲಿ ಉದ್ಭವಿಸುವ ವಿಧವಿಧವಾದ ಸಮಸ್ಯೆಗಳನ್ನು ಎದುರಿಸುವುದರ ಮೂಲಕ, ಮನುಜರಲ್ಲಿರುವ 'ನಾನು' ಎಂಬ 'ಅಹಂ' ಕರಗಿ, ಆತ್ಮಶಕ್ತಿಯು ಹೆಚ್ಚಾಗಿ, ತನ್ನ ಸುತ್ತಮುತ್ತಲಿನವರನ್ನು ಪ್ರೀತಿಸುವಂತೆ ಪ್ರೇರೇಪಿಸುತ್ತದೆ. ಭೂಮಿಯನ್ನು ನೋಡಿ ಕಲಿತುಕೊಳ್ಳಲು ಸಾಕಷ್ಟಿದೆ. ಭೂಮಿಯನ್ನು ನೋಡಿ, 'ಅಹಂ' ಕಳೆದುಕೊಳ್ಳಬೇಕೆಂದು ಕವಿ ಇಲ್ಲಿ ಹೇಳಿದ್ದಾರೆ.

ಮುಕ್ತಕ– 300

ಗಿಡದಿ ನಗುತಿರುವ ಹೂ ಪ್ರಕೃತಿಸಖನಿಗೆ ಚೆಂದ।
ಮಡದಿ ಮುಡಿದರುವ ಹೂ ಯುವಕಂಗೆ ಚೆಂದ॥
ಗುಡಿಯಳಗೆ ಕೊಡುವ ಹೂ ದೃವಭಕ್ತಗೆ ಚೆಂದ।
ಬಿಡಿಗಾಸು ಹೂವಳಗೆ – ಮಂಕುತಿಮ್ಮ॥

ಪ್ರಕೃತಿಯ ಸೊಬಗನ್ನು ಸವಿದು ಆನಂದಪಡುವವನಿಗೆ, ಗಿಡದಲ್ಲಿ ಬಿಡುವ ಹೂವಿನ ಸೌಂದರ್ಯ, ಪರಿಮಳವು ಮನಸ್ಸಿಗೆ ತಣಿವುಂಟುಮಾಡುತ್ತದೆ. ಮದುವೆಯಾದ ಯುವಕನಿಗೆ, ಆ ಗಿಡದ ಹೂವನ್ನು ತನ್ನ ಪತ್ನಿಯ ಮುಡಿಗೇರಿಸಿದರೆ ಅಂದವಾಗಿರುತ್ತದೆಂದುಕೊಂಡರೆ, ಭಕ್ತನೊಬ್ಬನಿಗೆ ಅದನ್ನು ದೇವರಿಗೆ ಅರ್ಪಿಸಿ ಕೃತಾರ್ಥನಾಗಬೇಕೆಂದು ಬಯಸುತ್ತಾನೆ. ಒಂದೇ ಹೂವಿನಿಂದ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಆನಂದ ದೊರೆಯುತ್ತದೆ. ಹೂವಾಡಗಿತ್ತಿಗೆ ಅದನ್ನು ಮಾರಿದರೆ ಸ್ವಲ್ಪ ಹಣ ಸಿಕ್ಕುವುದದರಿಂದ ತನ್ನ ಜೀವನ ನಿರ್ವಹಣೆ ಮಾಡಬಹುದೆಂದುಕೊಳ್ಳುತ್ತಾಳೆ. ಇಲ್ಲಿ ಕಂಡುಬರುವ ಪ್ರೀತಿಯ ಮೂಲ ಒಂದೇ ಆಗಿದ್ದರೂ ಸಹ ಒಬ್ಬೊಬ್ಬರ

ಮನಸ್ಸಿನಲ್ಲಿ ಒಂದೊಂದು ರೀತಿಯ ಪ್ರಕೃತಿಪ್ರೀತಿ ಕಂಡುಬರುತ್ತದೆ. ಪ್ರಕೃತಿಯಲ್ಲಿ ಸಿಗುವ ವಸ್ತು ಒಂದೇ ಆದರೂ, ಮನುಷ್ಯರ ಬಯಕೆ ಮತ್ತು ಆಲೋಚನೆಗಳಲ್ಲಿರುವ ವೈವಿಧ್ಯತೆಯನ್ನು ಈ ಪದ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಕೃತಿಯನ್ನು ನೋಡಿ ಕಲಿಯಲು ಸಾಕಷ್ಟು ಅಂಶಗಳಿವೆಯೆಂದು ಕವಿ ಹೇಳಿದ್ದಾರೆ.

ಮುಕ್ತಕ– 237

ನೆಲವೊಂದೆ ಹೊಲ ಗದ್ದೆ ತೋಟ ಮರಳೆರೆ ಬೇರೆ।
ಜಲವೊಂದೆ ಸಿಹಿಯವಪ್ಪ ಜವುಗೂಟೆ ಬೇರೆ॥
ಕುಲವೊಂದರೊಳೆ ಸೋದರವ್ಯಕ್ತಿಗುಣ ಬೇರೆ।
ಹಲವುಮೊಂದುಂ ಸಾಜ – ಮಂಕುತಿಮ್ಮ॥

ಒಂದೇ ನೆಲವಾದರೂ ಅದರಲ್ಲಿ ಹೊಲ, ಗದ್ದೆ ಮತ್ತು ತೋಟಗಳಿವೆ. ನೆಲದಲ್ಲಿ ಮರಳು, ಹಾಗೂ ಕೆಂಪು ಮತ್ತು ಕಪ್ಪು ಮಣ್ಣುಗಳಿದ್ದು ಅವುಗಳೆಲ್ಲಾ ಬೇರೆಯಾದದ್ದೇ ಆಗಿವೆ. ನೀರು ಒಂದೇ ಆಗಿದ್ದರೂ ಅದರಲ್ಲಿ ಸಿಹಿ, ಉಪ್ಪು ಮತ್ತು ಸಪ್ಪೆ ಇರುತ್ತವೆ. ಹಾಗೆಯೇ ಒಂದೇ ಕುಲದಲ್ಲಿ ಹುಟ್ಟಿದರೂ ಅಣ್ಣತಮ್ಮಂದಿರ ಸ್ವಭಾವಗಳಲ್ಲಿ ವ್ಯತ್ಯಾಸವಿರುತ್ತದೆ. ಮನುಷ್ಯಜಾತಿ ಒಂದೇ ಆಗಿದ್ದರೂ ಒಬ್ಬೊಬ್ಬರದ್ದೂ ಒಂದೊಂದು ರೀತಿಯ ಗುಣಸ್ವಭಾಗಳು. ಒಂದೇ ಭೂಮಿಯಲ್ಲಿ ಕಂಡುಬರುವ ವೈವಿಧ್ಯದಂತೆ ಮನುಜರ ಸ್ವಭಾಗಳಲ್ಲೂ ವೈವಿಧ್ಯತೆಯಿದೆ. 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ' ಎಂಬ ಸರ್ವಜ್ಞನ ವಚನವನ್ನು ಈ ಪದ್ಯವು ನೆನಪಿಸುತ್ತದೆ. ಸೃಷ್ಟಿಯು ನಮಗೆ ಪಾಠವನ್ನು ಹೇಳಿಕೊಡುತ್ತಿದ್ದರೂ ಸಹ ನಮ್ಮ ಬುದ್ಧಿಯನ್ನು ಬಿಡದೆ. ಅಸಮಾನತೆಯನ್ನು ಸೃಷ್ಟಿಸಿಕೊಂಡಿದ್ದೇವೆ. ನೆಲದಲ್ಲಿರುವ ಮಣ್ಣು ಬೇರೆಯಾಗಿದ್ದರೂ ಸಹ, ಅದು ನಮಗೆ ಅನೇಕ ರೀತಿಯಲ್ಲಿ ಪ್ರಯೋಜನವಾಗುತ್ತದೆ. ಮಣ್ಣಿನ ಗುಣ ಬೇರೆಯಾದರೂ ಅವುಗಳ ಉದ್ದೇಶ ಫಸಲು ನೀಡುವುದೇ ಆಗಿರುತ್ತದೆ. ಇದು ಮನುಜರಿಗೆ ಮಾದರಿ ಎಂದರೆ ತಪ್ಪಾಗಲಾರದು.

ಮುಕ್ತಕ– 235

ಧರೆ ಸಸ್ಯಫಲದಿ ಜೀವಿಗೆ ಪುಷ್ಟಿಯಿತ್ತೊಡೇಂ।
ಮರಳಿ ತಾಂ ಪಡೆಯಳೇನ್ ಅವನಿನರ್ಥವನು?॥
ಧರಣಿಗೀ ನಮ್ಮೊಡಲು ಹುಯ್ಗಡುಬು ತಪ್ಪಲೆಯೊ!।
ಪರಮೇಷ್ಠಿ ಯುಕ್ತಿಯದು – ಮಂಕುತಿಮ್ಮ॥

ಭೂಮಿತಾಯಿಯು, ತನ್ನ ಒಡಲಿನಲ್ಲಿ ವಾಸಿಸುತ್ತಿರುವ ಜೀವಸಂಕುಲಗಳ ವಿವಿಧ ರೀತಿಯ ಸಸ್ಯ ಫಲಗಳನ್ನು ಕೊಟ್ಟು ಪುಷ್ಟಿಯಾಗುವಂತೆ ಮಾಡುತ್ತಾಳೆ. ಇವು ಸೇವಿಸಿದ ಸ್ವಲ್ಪ ಭಾಗವನ್ನು ಜೀರ್ಣಿಸಿಕೊಳ್ಳುವ ಜೀವಸಂಕುಲ ಉಳಿದುದನ್ನು ಭೂಮಿಗೇ ಹಿಂದಿರುಗಿಸುತ್ತವೆ. ಭೂಮಿತಾಯಿಯ ಜೀವಿಗಳ ದೇಹವನ್ನು ಇಡ್ಲಿ ತಯಾರಿಸುವ ತಪ್ಪಲೆಯಾಗಿ ಬಳಸಿಕೊಳ್ಳುತ್ತಾಳೆ. ಇದು ಬ್ರಹ್ಮನ ಸೃಷ್ಟಿಯ ತಂತ್ರವಾಗಿದೆಯೆಂಬುದು ಕವಿಯ ಅಭಿಪ್ರಾಯವಾಗಿದೆ.

ಮುಕ್ತಕ– 233

ಸೃಷ್ಟಿಯ ವಿಧಾನದಲಿ ಸೊಟ್ಟುಗಳು ನೂರಿಹುದು।
ನೆಟ್ಟಗಿಪೆನ್ ಅವನ್ ಎಂದು ನರರ ಚಿರದೀಕ್ಷೆ॥
ಇಷ್ಟಗಳನನ್ಯೋನ್ಯವವರೇಕೆ ಬಗೆದಿರರು।
ನಿಷ್ಠುರಪ್ರಿಯರವರು – ಮಂಕುತಿಮ್ಮ॥

ಸೃಷ್ಟಿಯಲ್ಲಿ ಹಲವಾರು ತಪ್ಪುಗಳಿವೆಯೆಂದೂ, ಅವುಗಳನ್ನು ಸರಿಮಾಡುತ್ತೇನೆಂದು ಪ್ರತಿಜ್ಞೆ ಮಾಡಿರುವವನಂತೆ ನಿರಂತರವಾಗಿ ಹೆಣಗಾಡುತ್ತಿರುತ್ತಾನೆ. ಆದರೆ ಸೃಷ್ಟಿಯಲ್ಲಿರುವ ತಪ್ಪುಗಳಿಗೆ ಕಾರಣವೇನೆಂದು ತಿಳಿದುಕೊಂಡು ಮನುಜನು ಕಾರ್ಯ ನಿರ್ವಹಿಸುವುದು ಸರಿ. ಅವರಿಗಿಷ್ಟಬಂದಂತೆ ಕಾರ್ಯ ನಿರ್ವಹಿಸುತ್ತಿರುವ ರೀತಿಯಿಂದ, ಒಬ್ಬರು ಮತ್ತೊಬ್ಬರ ನಡುವೆ ನಿಷ್ಠುರ ಉಂಟಾಗುವುದಕ್ಕೆ ಕಾರಣವಾಗುತ್ತಿದೆ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ' ಎಂಬ ವಚನದ 'ಡೊಂಕುಬಾಲದ ನಾಯಕರೆ ನೀವೇನೂಟವ ಮಾಡುವಿರಿ' ಎಂಬ ಕೀರ್ತನೆಗಳನ್ನು ಇದು ನೆನಪಿಸುತ್ತದೆ. ಸೃಷ್ಟಿಯನ್ನು ಸರಿಮಾಡುವೆನೆಂದು ಹೋರಾಡುತ್ತಿರುವ ಮನುಜರನ್ನು ಡಿ.ವಿ.ಜಿ.ಯವರು ಮಾರ್ಮಿಕವಾಗಿ ಹೇಳಿದ್ದಾರೆ. ಪ್ರಕೃತಿ ನಮಗೆ ಮೊದಲ ಪಾಠಶಾಲೆಯೆಂಬುದು ಕವಿಯ ಅಬಿಪ್ರಾಯವಾಗಿದೆ.

ಮುಕ್ತಕ– 162

ಕ್ಷಿತಿಚಕ್ರ, ರವಿಚಕ್ರ, ಋತುಚಕ್ರಗಳಿಗಿಹುದು।
ಮಿತವೃತ್ತಿ; ನರನಿಗಂತೆಯೆ ಕರ್ಮನಿಯತಿ॥
ಕ್ಷಿತಿಕಂಪ ರಾಹುಕೇತುಭ್ರಮೆ ನರಪ್ರಗತಿ।
ಅತಿಚರಿತೆ ಪ್ರಕೃತಿಯಲಿ – ಮಂಕುತಿಮ್ಮ॥

ಪ್ರತಿಯೊಂದು ಅಂಶವೂ ಚಟುವಟಿಕೆಯಿಂದ ಕೂಡಿದೆಯೆಂದೂ, ಪ್ರತಿಯೊಂದು ವಸ್ತುವಿಗೂ ತಮ್ಮದೇ ಆದ ಕಾರ್ಯಗಳಿವೆಯೆಂದು ಕವಿ ಹೇಳಿದ್ದು, ತಮ್ಮ ಪಾಡಿಗೆ ಅವು ಕಾರ್ಯನಿರ್ವಹಿಸುತ್ತಿರುತ್ತದೆ. ಹಾಗೆಯೇ ಮನುಜರೂ ತಮ್ಮ ಪ್ರಗತಿಯ ಕಡೆ ಸಾಗಬೇಕೆಂದು ಕವಿಯ ಅಭಿಪ್ರಾಯವಾಗಿದೆ. ಭೂಮಿಯ ತಿರುಗುವಿಕೆ, ಸೂರ್ಯನ ಚಲನೆ ವಿಧವಿಧವಾದ ಋತುಗಳು ಬಂದು ಹೋಗುವುದು. ಇವುಗಳಿಗೆ ಮಿತವಾದ ಕಾರ್ಯಗಳಿರುವ ಹಾಗೆಯೇ

ಮನುಜನಿಗೆ ಕರ್ಮದ ನಿಯಮವಿದೆ. ಭೂಕಂಪ, ರವಿ–ಚಂದ್ರ, ಮತ್ತು ಭೂಮಿಗಳ ಚಲನೆಗಳಲ್ಲಿ ಉಂಟಾಗುವ ಗ್ರಹಣ, ರಾಹು–ಕೇತುಗಳು ಸೂರ್ಯ–ಚಂದ್ರರನ್ನು ನುಂಗುತ್ತವೆ ಎನ್ನುವ ಭ್ರಮೆ, ನರನ ಪ್ರಗತಿ, ಇವುಗಳೆಲ್ಲವೂ ಪ್ರಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಸೃಷ್ಟಿಯಲ್ಲಿ ಕಂಡುಬರುವ ಇವುಗಳೆಲ್ಲಕ್ಕೆ ಯಾವುದೇ ನಿಯಮವಿಲ್ಲ. ಹಾಗೆಯೇ ಮನುಷ್ಯನ ಪ್ರಗತಿಯೂ ನಿರಂತರವಾಗಿ ನಡೆಯುತ್ತಿರುತ್ತದೆ.

ಮುಕ್ತಕ– 165

ಹೊಸಹೊಸದು ತಾನಾಗುತಿರ್‍ದೊಡಂ ತನ್ನಯ।
ಪ್ರಸವಪ್ರವಾಹ ಭೂಮಿಗಳ ಹಳೆತನದಿಂ॥
ನಸುಸೋಂಕು ವಾಸನೆಯ ಪೊನಲೊಂದಬೇಕಲ್ತೆ?।
ಹೊಸದು ಹಳದಾಗದೇ? – ಮಂಕುತಿಮ್ಮ॥

ಹರಿಯುತ್ತಿರುವ ನದಿಯನ್ನು ಮಳೆಯ ನೀರು ಸೇರಿಕೊಂಡು ಅದನು ಹೊಸದನ್ನಾಗಿ ಮಾಡುತ್ತದೆ. ಆದರೂ ಅದರ ಉಗಮಸ್ಥಾನವಾದ ಬೆಟ್ಟ ಮತ್ತು ಅದು ಹರಿಯುವ ನೆಲಗಳು ಹಳೆಯದ್ದೇ ಆಗಿರುವುದರಿಂದ ಆ ನೀರು ಸ್ವಲ್ಪಮಟ್ಟಿಗೆ ಹಳೆಯ ವಾಸನೆಗಳನ್ನು ಕೂಡಿಕೊಂಡ ಹರಿಯುತ್ತದೆ. ಇಂದಿನ ಹೊಸತು–ಹಳೆಯ ವಾಸನೆಗಳನ್ನು ಕೂಡಿಕೊಂಡು ಹರಿಯುತ್ತದೆ. ಇಂದಿನ ಹೊಸತು ದಿನಗಳೆದಂತೆ ಹಳೆಯದಾಗದೇ ಇರುತ್ತದೆಯೇ? ಎಂದು ಕವಿ ಪ್ರಶ್ನಿಸಿದ್ದಾರೆ. ಮನುಷ್ಯನು ಹಳೆಯದಾದ ಹಾಗೂ ಅನವಶ್ಯಕವಾದ ವಿಚಾರಗಳನ್ನು ಬಿಟ್ಟು, ಹೊಸ ಆಲೋಚನೆಗಳಣ್ನು ಅಳವಡಿಸಿಕೊಂಡು ಹೊಸತನವನ್ನು ತಾಳುವುದರಿಂದ ಮನುಜರು ಪ್ರಗತಿಯ ಕಡೆ ಸಾಗಲು ಸಾಧ್ಯವಾಗುತ್ತದೆಂಬುದು ಕವಿಯ ಆಲೋಚನೆಯಾಗಿದೆ.

ಮುಕ್ತಕ– 129

ಧರೆಯ ನೀರ್‍ಗಾಗಸದ ನೀರಿಳಿದು ಬೆರೆವಂತೆ।
ನರನ ಪ್ರಾಕ್ತನಕೆ ನೂತನಸತ್ತ್ವ ಬೆರೆತು॥
ಪರಿವುದೀ ವಿಶ್ವಜೀವನಲಹರಿಯನವರತ।
ಚಿರಪ್ರಯತ್ನನೂತ್ನ ಜಗ – ಮಂಕುತಿಮ್ಮ॥

ಈ ಭೂಮಿಯಲ್ಲಿರುವ ನೀರಿಗೆ ಆಕಾಶದಿಂದ ನೀರು ಬಿದ್ದು ಸೇರಿಕೊಳ್ಳುವಂತೆ, ಮನುಷ್ಯನ ಪುರಾತನತೆಗೆ ಹೊಸ ಸಾರಗಳು ಸೇರಿಕೊಂಡು ಪ್ರಪಂಚದ ಜೀವನದ ಅಲೆಗಳು ಯಾವಾಗಲೂ ಹರಿಯುತ್ತಿರುತ್ತವೆ. ಜಗತ್ತು ಯಾವತ್ತಿಗೂ ಹಳೆಯದೆ ಮತ್ತು ಹೊಸದೆ. ಈ ಭೂಮಿಯು ನಿತ್ಯನೂತನ, ನವನವೀನ ಕ್ರಿಯಾಶಕ್ತಿಯನ್ನು ನಿರಂತರವಾಗಿ ನಮಗೆ ನೀಡುತ್ತಿರುತ್ತದೆ. ಇದು ನಮಗೆ ಸ್ಫೂರ್ತಿ ನೀಡುವ ಜೀವಸೆಲೆಯಾಗಿದೆ. ತಾನು ಎಷ್ಟು ದಿನ

ಹೀಗೆಯೇ ಜೀವನ ತೊಳಲಾಟದಲ್ಲಿ ಇರಬೇಕು? ಇದರಿಂದ ಏನು ಪ್ರಯೋಜನ? ಇನ್ನೆಷ್ಟು ದಿನ ಹಳೆಯದನ್ನು ಅನುಸರಿಸಬೇಕು? ಎಂಬೆಲ್ಲಾ ಗೊಂದಲಗಳು ಕೆಲವು ಮನುಜರಲ್ಲಿರುತ್ತದೆ. ಅದಕ್ಕೆ ಡಿ.ವಿ.ಜಿ.ಯವರು ಹೀಗೆ ಹೇಳಿದ್ದಾರೆ. ಧರೆಗೆ ಮಳೆ ಸುರಿದು ಹೊಸತನವನ್ನು ತಂದುಕೊಡುವಂತೆ ಪ್ರತಿ ಬೆಳಗೂ ಹೊಸದೆಂದುಕೊಳ್ಳುವುದೇ ಜೀವನ ಸ್ಫೂರ್ತಿಯ ನೆಲೆ–ಸೆಲೆಯಾಗುತ್ತದೆ. ಬೇರೆಯವರು ಮಾಡುವ ಕೆಲಸವನ್ನು ಪರೀಕ್ಷೆ ಮಾಡುವುದೂ ಬೇಕಾಗಿಲ್ಲ. ಎಲ್ಲರೂ ತಮ್ಮ ಪಾಡಿಗೆ ತಾವು ಕಾರ್ಯ ನಿರ್ವಹಿಸುತ್ತಿರಬೇಕು.

ಮುಕ್ತಕ– 144

ವಾಯುವಂ ಕಾಣ್ಬನಾರ್? ತತ್ಕ್ರಿಯೆಯ ಕಾಣನಾರ್?।
ಮಾಯೆಯಂತ ಪರೀಕ್ಷ್ಯಕೃತಿ॥
ರಾಯನಂ ಕಾಣಲಾಗದೆ ಮಂತ್ರಿಯೆಡೆಸಾರ್ವ
ದೇಯಾರ್ಥಿವೊಲು ನೀನು – ಮಂಕುತಿಮ್ಮ॥

ಗಾಳಿಯನ್ನು ನೋಡಲಾಗುವುದಿಲ್ಲ. ಆದರೆ ಅದರ ಕೆಲಸವನ್ನು ಎಲ್ಲರೂ ಗಮನಿಸುತ್ತೇವೆ. ಹಾಗೆಯೇ ಮಾಯೆಯು ಪರೀಕ್ಷಿಲಾಗದ ಸತ್ವದ, ಆದರೆ ಕಾಣಬಹುದಾದ ಕಾರ್ಯ ನಡೆಯುತ್ತದೆ. ದೊರೆಯನ್ನು ನೋಡುವುದಕ್ಕೆ ಬಂದವನು, ಅವನನ್ನು ಕಾಣಲಾಗದೆ, ಮಂತ್ರಿಯ ಕಡೆ ಹೋಗಿ ದಾನ ಬೇಡುವವನಂತೆ ನೀನು. ನಾವು ಮಾಡುವ ಕೆಲಸದ ಬಗ್ಗೆ ಪ್ರಾಮಾಣಿಕತೆ ನಿಷ್ಠೆ ಇರಬೇಕು. ನಮ್ಮ ಪಾಡಿಗೆ ನಾವು ಕೆಲಸ ಮಾಡಬೇಕೇ ಹೊರತು, ಅದನ್ನು ತೋರ್ಪಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಮನುಷ್ಯ ಯಾವುದೇ ಮನುಷ್ಯ ತಾನು ಬಯಸಿದ್ದನ್ನೆಲ್ಲಾ ಈಡೇರಿಸಿಕೊಳ್ಳಲು ಸಾಧ್ಯವಿಲ್ಲ. ಇದ್ದುದರಲ್ಲಿ ಅಲ್ಪತೃಪ್ತರಾಗಿದ್ದರೆ ಜೀವನ ಸುಖಮಯವಾಗಿರುತ್ತದೆ.

ಮುಕ್ತಕ– 143

ಧಾತ್ರಿಯನು ಮದುವೆಮಂಟಪದವೊಲು ಸಿಂಗರಿಸಿ।
ಕ್ಷಾತ್ರದಗ್ನಿಗಳ ನರಹೃದಯಗಳೊಲಿರಿಸಿ॥
ಕೃತ್ರಿಮವನೆಡೆಬಿಡದೆ ನಡಸಿ ನಗುವ ವಿಲಾಸಿ।
ಚಿತ್ರಕಾರಿಯೊ ಮಾಯೆ – ಮಂಕುತಿಮ್ಮ॥

ಭೂಮಿಯನ್ನು ಮನುಷ್ಯನ ಕಣ್ಣುಗಳಿಗೆ ಮದುವೆ ಮಂಟಪದಂತೆ ಅಂದವಾಗಿ ಅಲಂಕರಿಸಿ, ಕ್ಷತ್ರಿಯನ ಜ್ವಾಲೆಗಳನ್ನು ಮನುಷ್ಯನ ಹೃದಯಗಳಲ್ಲಿ ಇರಿಸಿ, ಮೋಸಗಾರ್ತಿಯ ಕೆಲಸವನ್ನು ನಿರಂತರವಾಗಿ ನಡೆಸಿ, ತನ್ನಲ್ಲಿ ತಾನೇ ನಗುತ್ತ ಆನಂದಪಡುವ ಚಿತ್ರಕಾರಿ, ಈ ಮಾಯೆ. ಭೂಮಿಯನ್ನು ಶೃಂಗಾರ ಮಾಡುವುದರಿಂದ ಮನುಜರ ಕಣ್ಣುಗಳಿಗೆ ವಿಶೇಷ ಸಂತೋಷ ದೊರೆಯುತ್ತದೆ. ಮನುಜನಲ್ಲಿರಬೇಕಾದ ಮಾನವೀಯ ಗುಣದ ಜಾಗದಲ್ಲಿ

ದ್ವೇಷವನ್ನು ತುಂಬಿ, ಅವನನ್ನು ಅನೇಕ ರೀತಿಯಲ್ಲಿ ವರ್ತಿಸುವಂತೆ ಮಾಡುವ ಮಾಯೆ ಎಂದರೆ, ಅವನ ಆಲೋಚನೆಯನ್ನು ನೋಡುತ್ತಾ ತಾನು ಕಾಲ ಕಳೆಯುತ್ತಾನೆ.

ಮುಕ್ತಕ– 141

ಹಳೆ ಸೂರ್ಯ ಹಳೆ ಚಂದ್ರ ಹಳೆ ಭೂಮಿ ಹಳೆ ನೀರು।
ಹಳೆ ಹಿಮಾಚಲ ಗಂಗೆ ಹಳೆ ವಂಶಚರಿತೆ॥
ಹಳೆಯವಿವು ನೀನಿದರೊಳಾವುದನು ಕಳೆದೀಯೊ?।
ಹಳದು ಹೊಸತರೊಳಿರದೆ? – ಮಂಕುತಿಮ್ಮ॥

ಸೂರ್ಯ ಚಂದ್ರ ಭೂಮಿ, ನೀರು, ಹಿಮಾಲಯ ಪರ್ವತ ಗಂಗಾನದಿ, ಈ ವಂಶಚರಿತೆಗಳೆಲ್ಲವೂ ಹಳೆಯದಾಗಿರುವಾಗ ನೀನು ಇದರಲ್ಲಿ ಯಾವುದನ್ನು ಕಳೆಯುತ್ತೀಯೆ? ಇವುಗಳೆಲ್ಲವೂ ಹಾಗೆಯೇ ಇವೆ ಮತ್ತು ಇರುತ್ತವೆ. ಹಳೆದು ಹೊಸದರಲ್ಲಿ ಇರಲಾಗದೇ? ಭೂಮಿ, ಸೂರ್ಯ–ಚಂದ್ರ, ನೀರು ಇವೆಲ್ಲವೂ ಹಳೆಯದೇ ಆಗಿದ್ದು, ನಾವೀನ್ಯತೆಯನ್ನು ಹೊಂದುತ್ತಿರುತ್ತದೆ. ಮನುಜನೂ ಸಹ ಇದೇ ರೀತಿ ಪ್ರತಿಯೊಂದು ಸಂದರ್ಭದಲ್ಲಿ ಹೊಸದನ್ನು ಕಾಣುವ ಪ್ರಯತ್ನ ಮಾಡುವುದರಿಂದ ಯಾವುದೇ ರೀತಿಯ ಏಕತಾನತೆಯು ಕಾಡುವುದಿಲ್ಲ.

ಮುಕ್ತಕ– 148

ಪ್ರಕೃತಿಯಿಂ ಪೊರಗಿರುವ ನರನಾರು ಸೃಷ್ಟಿಯಲಿ?।
ಸ್ವಕೃತಿಯೆಂದವನೆನುವುದವಳಿರದೊಡಿರದು॥
ಸುಕೃತವೆನಿಸುವುದವಳ ನೀಂ ವಶಕೆ ಕೊಳುವ ನಯ।
ವಿಕೃತಿಗೆಡೆಯಾಗದಿರೊ – ಮಂಕುತಿಮ್ಮ ॥

ಪ್ರಕೃತಿಯಿಂದ ಹೊರಗಿರುವ ಮನುಷ್ಯ ಪ್ರಪಂಚದಲ್ಲಿ ಯಾರೂ ಇಲ್ಲ. ಅವನು ಪ್ರಕೃತಿಯ ಒಂದು ಅವಿಭಾಜ್ಯ ಅಂಗ, ತಾನೇ ಮಾಡಿದ್ದು(ಸ್ವಕೃತಿ) ಎಂದು ಅವನು ಎನ್ನುವುದು, ಪ್ರಕೃತಿ ಇಲ್ಲದಿದ್ದರೆ ಸಾಧ್ಯವಾಗದ ಮಾತು. ಪ್ರಕೃತಿಯನ್ನು ನೀನು ವಶಕ್ಕೆ ತೆಗೆದುಕೊಳ್ಳುವ ಸೂಕ್ಷ್ಮತೆ, ಒಂದು ಒಳ್ಳೆಯ ಕಾರ್ಯ ಎನಿಸುವುದು. ಕೆಲಸ ಮಾಡುವಾಗ ವಿಕಾರಕ್ಕೆ (ವಿಕೃತಿಗೆ ಎಡೆಗೊಡಬೇಡ. ಪ್ರಕೃತಿಯನ್ನು ಬಿಟ್ಟು ಪ್ರತ್ಯೇಕವಾಗಿರಲು ಯಾವುದೇ ಜೀವಿಯಿಂದಲೂ ಸಾಧ್ಯವಿಲ್ಲ. ತಾನು ನಿರ್ಮಿಸಿಕೊಳ್ಳುವುದೆಲ್ಲವೂ ಸ್ವಕೃತಿಯಾಗಿದ್ದು, ಪ್ರಕೃತಿಯನ್ನು ಹಿಡಿತದಲ್ಲಿಟ್ಟುಕೊಂಡಿರುವೆ ಎಂಬುದು ಮನುಜರ ಭ್ರಮೆಯಾಗಿದೆ.

ಮುಕ್ತಕ– 154

ಪೊಸರಸಂ ಬೇರಿಗನುದಿನಮೊದವಿ ಧರೆಯಿಂದ।
ಸಸಿಗೆ ಹೊಸತಳಿರ ತಲೆಯಲಿ ಮುಡಿಸುವಂತೆ॥
ಹೊಸ ಸೃಷ್ಟಿಸತ್ತ್ವಮೆತ್ತಣಿನೊ ಬರುತನುದಿನಂ।
ಪೊಸತಾಗಿಪುದು ಜಗವ – ಮಂಕುತಿಮ್ಮ॥

ಹೊಸದೊಂದು ರಸ, ಭೂಮಿಯಿಂದ ಬೇರಿಗೆ, ಪ್ರತಿನಿತ್ಯ ಒದಗಿ, ಸಸಿಗೆ ಹೊಸ ಚಿಗುರನ್ನು ಮೂಡಿಸುವಂತೆ, ಹೊಸ ಸೃಷ್ಟಿ ಸತ್ವಗಳು ಎಲ್ಲಿಂದಲೋ ಪ್ರತಿದಿನವೂ ಬಂದು ಈ ಜಗತ್ತನ್ನು ಹೊಸದನ್ನಾಗಿ ಮಾಡುತ್ತಿವೆ. ಇದು ನಿತ್ಯನೂತನವೂ, ಹೊಸಸೃಷ್ಟಿಯೂ ಆಗಿರುತ್ತದೆ. ಸೃಷ್ಟಿಯ ವಿಶಿಷ್ಟತೆಗೆ ಮತ್ತೆ ಮತ್ತೆ ಚಿಗುರುವ ಗಿಡದ ಲಕ್ಷಣಗಳು ಯಾವ ಶಕ್ತಿಯಿಂದ ಬರುತ್ತದೆಯೋ ಯಾರಿಗೂ ತಿಳಿದಿಲ್ಲ. ಆದರ, ಇದೇ ಲೋಕವನ್ನು ಹೊಸತನ್ನಾಗಿ ಮಾಡುತ್ತಿರುತ್ತದೆಂಬುದು ಕವಿ ಡಿ.ವಿ.ಜಿ.ಯವರ ಆಲೋಚನಾ ವಿಧಾನವಾಗಿದೆ.

ಮುಕ್ತಕ– 166

ಹುಳು ಹುಟ್ಟಿ ಸಾಯುತಿರೆ, ನೆಲ ಸವೆದು ಕರಗುತಿರೆ।
ಕಡಲೊಳೆತ್ತಲೊ ಹೊಸ ದ್ವೀಪವೇಳುವುದು॥
ಕಳೆಯುತೊಂದಿರಲಿಲ್ಲಿ, ಬೆಳೆವುದಿನ್ನೊಂದೆಲ್ಲೊ।
ಅಳಿವಿಲ್ಲ ವಿಶ್ವಕ್ಕೆ – ಮಂಕುತಿಮ್ಮ॥

ಈ ಜಗತ್ತಿನಲ್ಲಿ ಕೆಲವು ಕ್ರಿಮಿ–ಕೀಟಗಳು ಈವತ್ತು ಹುಟ್ಟಿ ಈವತ್ತೇ ಸಾಯುತ್ತದೆ. ನೆಲ ಸವೆದು ಕರಗಿ ಸಮುದ್ರದ ಒಂದು ಭಾಗವಾಗಿ ಹೋಗುತ್ತದೆ. ಇನ್ನಾವುದೋ ಒಂದು ಸಮುದ್ರದಲ್ಲಿ, ಹೊಸ ದ್ವೀಪವೊಂದು ಹುಟ್ಟಿಕೊಳ್ಳುತ್ತದೆ. ಇಲ್ಲೊಂದು ಹೋದರೆ, ಇನ್ನೆಲ್ಲೋ, ಮತ್ತೊಂದು ಹುಟ್ಟಿಕೊಳ್ಳುತ್ತದೆ. ಈ ವಿಶ್ವ ನಾಶವಾಗುವುದಿಲ್ಲ. ಭೂಮಿಯ ಮೇಲಿರುವ ಎಲ್ಲಾ ಜೀವಿಗಳಿಗೆ ನಾಶವಿದೆ. ಆದರೆ, ಭೂಮಿಯ ಅಸ್ತಿತ್ವಕ್ಕೆ ನಾಶವಿಲ್ಲ. ಬದಲಾಗುತ್ತಿರುವುದು ಭೂಮಿ ಸಹಜ ಪ್ರಕ್ರಿಯೆಯಾಗಿದೆ. ಭೂಮಿಯ ಒಂದು ಭಾಗ ಸಮುದ್ರದಲ್ಲಿ ಮುಳುಗಿದರೆ, ಮತ್ತೊಂದು ಭೂಭಾಗ ಮೇಲೆ ಕಾಣಿಸಿ ದ್ವೀಪವಾಗಿ ಪರಿಣಮಿಸುತ್ತದೆ. ಇದೊಂದು ನಿರಂತರ ಪ್ರಕ್ರಿಯೆ ಎಂದು ಕವಿ ಹೇಳಿದ್ದಾರೆ.

ಹೀಗೆ ಡಿ.ವಿ.ಜಿಯವರ 'ಮಂಕುತಿಮ್ಮನ ಕಗ್ಗ"ದ ಅನೇಕ ಪದ್ಯಗಳಲ್ಲಿ ಭೂಮಿಯನ್ನು ಸ್ಫೂರ್ತಿಯ ಚಿಲುಮೆಯೆಂದೇ ಗುರುತಿಸಲಾಗಿದೆ. ನೆಲವು ಎಲ್ಲಾ ಜೀವಿಗಳಿಗೆ ಮೂಲಾಧಾರವಾಗಿದ್ದು, ಜೀವ–ನಿರ್ಜೀವ ವಸ್ತುಗಳಿಗೆಲ್ಲವೂ ಜೀವಸೆಲೆಯಾಗಿದೆ. ಯಾವುದೇ ಬರಹಗಾರನ ಸಾಹಿತ್ಯ ಒಂದಲ್ಲ ಒಂದೆಡೆ ಭೂಮಿಯನ್ನು ಕುರಿತು, ಅಲ್ಲಿನ ಜೀವಸೆಲೆಯನ್ನು ಕುರಿತು ಬರಯಲೇಬೇಕಾಗುತ್ತದೆ. ಏಕೆಂದರೆ, ನಮ್ಮೆಲ್ಲರ ಅಸ್ತಿತ್ವವಿರುವುದೇ ಭೂಮಿತಾಯಿಯ, ಭುವಿಯ, ಧರಣಿಯ, ಧರೆಯ, ನೆಲದಿಂದಾಗಿ. ಹಾಗಾಗಿ, ಸಾಹಿತ್ಯ ಯಾವಾಗಲೂ ನೆಲಮುಟ್ಟುವ ಪ್ರೀತಿಯನ್ನು ಬಿಡಲಾಗದು.ಬಿಟ್ಟರೆ ಅದು ಶ್ರೇಷ್ಠ ಸಾಹಿತ್ಯವೆನಿಸಿಕೊಳ್ಳುವಿಕೆಯಲ್ಲಿ ಸೋಲುವ ಸಾಧ್ಯತೆ ಹೆಚ್ಚಾಗಿರುತ್ತದೆ.

[illegible]

ಅಧ್ಯಾಯ – 6
'ಮಂಕುತಿಮ್ಮನ ಕಗ್ಗ'ದಲ್ಲಿ ತಾತ್ವಿಕ ಅಂಶಗಳು:

ಮುಕ್ತಕ– 789

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ।
ಎಲ್ಲರೊಳಗೊಂದಾಗು – ಮಂಕುತಿಮ್ಮ॥

ಮನುಷ್ಯನು ನಾನು, ನಾನೇ ನನ್ನದು ಎಂಬ ಸ್ವಾರ್ಥವನ್ನು ಬಿಟ್ಟು ಜಗದ ಮನುಜರೆಲ್ಲರಂತೆ ತಾನೂ ಒಬ್ಬ ಎಂಬ ಭಾವದಿಂದ ಎಲ್ಲಾ ರೀತಿಯಿಂದಲೂ ಉಪಕಾರಿಯಾಗುವುದರಿಂದ ನಿಜ ಮನುಜತನದ ಬದುಕನ್ನು ಸಾರ್ಥಕ ಬದುಕನ್ನಾಗಿಸಿಕೊಳ್ಳಬೇಕೆಂಬ ಚಿಂತನೆ ಈ ಮುಕ್ತಕದಲ್ಲಿ ಅಡಕವಾಗಿದೆ.

ಬೆಟ್ಟದ ತಳದಲ್ಲಿ ಬೆಳೆವ ಹುಲ್ಲು ತನ್ನ ಸ್ವಾರ್ಥತನದಿಂದಲ್ಲದೆ ಅದನ್ನು ತಿಂದು ಜೀವಿಸುವ ಪ್ರಾಣಿಗಳ ಬದುಕಿಗೆ ಆಶ್ರಯವಾಗುವಂತೆ, ಮನೆಯೊಳಗೆ ಇರುವ ಒಂದು ಮಲ್ಲಿಗೆ, ಮನೆಯಲ್ಲಿರುವ ಎಲ್ಲಾ ಜನರಿಗೂ ತನ್ನ ಪರಿಮಳವನ್ನು ಹರಡುವಂತೆ, ಕಷ್ಟಗಳು ನೂರಾರಿದ್ದರೂ ಯಾವುದಕ್ಕೂ ಎದೆಗುಂದದೆ, ಎಷ್ಟೆ ಮಳೆ ಸುರಿದರೂ ಕರಗದ ಕಲ್ಲಿನಂತಾಗು, ದೀನ ದುರ್ಬಲರಿಗೆ ಕೈಗೆ ಎಟುಕುವನಂತಾಗು ಅಂದರೆ ಸಹಕಾರಿಯಾಗು ಅದರಂತೆ, ಎಲ್ಲರೊಳಗೆ ನೀನೊಬ್ಬನಂತಾಗು ಎಂದಿದ್ದಾರೆ ಹಾಗೂ ಸ್ವಾರ್ಥತನವನ್ನು ಬಿಟ್ಟು ಸಾರ್ಥಕ ಬದುಕನ್ನು ನಡೆಸು ಇದೇ ಸಮರಸದ ಉತ್ತಮ ಜೀವನ ಎಂದಿದ್ದಾರೆ.

ನಾನು ನನ್ನದು ಎನ್ನುವ ಅಹಂ ಅನ್ನು ಬಿಡಬೇಕು, ಇದನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ಅಭ್ಯಾಸ ಮಾಡಿಕೊಳ್ಳಬೇಕು. ಆದ್ದರಿಂದ ಕೆಲವು ಕಲೆಗಳನ್ನು ನಮ್ಮದಾಗಿಸಿಕೊಳ್ಳಬೇಕು. ಇದಕ್ಕೆ ಪೂರಕವಾಗುವಂತಹ ಮನೋಭಾವ ನಿರ್ಮಾಣಕ್ಕೆ ಸಂಗೀತ ಸಾಹಿತ್ಯ ನೃತ್ಯಗಳನ್ನು ನಾವು ನಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಅವು ನಮ್ಮನ್ನು ಅಂತರಂಗವನ್ನು ಒಂದು ಸಂಸ್ಕಾರಕ್ಕೆ ಒಳಪಡಿಸುತ್ತವೆ. ಅಂತಹ ಮಂಗಳಕರವಾದ ಮನದಂತೆ ಸಾಗೋ ಮಂಕುತಿಮ್ಮ ಎಂದಿದ್ದಾರೆ ಡಿ.ವಿ.ಜಿ. ನಮ್ಮ ಮನಸ್ಸಿನ ತಲ್ಲಣಗಳಲ್ಲಿ ಆತಂಕಗಳು ಜಗತ್ತಿನ ವ್ಯಾಪಾರಗಳಿಗೆ ಹೋಲಿಸಿದಾಗ ಮಾತ್ರ ಜಗತ್ತಿನ ವ್ಯತಿರಿಕ್ತ ನೀತಿ ನಿಯಮ ತಿಳಿಯುವಂತಹುದು. ಈ ಗಾಬರಿ ಅಶಾಂತತೆಗಳನ್ನು ಮನಸ್ಸಿನಿಂದ ಹೊರಗೋಡಿಸಿ ಬ್ರಹ್ಮ ವಸ್ತುವಿನ ಕಡೆಗೆ ಮನಸನ್ನು ತಿರುಗಿಸಿದ್ದೇ ಆದರೆ ನಮ್ಮ ಮನಸ್ಸು ಕದಡಿ ಹೋದ ನೀರಾಗದೇ ನಿರ್ಮಲವಾಗಿದ್ದು ಪರಿಪೂರ್ಣ ಪರಿಶುದ್ಧವಾದ ಸಮಾಧಾನ ದೊರೆಯುತ್ತದೆ. ಆಗ ಅನುಭವಕ್ಕೆ ಬರುವ ತಿಳಿವೆ ನಮ್ಮ ಗುರಿಯಾಗಬೇಕು ಎಂದು ಡಿ.ವಿ.ಜಿ ಹೇಳಿದ್ದಾರೆ.

ಜಗತ್ತಿನಲ್ಲಿ ಪ್ರಯೋಜನಕಾರಿಯಾಗಿ ಬದುಕಬೇಕು ಎನ್ನುವುದು ನಮ್ಮ ಸಂಸ್ಕೃತಿಯ ಮತ್ತು ಸಂಸ್ಕಾರಗಳ ಆಶಯವಾಗಿದೆ. ಹೀಗೆ ಎಂಬುದು ಒಂದು ಯಕ್ಷ ಪ್ರಶ್ನೆ. ಬಹಳಷ್ಟು ಬಾರಿ ನಾವು ನಮಗೆ ಬೇಕಾದ ರೀತಿಯಲ್ಲಿ ವರ್ತಿಸುವುದಿಲ್ಲ. ಅಂಥಾದ್ದರಲ್ಲಿ ಜಗತ್ತಿಗೆ ಉಪಕಾರಿಯಾಗಿ ಹೇಗೆ ಬದುಕುವುದು? ನಮ್ಮ ಅವಶ್ಯಕತೆಗಳನ್ನು ಆಸೆಗಳನ್ನು ಹೇಗೆ ಕಡಿಮೆ ಮಾಡಿಕೊಳ್ಳುವುದು. ಬೆಟ್ಟದಡಿಯಲ್ಲಿ ಬೆಳೆದಿರುವ ಹುಲ್ಲು ತನ್ನಷ್ಟಕ್ಕೆ ತಾನು ಬೆಳೆದರೂ ಅದು ದನಕರುಗಳಿಗೆ ಮೇವಾಗುತ್ತದೆಯಲ್ಲಾ, ಆ ರೀತಿ ನಾವೂ ಸಹ ಬದುಕಬೇಕು ಎನ್ನುತ್ತಾರೆ. ಡಿ.ವಿ.ಜಿಯವರು "ಮನೆಗೆ ಮಾರಿ ಊರಿಗೆ ಉಪಕಾರಿ ಎನ್ನುವಂತೆ ಆಗುತ್ತದೆ. ಅಷ್ಟೇ ಅಲ್ಲದೆ ತಾನಿರುವ ಸಮಾಜ, ಮನೆ, ದೇಶ ಮತ್ತು ಜಗತ್ತಿಗೆ, ಮಲ್ಲಿಗೆಯ ಸುಗಂಧದಂತೆ ಇದ್ದರೆ ಎಲ್ಲರೂ ನಮ್ಮನ್ನು ಇಚ್ಛಿಸುವಂತೆ ಸುಂದರವಾದ ಮತ್ತು ಸಾರ್ಥಕವಾದ ಬದುಕನ್ನು ಬದುಕಬೇಕಾಗುತ್ತದೆ.

ಜಗತ್ತಿನಲ್ಲಿರುವ ಪ್ರತಿಯೊಂದು ಜೀವಿಗೂ ಕಷ್ಟ ಬಾರದಿರಲು ಸಾಧ್ಯವಿಲ್ಲ. ಆ ಕಷ್ಟಗಳ ಭಾರದಿಂದ ಕುಗ್ಗುವವರೇ ಹೆಚ್ಚು ಮನಸ್ಸು ಕುಗ್ಗಿದಾಗ ಜೀವನ ಮತ್ತು ಬದುಕು ನೀರಸವಾಗುತ್ತದೆ. ಹಾಗೆ ಕುಗ್ಗದೆ ಬರುವ ಕಷ್ಟಗಳನ್ನೆಲ್ಲಾ ಅನುಭವಿಸಲೇಬೇಕಾಗುತ್ತದೆ. ಎಂದುಕೊಂಡು ಕಲ್ಲಿನಂತೆ ಜೀವಿಸಬೇಕಾಗುತ್ತದೆ. ಮಾನಸಿಕ ಸ್ಥಿರತೆಯನ್ನು ಕಳೆದುಕೊಳ್ಳದೆ ಧೃಢತೆಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಇರುವ ಮಾರ್ಗ ನಮಗಿಂತ ದೀನ ದೈನ್ಯರಿಗೆ ಹೋಲಿಸಿಕೊಂಡಾಗ ನಮ್ಮ ಕಷ್ಟ ಗೌಣವಾಗುತ್ತದೆ. ಅಂತಹವರಿಗೆ ಆಸರೆಯಾಗಿ. ಆಶ್ರಯವಾಗಿ ನಿಂತಾಗ ನಾವೇ ಅವರಿಗೆ ದೇವಮಾನವರಾಗಿ ಕಾಣಬಹುದು. ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂದು ಸರ್ವಜ್ಞನು ಹೇಳಿರುವಂತೆ ನಾವು ಎಲ್ಲರೊಳಗೂ ಒಂದಾಗಬೇಕು. ಸ್ವಾರ್ಥವನ್ನು ಬದಿಗಿರಿಸಿ ಪರಹಿತಕ್ಕಾಗಿ ಕೆಲಸಗಳನ್ನು ಮಾಡಬೇಕಾಗುತ್ತದೆ.

ಎಲ್ಲರೊಳಗೂ ಬೆರೆತು ಬದುಕಿದರೆ ಅದಕ್ಕಿಂತ ಪರೋಪಕಾರ ಮತ್ತೊಂದಿಲ್ಲ. ಅದರಿಂದಲೇ ಆನಂದವುಂಟಾಗುತ್ತದೆ. ಅದಕ್ಕೆ ಪಾರವೇ ಇರುವುದಿಲ್ಲ.

ಮುಕ್ತಕ– 45

ಬೆಂಕಿಯುಂಡೆಯ ಬೆಳಕು ಬೆಣ್ಣೆಯುಂಡೆಯ ಬೆಳಕು।
ಮಂಕುಹಿಡಿಸಲು ಸಾಕು ಮಣ್ಣುಂಡೆ ಕಣ್ಗೆ॥
ಶಂಕೆಗೆಡೆಯಿರದು ಕತ್ತಲೆಯೇ ಜಗವನು ಕವಿಯೇ।
ಬೊಂಕುದೀವಿಗೆ ತಂಟೆ – ಮಂಕುತಿಮ್ಮ॥

ಸೂರ್ಯನ ಬೆಳಕಾಗಲಿ, ಚಂದ್ರನ ಬೆಳಕಾಗಲಿ ಒಂದು ಪುಟ್ಟ ಹಣತೆಯೇ ಆಗಲಿ ನಮಗೆ ಬೆಳಕು ಬೀರಿ ಉಪಕಾರ ಮಾಡುತ್ತದೆ. ಆದರೆ ಜಗತ್ತಿಗೆ ಒಂದು ರೀತಿಯ ತಾತ್ವಿಕತೆಯಿಲ್ಲದ ಅಂಧಕಾರ ಮುತ್ತಿಕೊಂಡಿದೆ. ಇಲ್ಲಿ ಕತ್ತಲೆ ಬೆಳಕಿನಾಟವೂ ನಡೆಯಿತ್ತದೆ. ಇದರಿಂದ ನೋಡುವ ನೋಟಕ್ಕೆ ತೊಂದರೆಯಾಗುತ್ತದೆ. ನಮಗಿಲ್ಲಿ ಡಿ.ವಿ.ಜಿಯವರು ಹೇಳುವುದು ಸೂಚ್ಯವಾಗಿ ಹೇಳಿದ್ದಾರೆ, ನಮಗೆ ಜ್ಞಾನದ ಬೆಳಕು ಬೇಕು.

ಆ ಬೆಳಕು ಸೂರ್ಯನಂತಿರಬೇಕು. ಆ ಬೆಳಕು ಹೆಚ್ಚು ಪ್ರಖರವೂ ಅಲ್ಲದೆ ಹೆಚ್ಚು ಮಂದವೂ ಅಲ್ಲದ ಸಮತೆಯನ್ನು ಕಾಯ್ದುಕೊಳ್ಳುವಂತೆ ಜ್ಞಾನದ ಬೆಳಕಾಗಬೇಕು. ಚಂದ್ರನಂತೆ ತಂಪಾಗಿ ಶಾಂತತೆಯಿಂದರಬೇಕು. ಈ ಬೆಳಕಿನಿಂದ ಜಗತ್ತಿನ ಎಲ್ಲ ವಸ್ತುಗಳಲ್ಲಿನ ವಿಚಾರಗಳನ್ನು ತಿಳಿಯಲನುಕೂಲವಾಗುತ್ತದೆ. ಅಂದರೆ ಕತ್ತಲೆಯೇ ಇದ್ದರೆ ಯಾವ ವಸ್ತುವಿನ ಬಗೆಗೂ ಶಂಕೆಯೂ ಇರದು ಎಲ್ಲ ವಸ್ತುಗಳ ವಸ್ತು ಸ್ಥಿತಿ ಅರ್ಥವಾಗುತ್ತದೆ. ನಾವು ಈ ಜ್ಞಾನದ ಅರಿವನ್ನು ಪಡೆದುಕೊಂಡು ಸತ್ಯದ ಶೋಧಕ್ಕೆ ಎಳೆಸದೆ ಅಜ್ಞಾನಿಗಳಾಗಿ ಉಳಿದರೆ ನಮಗೆ ಶಂಕೆಯೇ ಇರುವುದಿಲ್ಲ. ನಾವು ಯಾವಾಗ ಅರ್ಧಂಬರ್ಧ ಜ್ಞಾನವನ್ನು ಹೊಂದುತ್ತೇವೆಯೊ ಅಲ್ಲಿಯೇ ಎಡವಟ್ಟಾಗುವ ಸಂದರ್ಭಗಳಿವೆ. ತಮ್ಮನ್ನು ತಾವೆ ಅರೆಜ್ಞಾನಿಗಳೆಂದು ಪ್ರತಿಪಾದಿಸಿಕೊಂಡು ಢೋಂಗಿ ಬಿಡುವ ಅಜ್ಞಾನಿಗಳೇನು ಕಡಿಮೆಯಲ್ಲ.

ಒಟ್ಟಾರೆಯಾಗಿ ಡಿ.ವಿ.ಜಿಯವರು ಈ ಮುಕ್ತಕದ ಮುಖಾಂತರ ಒಂದು ಸಂದೇಶವನ್ನು ಕೊಡಲು ಹೊರಟಿದ್ದಾರೆ. ಅದೇನೆಂದರೆ ಯಾವುದನ್ನು ಸರಿಯಾಗಿ ವಿಚಾರ ಮತ್ತು ವಿಮರ್ಶೆ ಮಾಡದೆ ಅರೆಬರೆ ಜ್ಞಾನ ಹೊಂದಿರುತ್ತೇವೆಯೊ ಅದನ್ನೆ ಸತ್ಯ ಎಂದುಕೊಳ್ಳುತ್ತೇವೆ. ಅದನ್ನೆಲ್ಲಾ ಹೊರತಾಗಿಸಿ ನಾವು ಸನ್ಮಾರ್ಗದಲ್ಲಿ ನಡೆಯುವ ತತ್ವವನ್ನು ಅಳವಡಿಸಿಕೊಳ್ಳಬೇಕು.

ಮುಕ್ತಕ– 46

ಇರಲಿ ಜೀವ ರಹಸ್ಯವರೆಪರದೆಯೊಳಗಡಗಿ।
ಅರಸಿ ವರಿಸುವರಾರು ಬೀದಿಬತ್ತಲಿಯ?॥
ಅರಳಿಪುದದಡಗಿರ್ದೊಡಾಗ ನಮ್ಮೆದೆಗಣ್ಣ।
ಸುರಸತೆಯ ಕುತುಕದಿಂ – ಮಂಕುತಿಮ್ಮ॥

ಈ ಜೀವ ರಹಸ್ಯವು ಅರೆಪರದೆಯೊಳಗೆ ಇರಲಿ ಅರಸಿ ವರಿಸುವರಾರು ಬೀದಿಬತ್ತಲಿಯ ನಮ್ಮ ಎದೆಗಣ್ಣು ಅರಳಿಪುದು ಅಡಗಿರುವಂತೆ, ಯಾರೂ ಕೂಡ ಬೀದಿ ಹುಚ್ಚಿಯನ್ನು ಹೋಗಿ ವರಿಸುವುದಿಲ್ಲವೋ ಹಾಗೆ, ನಮ್ಮ ಅಂತರ್ಗಣ್ಣು ಕಾಣದಿರುವುದು ಅರಿಯಲು ಕಾತುರದಿಂದ ಪರಮಾತ್ಮನನ್ನು ಹೀಗೆ ಅರಿತುಕೊಳ್ಳಲು ಸಾಧ್ಯ ಎನ್ನುತ್ತಾರೆ ಡಿ.ವಿ.ಜಿಯವರು.

ನಮಗೆ ಜ್ಞಾನದ ಅರಿವಾಗುವ ತನಕವೂ ಎಲ್ಲವೂ ಮಸುಕು ಮಸುಕಾಗುತ್ತದೆ. ಹಲವಾರು ವೇದ, ಸಿದ್ಧಾಂತಗಳು, ವಿಚಾರಗಳು, ಮತಧರ್ಮಗಳು ಇರುವಾಗ ಯಾವುದನ್ನು ನಂಬಿ ಯಾವುದನ್ನು ಬಿಡುವುದು. ನಮಗೆ ಸನ್ಮಾರ್ಗದಲ್ಲಿ ಜ್ಞಾನವನ್ನು ಅರಿವಾಗಿಸುವುದು ಬೇಕಾಗಿದೆ. ಅರಳಿಪುದು ಅದು ಅಡಗಿ ಇರ್ದೊಡೆ ಎಂದರೆ ನಾವು ಏನು ಮಾಡಬೇಕು ಅಂತಹ ಸತ್ಯದ ಅರಿವಾಗಬೇಕು. ಅಂತಹ ಹೃದಯ ಚಕ್ಷುವನ್ನು ತೆರೆಯಬೇಕು. ನಾವು ಅಂತರ್ಮುಖಿಗಳಾಗಿ ನಮ್ಮ ಒಳಗಣ್ಣನ್ನು ತೆರೆದು ಉದ್ದೀಪನಗೊಳಿಸಬೇಕು. ಅದಕ್ಕೆ ಸರಿಯಾದ ಗುರುವಿರಬೇಕು ಮತ್ತು ನಮಗೆ ಅಂತಹ ಅತೀತವಾದ ಸತ್ಯದ ಅರಿವಾಗಬೇಕು. ನಮ್ಮ ಹೃದಯದ ಕಣ್ಣುಗಳನ್ನು ತೆರೆಯಲು ಪ್ರಯತ್ನಪಟ್ಟು ಒಂದೇ ಸತ್ಯದ ಮತ್ತು ಸತ್ವಭರಿತವಾದ ತತ್ವದ ದರ್ಶನವನ್ನು ಮಾಡಿಕೊಳ್ಳೋಣ ಎನ್ನುತ್ತಾರೆ ಡಿ.ವಿ.ಜಿಯವರು.

ಮುಕ್ತಕ– 47

ಅರೆಗಣ್ಣು ನಮಗೆಂದು ಕೊರಕೊರಗಿ ಫಲವೇನು?।
ಅರೆಬೆಳಕು ಧರೆಯೊಳೆಂದೊರಲಿ ಸುಖವೇನು?॥
ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ।
ಪರಿಕಿಸಿದೊಡದು ಲಾಭ – ಮಂಕುತಿಮ್ಮ॥

ನಮಗೆ ತಿಳಿದಿರುವುದೇ ಅರೆಬರೆ ಜ್ಞಾನ. ನಾವು ಪೂರ್ಣ ಸತ್ಯವನ್ನು ಅರಿಯುವುದು ಹೇಗೆ? ಇರುವ ಜ್ಞಾನದಿಂದಲೂ ಸಂಪೂರ್ಣ ಜ್ಞಾನವನ್ನು ಪಡೆಯಲು ಯತ್ನಿಸಬೇಕು. ಈ ಜಗತ್ತಿನಲ್ಲಿ ಯಾವುದೇ ಭಾಗದಲ್ಲಿ ದಿನದ ಅರ್ಧಭಾಗ ಬೆಳಕು ಇನ್ನರ್ಧ ಭಾಗ ಕತ್ತಲು ಬೆಳಕಿನಲ್ಲಿ ನಾವು ನಮ್ಮ ಕೆಲಸದ ಕಾರ್ಯಗಳನ್ನು ಮಾಡುವ ಹಾಗೆ ಇರುವ ಜ್ಞಾನದಿಂದ ಲಾಭ ಪಡೆಯಬೇಕು.

ಮನುಷ್ಯರೆಲ್ಲರಿಗೂ ಒಂದಿಷ್ಟಾದರೂ ಜ್ಞಾನವಿರುತ್ತದೆ. ಅವರು ಹುಟ್ಟಿದ ವಾತಾವರಣ ಬೆಳೆದ ಪರಿಸರ ಅವರಿರುವ ಸಮಾಜ, ವಿದ್ಯಾಭ್ಯಾಸ, ಗೆಳೆತನ, ಅವರ ಹವ್ಯಾಸಗಳು, ನೋಡುವ ನೋಟ ಇವೆಲ್ಲವೂ ಹಲವಾರು ವಿಷಯಗಳ ಮೇಲೆ ಅವಲಂಬಿತವಾಗಿರುತ್ತದೆ. ನಾವುಗಳು ನಮ್ಮ ಅರಿವಿನ ಹರವನ್ನು ಅರಿತುಕೊಂಡು ಅರಿತದ್ದನ್ನು ಸಂದೇಹವಿಲ್ಲದೆ ಗಟ್ಟಿ ಮಾಡಿಕೊಳ್ಳಬೇಕು ಜ್ಞಾನವನ್ನು ವಿಸ್ತಿರಿಸಿಕೊಂಡು ಪ್ರಾಮಾಣಿಕ ಪ್ರಯತ್ನ ಮಾಡುತ್ತಾ ನಮ್ಮ ಜ್ಞಾನ ವೃದ್ಧಿಯೇ ಈ ಮುಕ್ತಕದ ಆಶಯ.

ಮುಕ್ತಕ– 49

ಪಂಡಿತರೆ ಶಾಸ್ತ್ರಿಗಳೆ ಮಿಥ್ಯೆಯಿಂ ತಥ್ಯಕ್ಕೆ।
ಖಂಡಿತದಿ ಸೇತುವೆಯ ಕಟ್ಟುವೊಡೆ ನೀವು॥
ಕಂಡಿಹಿರ ನರಹೃದಯದಾಳ ಸುಳಿ ಬಿರುಬುಗಳ?॥
ದಂಡವದನುಳಿದ ನುಡಿ – ಮಂಕುತಿಮ್ಮ॥

ಪಾಂಡಿತ್ಯವನ್ನು ಹೇಳುವ ಪಂಡಿತರೆ, ಶಾಸ್ತ್ರಿಗಳೆ, ಪಾಂಡಿತ್ಯದಿಂದ, ಶಾಸ್ತ್ರದಿಂದ ಸುಳ್ಳನ್ನು ನಿಜ ಎಂದು ಪ್ರತಿಪಾದಿಸಲು ಯತ್ನಿಸುತ್ತಿದ್ದೀರಾ, ಒಬ್ಬ ಸಾಮಾನ್ಯ ಮನುಷ್ಯನ ಹೃದಯದಾಳದ ನೋವನ್ನು ಅವನ ಹೃದಯದ ಸತ್ಯವನ್ನು ಕೇಳುತ್ತಾ ಸಾಮಾನ್ಯನೊಬ್ಬನ ಮನದ ಭಾವದ ಮುಂದೆ ಪಾಂಡಿತ್ಯವೂ ಮತ್ತು ಶಾಸ್ತ್ರಗಳೂ ನಿಷ್ಪ್ರಯೋಜಕ ಎಂದು ಹೇಳಿದ್ದಾರೆ ಡಿ.ವಿ.ಜಿ.

ಸಾಮಾನ್ಯನೊಬ್ಬನಿಗೆ ಇರುವ ಅನುಭವ ಯಾವ ಪಂಡಿತ ಪಾಮರ ಶಾಸ್ತ್ರಿಗಳಿಗೂ ಇರಲಾರದು. ಏಕೆಂದರೆ ಅವರಿಗೆ ಸಾಮಾನ್ಯ ಮಾನವರ ಮನದ ಅಂತರಂಗದ ಭಾವನೆ ಅವರಿಗೆ ತಲುಪುವುದೇ ಇಲ್ಲ. ಅಂದರೆ ಆತನ ಅನುಭವ ಮುಂದೆ ಇವರ ಪಾಂಡಿತ್ಯ ಗೌಣವಾಗುತ್ತದೆ. ಇಲ್ಲಿ ಶಾಸ್ತ್ರದ ವಿಷಯಗಳನ್ನು ಪ್ರತಿಪಾದಿಸುವ ಪಂಡಿತರ ನುಡಿಗಳಿಗಿಂತ ಜನ ಸಾಮಾನ್ಯರ ಆಂತರ್ಯದ ಅನುಭವದ ಭಾವಗಳಿಗೆ ಹೆಚ್ಚು ಮಹತ್ವವಿದೆ ಎನ್ನುತ್ತಾರೆ ಡಿ.ವಿ.ಜಿಯವರು.

ಆದರೆ ಶಾಸ್ತ್ರ ಪುಸ್ತಕದ ವಿಚಾರಗಳನ್ನು ಸಂಪೂರ್ಣ ತೊರೆಯಬೇಕೆಂದಲ್ಲ, ಪುಸ್ತಕ ಮತ್ತು ಶಾಸ್ತ್ರಗಳ ವಿಚಾರಗಳನ್ನು ನಮ್ಮ ವಿಚಾರದಲ್ಲಿ ಮಂಥನಗೊಳಿಸಿ, ತಿಕ್ಕಿ ತೀಡಿ, ಸಾಣೆ ಹಿಡಿದು, ಅದರೊಳಗಿನ ಸತ್ವದ ನವನೀತವನ್ನು ಅನುಭವದೊಳಗೆ ಮಿಶ್ರಣ ಮಾಡಿ ನಮಗೆ ಗೋಚರವಾದ ಸತ್ಯವನ್ನಷ್ಟೆ ನಮ್ಮೊಳಗೆ ಗಟ್ಟಿಗೊಳಿಸಿಕೊಳ್ಳಬೇಕು. ಈ ಶಾಸ್ತ್ರ ಮತ್ತು ಪಾಂಡಿತ್ಯದ ವಿಚಾರಗಳಲ್ಲಿರುವ ಸತ್ವವನ್ನು ಮೀರಿ ವಿಚಾರವನ್ನು ಒರೆಗೆ ಹಚ್ಚಬೇಕು ಶುದ್ಧ ವಿಚಾರಗಳಿಂದ ಮಾತ್ರ ನೆಮ್ಮದಿ.

ಅಧ್ಯಾಯ – 7
ಸಮಾರೋಪ

ಅಧ್ಯಯನದ ಒಳನೋಟ

'ಮಂಕುತಿಮ್ಮನ ಕಗ್ಗ'ವು ಒಂದು ಸಾರ್ವಕಾಲಿಕ ಸತ್ಯವನ್ನೊಳಗೊಂಡ ಕನ್ನಡದದ ಭಗವದ್ಗೀತೆ. ಇದು 945 ಮಕ್ತಕಗಳನ್ನು ಒಳಗೊಂಡಿದೆ. ಇದರಲ್ಲಿನ ಪ್ರತಿಯೊಂದು ಮುಕ್ತಕವು ಸಾವಿರ ಸಾವಿರದಷ್ಟು ತಾತ್ವಿಕ ಬುದ್ದಿ ಮತ್ತೆಯನ್ನು ಹೆಚ್ಚಿಸುವಂತಹುದು. ಈ 'ಮಂಕುತಿಮ್ಮನ ಕಗ್ಗ' ಒಂದು ಅಧ್ಯಯನದ ನಿಬಂಧದಲ್ಲಿನ ಮೊದಲನೇ ಅಧ್ಯಾಯವು ಅಧ್ಯಯನದ ಉದ್ದೇಶ, ವಿಧಾನ, ಸ್ವರೂಪ ಮತ್ತು ವ್ಯಾಪ್ತಿಯನ್ನು ಒಳಗೊಂಡಿದೆ.

ಈ ಮೊದಲನೇ ಅಧ್ಯಾಯದಲ್ಲಿ 'ಮಂಕುತಿಮ್ಮನ ಕಗ್ಗ'ವನ್ನು ಅಧ್ಯಯನ ಮಾಡುವುದರಿಂದ ಅದರ ಉದ್ದೇಶವು ಕಗ್ಗದಲ್ಲಿನ ಮುಕ್ತಕಗಳಲ್ಲಿನ ಅನುಭವ ಸಾರವನ್ನು ಹೀರಿ ನಮ್ಮ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸದ್ಬದುಕನ್ನು ಬದುಕುವುದೇ ಆಗಿದೆ.

ಮಂಕುತಿಮ್ಮನ ಕಗ್ಗದ ಅಧ್ಯಯನದ ವಿಧಾನವು ವಿಶೇಷವಾಗಿಯೇನೂ ಇಲ್ಲ. ಅಂದರೆ ಇತರೆ ಕವಿತೆಗಳಂತೆ ಓದಿ ಅರ್ಥೈಸಿಕೊಳ್ಳಬಹುದಾಗಿದೆ. ಆದರೆ ಓದುವ ವ್ಯವಧಾನ ಎಲ್ಲರಿಗೂ ಇರಬೇಕಾಗುತ್ತದೆ. ವ್ಯವಧಾನದಿಂದ ಓದಿದರೆ ಮಾತ್ರ ಅರ್ಥೈಸಿಕೊಂಡು ಜೀವನಕ್ಕೆ ಅಳವಡಿಸಿಕೊಳ್ಳಬೇಕಾಗುತ್ತದೆ. ಮಂಕುತಿಮ್ಮನ ಕಗ್ಗದ ಸ್ವರೂಪವು 945 ಮುಕ್ತಕಗಳನ್ನು ಹೊಂದಿದೆ. ಪ್ರತಿಯೊಂದು ಮುಕ್ತಕವು 04 ಸಾಲಗಳನ್ನು ಒಂದೊಂದು ವಿಷಯದ ಗುಂಪಾಗಿ ವಿಂಗಡಿಸಲಾಗಿದೆ. ಜೊತೆಗೆ ಇದನ್ನು ಆಧುನಿಕ ಕನ್ನಡದ ಭಗವದ್ಗೀತೆ ಎನ್ನುತ್ತಾರೆ. 'ಮಂಕುತಿಮ್ಮನ ಕಗ್ಗ'ದ ಅಧ್ಯಯನದ ವ್ಯಾಪ್ತಿ ಇದರಲ್ಲಿನ ವೈಚಾರಿಕ, ವೈಜ್ಞಾನಿಕ, ಪ್ರಕೃತಿಕ, ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಚಿಂತನೆಗಳು ಮತ್ತು ಜೀವನ ಮೌಲ್ಯಗಳನ್ನು ಸರಳಿಕರಿಸಿ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುವುದೇ ಆಗಿದೆ. ಇಲ್ಲಿನ ಯಾವುದೇ ಅಂಶಗಳು, ಪಲಿತಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ. ಮತ್ತು ಸೀಮಿತಗೊಳಿಸಲ್ಪಟ್ಟಿವೆ. ಮಂಕುತಿಮ್ಮದನ ಕಗ್ಗವನ್ನು ಅನೇಕರು ಅನೇಕ ರೀತಿಯಲ್ಲಿ ವಿಭಿನ್ನ ದೃಷ್ಟಿಕೋನದಲ್ಲಿ ಅಧ್ಯಯನ ಮಾಡಿದ್ದಾರೆ ಆದರೆ ಈಗಿನ ಪ್ರಸ್ತುತ ಆಧ್ಯಯನವೂ ಅವುಗಳಿಗಿಂತ ಹೊರತಾಗಿದೆ.

2ನೇ ಅಧ್ಯಾಯದಲ್ಲಿ 'ಮಂಕುತಿಮ್ಮನ ಕಗ್ಗ'ದ ಮಹತ್ವ, ಹಾಗೂ ಪ್ರಯೋಜನ ಕುರಿತಂತೆ ತಿಳಿಸಲಾಗಿದೆ. ಈ ಆಧ್ಯಯನದಲ್ಲಿ 'ಮಂಕುತಿಮ್ಮನ ಕಗ್ಗ'ವು. ಅದರದೇ ಆದ ಮಹತ್ವನವನ್ನು ಸ್ವರೂಪವನ್ನು ಹಾಗೂ ಪ್ರಯೋಜನಗಳನ್ನು ಹೊಂದಿದೆ. ಅದರ ಮಹತ್ವವನ್ನು ಅರಿಯುತ್ತಾ ಅದರ ಸ್ವರೂಪವನ್ನು ಆರ್ಥೈಸಿಕೊಳ್ಳಲಾಗುತ್ತದೆ. ಮತ್ತು ಕಗ್ಗದಲ್ಲಿನ ಮುಕ್ತಕಗಳನ್ನು ಜೀವನಕ್ಕೆ ಅಳವಡಿಸಿಕೊಳ್ಳುವುದರ ಮುಖಾಂತರ ಪ್ರಯೋಜನ ಹೊಂದಬಹುದು ಇವುಗಳಿಂದ ಜೀವನದ ಪ್ರತಿಯೊಂದು ವಿಚಾರಕ್ಕೂ ಪ್ರಯೋಜನಕಾರಿಯಾಗಿ ಅಳವಡಿಸಿಕೊಳ್ಳಬೇಕಾದಂತಹವುಗಳಾಗಿವೆ.

[illegible]

ಅಧ್ಯಾಯ – 3 ರಲ್ಲಿ 'ಮಂಕುತಿಮ್ಮನ ಕಗ್ಗ'ದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳು ಒಳಗೊಂಡಂತೆ ಚರ್ಚಿಸಿ, ವಿಶ್ಲೇಷಿಸಿಲಾಗಿದೆ. 'ಮಂಕುತಿಮ್ಮನ ಕಗ್ಗ'ದಲ್ಲಿನ ಮುಕ್ತಕಗಳು ಸಾಮಾಜಿಕವಾಗಿ ಹೀಗೆ ಮಹತ್ವ ಪಡೆದುಕೊಳ್ಳುತ್ತವೆ. ಮತ್ತು ಸಾಂಸ್ಕೃತಿಕವಾಗಿ ನಮ್ಮ ಸಂಸ್ಕೃತಿಯನ್ನು ಹೀಗೆ ಬಿಂಬಿಸುತ್ತವೆ ಮತ್ತು ಧಾರ್ಮಿಕ ಅಂಶಗಳನ್ನು ಹೇಗೆ ಒಳಗೊಂಡಿದೆ ಎಂಬುದನ್ನು ವಿಶ್ಲೇಷಿಸಿ ಮಿಮರ್ಶಿಸಲಾಗಿದೆ. ಈ ಕಗ್ಗದಲ್ಲಿನ ಮುಕ್ತಕಗಳಲ್ಲಿ ಎಲ್ಲ ಅಂಶಗಳನ್ನು ಒಳಗೊಂಡಿರುವ ಮುಕ್ತಕಗಳಿದ್ದರೂ ಕೂಡ ಸಾಮಾಜಿಕ, ಮತ್ತು ಧಾರ್ಮಿಕ ಅಂಶಗಳು ಹೆಚ್ಚು ಕಂಡು ಬರುತ್ತವೆ.

ಅಧ್ಯಾಯ 04 ರಲ್ಲಿ 'ಮಂಕುತಿಮ್ಮನ ಕಗ್ಗ'ದಲ್ಲಿನ ರಾಜಕೀಯ ಮತ್ತು ವ್ಯಾವಹಾರಿಕ ಅಂಶಗಳನ್ನು ಕುರಿತು ಬೆಳಸಲಾಗಿದೆ. ಮುಕ್ತಕಗಳಲ್ಲಿ ರಾಜಕೀಯ ವಿಚಾರಗಳು ಅಂದು, ಇಂದು , ಮುಂದೂ ಕೂಡ ಪ್ರಸ್ತುತವೆನಿಸುವ ಅಂಶಗಳನ್ನು ಒಳಗೊಂಡಿದೆ. ಅದರಲ್ಲೂ ರಾಜಕೀಯ ವಿಷಯಗಳು ಸರ್ವಕಾಲಕ್ಕೂ ಚಾಟಿ ಏಟಿನಂತಿವೆ.

ಅಧ್ಯಾಯ 05 ರಲ್ಲಿ ಕಗ್ಗದಲ್ಲಿ ಕಂಡುಬರುವಂತಹ ಭೂಮಿ ಮತ್ತು ಮನುಜನ ಸಂಬಂಧದ ಬಗ್ಗೆ ಕುರಿತು ವಿಶ್ಲೇಷಿಸಲಾಗಿದೆ. ಕಗ್ಗದಲ್ಲಿಯೂ ಭೂಮಿ, ಪ್ರಕೃತಿ, ಪರಿಸರದ ಬಗೆಗೆ ಡಿ.ವಿ.ಜಿ. ಯವರ ಕಾಲಕ್ಕೆ ಬರೆದಿದ್ದರು. ಈ ಮುಕ್ತಕಗಳಲ್ಲಿ ಅನೇಕ ವಿಷಯಗಳನ್ನು ತಿಳಿಸುತ್ತಾರೆ. ಇಲ್ಲಿನ ಮುಕ್ತಕಗಳು ಭೂಮಿ ಮನುಜನ ಸಂಬಂಧದ ಬಗ್ಗೆ ತಿಳಿಸಿರುವುದರಲ್ಲಿ ಉದಾ: – ಮುಕ್ತಕ 859 ರಲ್ಲಿ ವಿವರಿಸುವಂತೆ ಭೂಮಿ ಮತ್ತು ಮನುಜನ ಸಂಬಮಧಗಳು ಹೇಗೆ ಒಂದಕ್ಕೊಂದು ಮಿಳಿತಗೊಂಡಿವೆ ಎಂಬುದನ್ನು ತಿಳಿಸಲಾಗಿದೆ.

ಅಧ್ಯಾಯ 06 ರಲ್ಲಿ 'ಮಂಕುತಿಮ್ಮನ ಕಗ್ಗ'ದಲ್ಲಿನ ತಾತ್ವಿಕ ಅಂಶಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಅಂದರೆ ಇಲ್ಲಿರುವ ಮುಕ್ತಕಗಳೆಲ್ಲವೂ ತಾತ್ವಿಕ ಅಂಶಗಳನ್ನು ಒಳಗೊಂಡಂತಹುವುಗಳೆ ಆಗಿವೆ. ಆದರೂ ಅದರಲ್ಲೂ ಕೆಲವು ಆಯ್ದ ಮುಕ್ತಕಗಳಲ್ಲಿ ಇನ್ನೂ ಹೆಚ್ಚಿನ ತಾತ್ವಿಕ ವಿಚಾರಗಳನ್ನು ಹೇಳಲಾಗಿರುವುಗಳನ್ನು ಹೆಕ್ಕಿ ತೆಗೆದು ವಿಶ್ಲೇಷಿಸಲಾಗಿದೆ. ಡಿ.ವಿ.ಜಿ. ಯವರ ಕಗ್ಗವು ಗಾಢ ಚಿಂತನೆ ಆಧ್ಯಯನ ಶಾಸ್ತ್ರಾವಲೋಕನದಿಂದ ಮತ್ತು ಜೀವನಾನುಭವದ ಆಧಾರದ ಮೇಲೆ ನಡೆದಿರುವಂತಹ ಒಂದು ಆಪ್ತ ಸಂವಾದ ಜೇನುನೊಣವು ಮಕರಂದವನ್ನು ಸಂಗ್ರಹಿಸಿ ಜೇನಾಗಿ ಪರಿವರ್ತಿಸಿ ನಮಗೆ ನೀಡುವಂತೆ ಡಿ.ವಿ.ಜಿಯವರು ರಾಮಾಯಣದ ಮೊದಲ ಆರ್ಷ ಗ್ರಂಥಗಳ ಸಂದೇಶವನ್ನು ಸಂಗ್ರಹಿಸಿ ಕಗ್ಗದ ರೂಪದಲ್ಲಿ ನಮಗೆ ನೀಡಿದ್ದಾರೆ". ಎಂದು ಎಂ.ವಿ.ಸೀತಾರಾಮಯ್ಯನವರ ಪದ್ಯದ ತಾತ್ವರ್ಯ.

*24. "ಗ್ರಂಥ ರೂಪದ ಅರ್ಥ ವಿವರಣೆ, ವ್ಯಾಖ್ಯಾಯನ – ಪ್ರವಚನ, ಗಾಯನ, ಚಿಂತನ ಮಾಲಿಕೆ, ಹೇರಳ ಸಾಂದರ್ಭಿಕ ಉದ್ದತಿಗಳು – ಹೀಗೆ ಸಾಧ್ಯವಿರುವ ಎಲ್ಲ ಮಾಧ್ಯಮಗಳ ಮೂಲಕವೂ ನಿರಂತರ ಚಲಾವಣೆಯಲ್ಲಿದೆ "'ಮಂಕುತಿಮ್ಮನ ಕಗ್ಗ'" ಇಷ್ಟು ವಿಶಾಲ ವ್ಯಾಪ್ತಿಯೂ ಜನಾದರಣೇಯೂ ಒಂದುದ ಕೃತಿಗೆ ದೊರೆತಿರುವುದನ್ನು ದೊಡ್ಡ ವಿಸ್ಮಯವೆಂದು ಹೇಳಬೇಕಾಗಿದೆ.*24

ಅಡಿ ಟಿಪ್ಪಣಿ *24 ಶ್ರೀ ಮದ್ಭಗವದ್ಗೀತಾ ಮತ್ತು ಕಗ್ಗ ತಾತ್ಪರ್ಯ ಲೇ:– ಶ್ರೀಕಾಂತ್, ಮುನ್ನುಡಿ– ಡಾ॥ಎಸ್.ಆರ್. ರಾಮಸ್ವಾಮಿ.

[illegible]

ಫಲಿತಗಳು

- ಡಿ.ವಿ. ಗುಂಡಪ್ಪನವರು ರಚಿಸಿರುವ 'ಮಂಕುತಿಮ್ಮನ ಕಗ್ಗ' ಕೃತಿಯಲ್ಲಿ ಕಂಡುಬರುವ ಅನೇಕ ವಿಭಿನ್ನ ವಿಷಯಗಳು ಸಮಾಜದ ಜೊತೆಯಲ್ಲಿ ಹೇಗೆ ಅನುಸಂಧಾನಗೊಂಡಿವೆ ಎಂಬ ಅಂಶಗಳನ್ನು ಗುರುತಿಸಲಾಗಿದೆ.
- "ಮಂಕುತಿಮ್ಮನ ಕಗ್ಗ" ಕೃತಿಯಲ್ಲಿ ಈಗಾಗಲೇ ಅಸ್ಥಿತ್ವದಲ್ಲಿರುವ ಕೆಲವು ಧರ್ಮಗಳ ಆಚಾರ–ವಿಚಾರಗಳನ್ನು, ನಂಬಿಕೆಗಳನ್ನು, ದೈವಿಕ ಅಂಶಗಳನ್ನು ಪ್ರಸ್ತಾಪ ಮಾಡಲಾಗಿದೆ. ಈ ಅಂಶಗಳನ್ನು ಪರಿಶೀಲಿಸಿ ಅಧ್ಯಯನ ಮಾಡಲಾಗಿದೆ.
- "ಮಂಕುತಿಮ್ಮನ ಕಗ್ಗ"ದ ಕೆಲವು ಮುಕ್ತಕಗಳಲ್ಲಿ ಉತ್ತಮ ಜೀವನಕ್ಕೆ ಸಹಕಾರಿಯಾಗಿರುವ, ಮಾನವೀಯತೆಯ ಅಂಶಗಳು ಪ್ರಸ್ತಾಪವಾಗಿರುವುದು ಸರಿಯಷ್ಟೆ. ಈ ಮಾನವೀಯ ಅಂಶಗಳು ಧರ್ಮಾತೀತವಾಗಿದ್ದು, ವಿಶ್ವಮಾನವತಾವಾದವನ್ನು ಮೂಡಿಸುವ ಪ್ರಯತ್ನ ಮಾಡಿದೆ. ಇದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.
- ಮಾನವಜೀವನದ ಜೊತೆ ನಿರಂತರವಾಗಿ ಸಂಬಂಧ ಹೊಂದಿರುವ ಕೆಲವು ಮೂಲಭೂತ ಅಂಶಗಳಲ್ಲಿ ಸಮಾಜ, ಸಂಸ್ಕೃತಿ ಮತ್ತು ರಾಜಕೀಯ ಮುಂತಾದ ಅಂಶಗಳು ಮುಖ್ಯ ಪಾತ್ರ ನಿರ್ವಹಿಸುತ್ತವೆ. ಈ ಅಂಶಗಳನ್ನೊಳಗೊಂಡಂತೆ ಕಗ್ಗದಲ್ಲಿರುವ ಮುಕ್ತಕಗಳು ವಿಶೇಷವಾಗಿ ಪ್ರಸ್ತಾಪಿತವಾಗಿವೆ. ಈ ಅಂಶಗಳನ್ನು ಕುರಿತಂತೆ ಪ್ರಸ್ತುತ ಅಧ್ಯಯನದಲ್ಲಿ ಉಲ್ಲೇಖಿಸಲಾಗಿದೆ.
- ಮಾನವನ ವ್ಯಕ್ತಿತ್ವ ನಿರ್ಮಾಣದಲ್ಲಿ ಮಂಕುತಿಮ್ಮನ ಕಗ್ಗ ಅಥವಾ ಈ ರೀತಿಯ ಕಾವ್ಯಗಳು ನಿರಂತರವಾಗಿ ಓದುಗರ ಅಥವಾ ಆಸಕ್ತರ ಮೇಲೆ ನಿರಂತರವಾದ ಪರಿಣಾಮ ಬೀರುತ್ತಿರುತ್ತದೆ. ಇದು ಸಮಾಜದಲ್ಲಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತಿರುತ್ತದೆ. ಇಂತಹ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.
- 'ಮಂಕುತಿಮ್ಮನ ಕಗ್ಗ' ಪ್ರಕೃತಿಯನ್ನು ಕುರಿತಂತೆ ಅನೇಕ ಮುಕ್ತಕಗಳನ್ನು ಹೊಂದಿವೆ. ಇದರಲ್ಲಿ ಮನುಷ್ಯ ಮತ್ತು ಭೂಮಿಯ ನಡುವಿನ ಸಂಬಂಧವಂತೂ ವಿಶೇಷವೆಂದು ಪ್ರಸ್ತಾಪಿಸಲಾಗಿದೆ. ಈ ರೀತಿಯ ಭೂಮಿ ಮತ್ತು ಮನುಜನ ಸಂಬಂಧಗಳನ್ನು ಕುರಿತು ಪ್ರಸ್ತಾಪವಾಗಿರುವ ಅಂಶಗಳನ್ನು ಗುರುತಿಸಲಾಗಿದೆ.
- 'ಮಂಕುತಿಮ್ಮನ ಕಗ್ಗ'ದ ಮುಕ್ತಕಗಳಲ್ಲಿ ಬಳಕೆಯಾಗಿರುವ ಭಾಷೆಯು, ಬಳಕೆಯಲ್ಲಿರುವ ಹೊಸಗನ್ನಡವಾದರೂ ಅವುಗಳ ರಚನಾಬಂಧವು ಹಳಗನ್ನಡದಂತೆಯೇ ಕಂಡುಬರುತ್ತದೆ. ಈ ರೀತಿ ಭಾಷಿಕ ಅಂಶಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.
- 'ಮಂಕುತಿಮ್ಮನ ಕಗ್ಗ'ದಲ್ಲಿ ಜೀವನಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯನ್ನು ಪ್ರಸ್ತಾಪಿಸಲಾಗಿದ್ದು, ಜೀವನದ ಪರಮೋದ್ದೇಶ, ಜೀವನದಲ್ಲಿ ಜನರು ಅನುಸರಿಸಬೇಕಾದ ನೀತಿಗಳು, ಹಾಗೂ ಅವುಗಳ ಮೂಲಕ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬೇಕಾದ ರೀತಿಯನ್ನು ವಿವರಿಸುತ್ತದೆ. ಇಂತಹ ತಾತ್ವಿಕ ಅಂಶಗಳನ್ನು ಕುರಿತ ಮುಕ್ತಕಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

- 'ಮಂಕುತಿಮ್ಮನ ಕಗ್ಗ'ವು ಉತ್ತಮ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ರಚನೆಯಾಗಿರುವ ಕೃತಿಯಾಗಿದೆ. ಈ ಕಾರಣದಿಂದಾಗಿಯೇ ಅನೇಕ ಓದುಗರು ಈ ಕೃತಿಯನ್ನು ಆಸ್ವಾದಿಸುತ್ತಾರೆ ಮತ್ತು ಇದರ ಬಗ್ಗೆ ಪ್ರಸ್ತಾಪವನ್ನು ಮಾಡುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಈ ಬಗ್ಗೆ ಸಾಂದರ್ಭಿಕವಾಗಿ ಉಲ್ಲೇಖ ಮಾಡಲಾಗಿದೆ.

ಸಫಲತೆ ಮತ್ತು ಮಿತಿಗಳು

"ಮಂಕುತಿಮ್ಮನ ಕಗ್ಗ"ವು ಜೀವನಕ್ಕೆ ಸಂಬಂಧಿಸಿದ ಭೌತಿಕ ಮತ್ತು ಅಭೌತಿಕವಾದ ಅನೇಕ ವಿಷಯಗಳನ್ನು ತನ್ನ ಒಡಲಿನಲ್ಲಿರಿಸಿಕೊಂಡಿದೆ. ಸೃಷ್ಟಿಯಲ್ಲಿರುವ ಜೀವಸಂಕುಲ, ಗಿಡ–ಮರ–ಬಳ್ಳಿ, ಅವುಗಳು ಸೃಷ್ಟಿಯಾದ ಬಗೆ, ಅವುಗಳ ಅಳಿವು, ಸೂರ್ಯ–ಚಂದ್ರ–ನಕ್ಷತ್ರ, ಆಕಾಶ, ಗಾಳಿ, ಬೆಟ್ಟ–ಗುಡ್ಡ ನದಿ, ಸಮುದ್ರ ಮುಂತಾದ ಗೋಚರಾಗೋಚರವಾದ ಬಹುವಿಶ್ಲೇಷಣೆಯ ವಾರಿಧಿಯಾಗಿದೆ. ಇದನ್ನು ಈಸಬಲ್ಲವರಿಗೆ ಇದು ಬಹಳ ಸರಳವಾಗಿ ಕಂಡುಬಂದರೆ, ಇದರಲ್ಲಿ ಈಜಲು ಸಾಧ್ಯವಾಗದವರಿಗೆ ಇದು ಕಬ್ಬಿಣದ ಕಡಲೆಯೇ ಸರಿ.

ಪ್ರಸ್ತುತ ಅಧ್ಯಯನದಲ್ಲಿ ಡಿ.ವಿ. ಗುಂಡಪ್ಪನವರಿಂದ ರಚಿತವಾಗಿರುವ "ಮಂಕುತಿಮ್ಮನ ಕಗ್ಗ" ದ ಕೃತಿಯಲ್ಲಿನ ಕೆಲವು ಪ್ರಾತಿನಿಧಿಕ ಪದ್ಯಗಳನ್ನು ಪರಿಶೀಲಿಸಲಾಗಿದೆ. ಕಗ್ಗದ ಜನಪ್ರಿಯತೆಗೆ ಕಾರಣಗಳನ್ನು ಗುರುತಿಸುವುದರ ಮೂಲಕ ಜನಸಾಮಾನ್ಯರನ್ನು ತಲುಪಿದ ರೀತಿಯನ್ನು ಗುರುತಿಸಲಾಗಿದೆ. ಸಮಾಜದಲ್ಲಿ ಕಗ್ಗವು ಮೂಡಿಸಿರುವ ಮೌಲ್ಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಅನೇಕ ಸಂದರ್ಭಗಳಲ್ಲಿ ಮೂಲ ಪಠ್ಯವನ್ನು ಬಿಟ್ಟು, ಅವುಗಳ ತಾತ್ಪರ್ಯಗಳು ಆಸಕ್ತರ ಮೇಲೆ ಹೆಚ್ಚು ಪರಿಣಾಮ ಬೀರಿದ್ದು, ಅವುಗಳನ್ನು ಕುರಿತು ಪರಿಶೀಲನೆ ಮಾಡಲಗಿದೆ. ಓದುಗರನ್ನು ಆಕರ್ಷಿಸುವ ವಿಶಿಷ್ಟ ಅಯಸ್ಕಾಂತ ಗುಣ ಹೊಂದಿರುವ ಕಾರಣಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಪ್ರತಿಯೊಂದು ಪದ್ಯವೂ ಪ್ರತ್ಯೇಕ ಮುಕ್ತಕಗಳೇ ಆಗಿದ್ದರೂ ಸಹ, ಅನೇಕ ಮುಕ್ತಕಗಳು ಕೆಲವೊಮ್ಮೆ ಸಾಮ್ಯತೆಯನ್ನು, ಕೆಲವು ವಿಭಿನ್ನ ಪ್ರತಿಮೆಗಳ ಮೂಲಕ ಜನರ ಮನಸ್ಸಿನ ಮೇಲೆ ಪರಿಣಾಮ ಬೀರಲು ಪ್ರಯತ್ನಿಸಿದೆ. ಕಗ್ಗವನ್ನು ಗ್ರಹಿಸುವ ದೃಷ್ಟಿಯಲ್ಲಿ ವೈವಿಧ್ಯತೆಯಿರುವುದನ್ನು ಗುರುತಿಸಬಹುದು.

"ಮಂಕುತಿಮ್ಮನ ಕಗ್ಗ"ವು ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಕಾಣುವ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಪೌರಾಣಿಕ, ಮಾನವೀಯ, ತಾತ್ವಿಕ ಅಂಶಗಳನ್ನು ಒಳಗೊಂಡಿದ್ದು, ಈ ಎಲ್ಲಾ ಅಂಶಗಳನ್ನು ಅಧ್ಯಯನದಲ್ಲಿ ಒಳಗು ಮಾಡಲಾಗಿದೆ. ಧರ್ಮವನ್ನು ವಿವರಿಸಬೇಕಾದ ಸಂದರ್ಭದಲ್ಲಿ ಅದು ಯಾವುದೋ ಒಂದು ಧರ್ಮದ ನಿದರ್ಶನವನ್ನು ತೆಗೆದುಕೊಂಡಿದ್ದರೂ ಸಹ, ಅದು ಹೇಗೆ ಮಾನವೀಯತೆಯ ಅಂಶವನ್ನು ವ್ಯಕ್ತಪಡಿಸುತ್ತದೆ ಹಾಗೂ ಇಂದಿನ ಜೀವನ ವ್ಯವಸ್ಥೆಯ ಜೊತೆಗೆ ಹೇಗೆ ಅನುಸಂಧಾನಗೊಳ್ಳುತ್ತದೆ. ಸಮಾಜ, ಸಂಸ್ಕೃತಿ, ಭಾಷೆ ಮುಂತಾದುವು ಬೇರೆ ಬೇರೆಯಾಗಿದ್ದರೂ, ಮನುಜರೆಲ್ಲರೂ ಒಂದೇ ಎಂಬ ಅಂಶವನ್ನು ಕಗ್ಗವು ಬಿಂಬಿಸಿದೆ. ರಾಜಕೀಯ ಮನೋಭಾವಗಳು ಕಾಲಕ್ಕೆ ತಕ್ಕಂತೆ ಬದಲಾಗುತ್ತಿದ್ದರೂ ಸಹ, ಎಲ್ಲಾ ಕಾಲಕ್ಕೂ ಮನುಷ್ಯನ ಮೂಲ ಗುಣ ಹೇಗೆ ಒಂದೇ ರೀತಿ ಇರುತ್ತದೆ ಎಂಬುದರ ದರ್ಶನ ನೀಡುವ ಮುಕ್ತಕಗಳನ್ನು ಗುರುತಿಸಬಹುದು.

[illegible]

ಉತ್ತಮ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ "ಮಂಕುತಿಮ್ಮನ ಕಗ್ಗ"ದ ಕೊಡುಗೆ ಎಷ್ಟು ಅವಶ್ಯಕತೆ ಎಂಬುದನ್ನು ಗುರುತಿಸಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗುತ್ತದೆ. ಕಗ್ಗವನ್ನು 'ಕನ್ನಡದ ಭಗವದ್ಗೀತೆ' ಎಂದು ಕರೆಯಲಾಗಿದೆ. ಕಗ್ಗವು ಮನುಷ್ಯನಲ್ಲಿ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡಲು ಅತ್ಯವಶ್ಯವಾದ ಬೌದ್ಧಿಕ ಔಷಧವಾಗಿ ಕಾರ್ಯ ನಿರ್ವಹಿಸಿದೆ. ಧಾರ್ಮಿಕ ಗ್ರಂಥಗಳು ನಿರ್ದಿಷ್ಟ ಧರ್ಮಗಳಿಗೆ ಮಾತ್ರ ಸೀಮಿತವಾಗಿದ್ದು, ಕಗ್ಗವು ಎಲ್ಲಾ ಧರ್ಮದ ಸಾರವನ್ನು ಒಳಗೊಂಡಿರುವ ಮಾನವೀಯತಾ ಗ್ರಂಥವಾಗಿದೆ. ಉತ್ತಮ ಮನುಷ್ಯನನ್ನು ರೂಪಿಸುವ ಮೂಲಕ ಉತ್ತಮ ರಾಷ್ಟ್ರವನ್ನು ಕಟ್ಟುವ ನಿಟ್ಟಿನಲ್ಲಿ ಕಗ್ಗದಂತಹ ಕೃತಿಗಳು ಅತ್ಯವಶ್ಯವಾಗಿವೆ. ಡಿ.ವಿ.ಜಿ.ಯವರ ಸೃಜನಶೀಲ ಶಕ್ತಿಯನ್ನು ಕಗ್ಗದಲ್ಲಿ ಗುರುತಿಸಬಹುದಾಗಿದ್ದು, ಅಂತಹ ಮಹಾನ್ ಕಾವ್ಯ ಸೃಷ್ಟಿಯಾದ ಸಂದರ್ಭವನ್ನು ಸಾಂದರ್ಭಿಕವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಮುಂದಿನ ಸಾಧ್ಯತೆಗಳು

- 'ಮಂಕುತಿಮ್ಮನ ಕಗ್ಗ' ಕುರಿತು ಈಗಾಗಲೇ ಬಂದಿರುವ ಎಲ್ಲಾ ವಿಮರ್ಶಾ ಕೃತಿಗಳನ್ನು ಅಧ್ಯಯನ ಮಾಡಲು ಅವಕಾಶವಿರುತ್ತದೆ.
- 'ಮಂಕುತಿಮ್ಮನ ಕಗ್ಗ'ಕ್ಕೆ ಸಂಬಂಧಿಸಿದಂತೆ, ಕೆಲವು ಅನುವಾದ ಕೃತಿಗಳು ಮತ್ತು ವಿಮರ್ಶೆಗಳು ಈಗಾಗಲೇ ಪ್ರಕಟವಾಗಿದ್ದು ಅಂತಹ ಪ್ರಕಟಿತ ಬರಹಗಳನ್ನು ಅಧ್ಯಯನ ಮಾಡಬಹುದು.
- 'ಮಂಕುತಿಮ್ಮನ ಕಗ್ಗ' ಮತ್ತು ಭಗವದ್ಗೀತೆಯನ್ನು ಕುರಿತು ತೌಲನಿಕ ಅಧ್ಯಯನ ಮಾಡಬಹುದು. ಈಗಾಗಲೇ ಈ ರೀತಿಯ ಪ್ರಯತ್ನ ನಡೆದಿರುವುದಾದರೂ, ಇದಕ್ಕಿಂತ ಭಿನ್ನವಾದ ಅಧ್ಯಯನಕ್ಕೆ ಅವಕಾಶವಿರುತ್ತದೆ.
- 'ಮಂಕುತಿಮ್ಮನ ಕಗ್ಗ'ದಲ್ಲಿ ಬಳಕೆಯಾಗಿರುವ ಪ್ರತಿಮೆಗಳು, ನಿದರ್ಶನಗಳು, ಅಲಂಕಾರಗಳು, ವಾಚ್ಯ ಮತ್ತು ಲಕ್ಷಣಾರ್ಥ ಮುಂತಾದುವುಗಳನ್ನು ವಿಶೇಷವಾಗಿ ಅಧ್ಯಯನ ಮಾಡಲು ಸಾಧ್ಯವಿರುತ್ತದೆ.
- ಆಧುನಿಕ ಜೀವನ ಪದ್ಧತಿಯಲ್ಲಿ ಕಗ್ಗದಂತಹ ಕೃತಿಗಳ ಮೂಲಕ ಮನುಷ್ಯರಲ್ಲಿ ಉತ್ತಮ ವ್ಯಕ್ತಿತ್ವವನ್ನು ಬೆಳೆಸುವ ಕುರಿತು ಅಧ್ಯಯನ ಮಾಡಬಹುದಾಗಿದೆ.
- 'ಮಂಕುತಿಮ್ಮನ ಕಗ್ಗ'ವನ್ನು ಅನೇಕ ವಿದ್ವಾಂಸರುಗಳು ಉಪನ್ಯಾಸಗಳನ್ನು ನೀಡುತ್ತಿದ್ದು, ಕೆಲವೊಂದು ಸಂಸ್ಥೆಗಳು ಪ್ರತಿವರ್ಷವೂ ಕಗ್ಗ ಕುರಿತಂತೆ ಕತೆ, ಕವನ ಮತ್ತು ವಿಮರ್ಶೆ ಸ್ಪರ್ಧೆಗಳನ್ನು ನಡೆಸುತ್ತಿದ್ದು, ಅಂತಹ ಸಾಹಿತ್ಯವನ್ನು ಹಾಗೂ ಉಪನ್ಯಾಸಗಳು ಅನುಸಂಧಾನವಾಗುವಿಕೆಯನ್ನು ಅಧ್ಯಯನ ಮಾಡಲು ಅವಕಾಶವಿರುತ್ತದೆ.

[illegible]

ಅನುಬಂಧ–1
ಡಾ॥ ಡಿ.ವಿ. ಗುಂಡಪ್ಪನವರ ಮೊಮ್ಮಗ ಶ್ರೀ. ನಟರಾಜನ್ ಅವರೊಂದಿಗಿನ ಸಂದರ್ಶನ

ಪ್ರಶ್ನೋತ್ತರ

1) ಡಾ॥ ಡಿ.ವಿ. ಗುಂಡಪ್ಪನವರು ಹುಟ್ಟಿದ್ದು, ಬೆಳೆದದ್ದು ಎಲ್ಲಿ?

ಉತ್ತರ :– ಡಾ॥ ಡಿ.ವಿ. ಗುಂಡಪ್ಪನವರು 1887 ರಲ್ಲಿ ಮುಳಬಾಗಿಲಿನಲ್ಲಿ ಜನನ. ಇವರ ತಂದೆ ವೆಂಕಟರಮಣಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರು ಮಧ್ಯಮ ವರ್ಗದ ಕುಟುಂಬ. ಇವರು 8 ಜನ ಮಕ್ಕಳಲ್ಲಿ ಮೊದಲನೇಯ ಗಂಡು ಮಗ, ಲಕ್ಷ್ಮೀದೇವಮ್ಮನವರ ನಂತರ ಡಾ॥ ಡಿ.ವಿ. ಗುಂಡಪ್ಪನವರ ಜನನ.

2) ಡಿ.ವಿ.ಜಿ ಯವರ ವೈವಾಹಿತ ಜೀವನದ ಬಗ್ಗೆ ಅನೇಕರಿಗೆ ತಿಳಿದಿಲ್ಲ, ಇದರ ಬಗ್ಗೆ ವಿವರಿಸಿ.

ಉತ್ತರ:– ಡಿ.ವಿ.ಜಿ ಯವರ ಹೆಂಡತಿ ಬಾಗೀರಥಿ, ಕೊಯಮತ್ತೂರಿನವರು. ಕೋರಮಂಗಲದ ಗುಂಡಪ್ಪ ನವರ ಮಗಳು ಇವರು ದೀಪಕ್ಕೆ ಸೀರೆ ತಾಗಿ ಬೆಂಕಿ ಆಕಸ್ಮಿಕದಲ್ಲಿ ಅತಿ ಚಿಕ್ಕವಯಸ್ಸಿನಲ್ಲೇ ತೀರಿಕೊಂಡರು. ಡಿ.ವಿ.ಜಿ ದಂಪತಿಗಳಿಗೆ ಏಳು ಜನ ಮಕ್ಕಳು ಅವರಲ್ಲಿ ಮೂರು ಜನ ಮಾತ್ರ ಉಳಿದುಕೊಂಡರು ಮೊದಲನೇ ಮಗ ಬಿ.ಜಿ.ಎಲ್ ಸ್ವಾಮಿ 2) ಲಕ್ಷ್ಮೀ ನಾರಾಯಣಸ್ವಾಮಿ 3) ಮೀನಾಕ್ಷಿ ಯವರು.

3) ಇವರು ಎಷ್ಟು ಕೃತಿಗಳನ್ನು ಬರೆದಿದ್ದಾರೆ? ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಯಾವ ಕೃತಿಗೆ ಲಭಿಸಿದೆ?

ಉತ್ತರ:– ಡಿ.ವಿ.ಜಿ ಯವರು ಸುಮಾರು 200ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಇವರ 'ಗೀತಾ ತಾತ್ಪರ್ಯ' ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮೈಸೂರು ವಿ.ವಿ ಯಿಂದ 1962 ರಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗಿದೆ. ಇವರೊಂದಿಗೆ ಗೌರವ ಡಾಕ್ಟರೇಟ್ ಪದವಿ ಪಡೆದ ಇನ್ನಿಬ್ಬರು ಪ್ರಮುಖರು 1) ಸಿ.ಎನ್.ಆರ್.ರಾವ್ 2) ಜಾನ್ ಗಾಲ್ ಬ್ರೆತ್– ಭಾರತದಲ್ಲಿ ಅಮೇರಿಕಾದ ರಾಯಭಾರಿ ಆಗಿದ್ದವರು.

4) 'ಮಂಕುತಿಮ್ಮನ ಕಗ್ಗ' ಎಂದೇ ಹೆಸರಿಡಲು ಕಾರಣವೇನು?

ಉತ್ತರ:– ಡಿ.ವಿ.ಜಿ ಯವರು ಮೊದಲು ನೂರು ಅಥವಾ ನೂರಿಪ್ಪತ್ತು ಮುಕ್ತಕಗಳನ್ನು ಬರೆದಿದ್ದರೇನೋ, ಆಗ ಅವರಿಗೆ ಅಪ್ತರಾಗಿದ್ದಂತಹ ಮಾನಸಿಕ ಗುರುವಿನಂತಿದ್ದ ಎ.ಆರ್. ಕೃಷ್ಣಶಾಸ್ತ್ರಿಗಳೊಂದಿಗೆ ಚರ್ಚೆಮಾಡಿರಬಹುದು ಅವರು ಈ ಹೆಸರನ್ನು ಸೂಚಿಸಿರಬಹುದು. 'ಮಂಕುತಿಮ್ಮ' ಎನ್ನುವುದು ಅವರ ಕಾವ್ಯನಾಮ. 'ಕಗ್ಗ' ಎಂದರೆ 'ಕಂತೆ' ಎಂದರ್ಥ. ಹಾಗಾಗಿ ಮಂಕುತಿಮ್ಮನ ಕಗ್ಗ ಎಂದು ಹೆಸರಿಟ್ಟಿದ್ದಾರೆ. ಇದರಲ್ಲಿ ದ್ವಿತೀಯ ಪ್ರಾಸ ಇದೆ ಮತ್ತು ಲಘು–ಗುರು ಗಳ ಬಳಕೆ ಮಾಡಿ ಛಂದಸ್ಸನ್ನು ಅನ್ವಯಿಸಿದ್ದಾರೆ

5) ಅವರ ಮನೆ ಮತ್ತು ಸ್ಥಳದ ಬಗ್ಗೆ ಮಾಹಿತಿ ನೀಡಿ.

ಉತ್ತರ:– ಬೆಂಗಳೂರಿನ ನಾಗಸಂದ್ರದ ರೋಡಿನಲ್ಲಿ ಅವರ ಮನೆಯಿತ್ತು ಅದೇ ಈಗ ಡಿ.ವಿ.ಜಿ. ರೋಡ್ ಎಂದು ಆಗಿದೆ. ಅವರ ಮನೆ ಈಗ ಇಲ್ಲ ಯಾರೋ ಕೊಂಡುಕೊಂಡಿದ್ದರು ಅದು ಕೂಡ ಇಲ್ಲ ಈಗ.

ಅನುಬಂಧ–2
ಕಗ್ಗ ರಸಧಾರೆ ಕರ್ತೃ ರವಿತಿರುಮಲೈ ಅವರೊಂದಿಗಿನ ಸಂದರ್ಶನ.

ಪ್ರಶ್ನೋತ್ತರ

1) ಮಂಕುತಿಮ್ಮನ ಕಗ್ಗ ಇಂದಿನ ಬದಲಾದ ಜೀವನ ಶೈಲಿಗೆ ಹೇಗೆ ಪ್ರಸ್ತುತವಾಗುತ್ತದೆ?

ಉತ್ತರ:– ಮಂಕುತಿಮ್ಮನ ಕಗ್ಗ 10 ಸಾವಿರ ವರ್ಷದ ಹಿಂದಕ್ಕೂ ಪ್ರಸ್ತುತ, ಈಗಲೂ ಪ್ರಸ್ತುತ, ಮುಂದಕ್ಕೂ ಪ್ರಸ್ತುತವಾಗಿದೆ. ಬದುಕಿನ ಶೈಲಿ ಬದಲಾಗಬಹುದು ಆದರೆ ಬದುಕಿನ ಮೌಲ್ಯಗಳು ಬದಲಾಗುವುದಿಲ್ಲ ಹಾಗಾಗಿ ಎಲ್ಲಾ ಕಾಲಕ್ಕೂ ಕಗ್ಗ ಪ್ರಸ್ತುತವಾಗಿರುತ್ತದೆ.

2) ಕಗ್ಗವನ್ನು ಆಧುನಿಕ ಕನ್ನಡದ ಭಗವದ್ಗೀತೆ ಎನ್ನಲು ಕಾರಣವೇನು?

ಉತ್ತರ:– ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿ. ಯವರು ಭಗವದ್ಗೀತೆಯ ವೇದಾಂತ ಸಾರವನ್ನು ಅದರಲ್ಲಿರುವ ಅಂಶಗಳೆಲ್ಲವನ್ನೂ ಮಂಕುತಿಮ್ಮನ ಕಗ್ಗದಲ್ಲಿ ಅಳವಡಿಸಿದ್ದಾರೆ. ಹಾಗಾಗಿ ಇದನ್ನು ಆಧುನಿಕ ಕನ್ನಡದ ಭಗವದ್ಗೀತೆ ಎನ್ನುತ್ತಾರೆ.

3) ಮಂಕುತಿಮ್ಮನ ಕಗ್ಗ ಆಧ್ಯಾತ್ಮ ಮಾತ್ರವನ್ನೆ ಹೇಳುತ್ತದೆಯೇ?

ಉತ್ತರ:– ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿ. ಯವರು ಆಧ್ಯಾತ್ಮದ ಬಗ್ಗೆ ಮಾತ್ರ ಹೇಳಿಲ್ಲ. ಎಲ್ಲಾ ವಿಷಯಗಳು ಇವೆ. ಜಗತ್ತಿನ ಎಲ್ಲಾ ವ್ಯವಹಾರಗಳಿಗೆ ಮೆಟ್ಟಿಲುಗಳು ಬೇಕು. ವಿಶ್ವದಲ್ಲಿ ಅನಭವವೇ ಪಾರಮಾರ್ಥಿಕ ಅನುಭವ. ಅಧ್ಯಾತ್ಮ ಬೇರೆ ಅಲ್ಲ ಜಗತ್ತು ಬೇರೆ ಅಲ್ಲ. ಆದ್ದರಿಂದ ಜಗತ್ತಿನ ಎಲ್ಲಾ ಅನುಭವಗಳ ಕಂತೆ ಈ ಕಗ್ಗ.

4) ಮಂಕುತಿಮ್ಮನ ಕಗ್ಗ ರಚನೆಗೆ ಡಿ.ವಿ.ಜಿ ಯವರಿಗೆ ಪ್ರೇರಣೆ ಏನು?

ಉತ್ತರ:– ಡಿ.ವಿ. ಗುಂಡಪ್ಪನವರು ಕಗ್ಗ ರಚನೆಗೆ ತೊಡಗಲು ಕಾರಣ ಅವರ ಅನುಭವಕ್ಕೆ ಬಂದಂತಹ ವಿಚಾರಗಳು ಮತ್ತು ಲೋಕ ಕಲ್ಯಾಣಕ್ಕಾಗಿ, ಜ್ಞಾನ ಸಂಪಾದನೆಗಾಗಿ ತಮ್ಮ ಪಾಡಿಗೆ ತಾವು ಬರೆದರು. ಆದರೂ ಇಂದು ಈ ಮುಕ್ತಕಗಳು ಎಲ್ಲಾ ಸಂದರ್ಭಗಳಲ್ಲಿಯೂ ಅನ್ವಯವಾಗುತ್ತಿವೆ.

5) ಕಗ್ಗದ ಬಗೆಗಿನ ತಾತ್ಪರ್ಯ ಕೃತಿಗಳು ಬಂದಿವೆಯೆ?

ಉತ್ತರ:– ಮಂಕುತಿಮ್ಮನ ಕಗ್ಗದ ಬಗೆಗೆ ಅನೇಕ ಕೃತಿಗಳು ಬಂದಿವೆ. ಆದರೆ ಅದರ ಬಗೆಗಿನ ತಾತ್ಪರ್ಯ ಕುರಿತಂತೆ ನಾನು ಸೇರಿದಂತೆ ನಾಲ್ಕು ಮಂದಿ ಮಾತ್ರವೆ ಕೃತಿ ರಚನೆ ಮಾಡಿದ್ದೇವೆ.

1) ಶ್ರೀಕಾಂತ್ – ಮಂಕುತಿಮ್ಮನ ಕಗ್ಗ ತಾತ್ಪರ್ಯ
2) ರವಿ ತಿರುಮಲೈ – ಕಗ್ಗರಸಧಾರೆ – ನಾಲ್ಕು ಸಂಪುಟಗಳು
3) ಡಿ.ಆರ್. ವೆಂಕಟರಾಮನ್ – ಕಗ್ಗಕ್ಕೊಂದು ಕೈಪಿಡಿ
4) ಹೆಚ್.ಎಸ್. ಲಕ್ಷ್ಮೀನಾರಾಯಣಭಟ್ಟರು – ಗುಂಡೋಪನಿಷತ್

ಗ್ರಂಥಋಣ

ಕೃತಿಗಳು

1. ಡಿ.ವಿ.ಗುಂಡಪ್ಪ, ಮಂಕುತಿಮ್ಮನ ಕಗ್ಗ ಮೂಲ ಕೃತಿ
2. ರವಿತಿರುಮಲೈ, ಕಗ್ಗರಸಧಾರೆ, ಪ್ರಕಾಶನ– ವರ್ಷ– ೨೦೧೩
3. ಶ್ರೀಕಾಂತ್, ಡಿ.ವಿ.ಜಿ. ಯವರ ಮಂಕುತಿಮ್ಮನ ಕಗ್ಗ ತಾತ್ಪರ್ಯ, ವರ್ಷ–2012
4. ಡಿ.ಆರ್. ವೆಂಕಟರಾಮನ್ – ಕಗ್ಗಕ್ಕೊಂದು ಕೈಪಿಡಿ
5. ಹೆಚ್.ಎಸ್. ಲಕ್ಷ್ಮೀನಾರಾಯಣಭಟ್ಟರು – ಗುಂಡೋಪನಿಷತ್


ಧ್ವನಿ ಸುರುಳಿಗಳು

1. ಅಶೋಕ್ ಕುಮಾರ್ ಬಿ.ಎನ್. ಆಯ್ದ ಪದ್ಯಗಳ ವಾಚನ ಮತ್ತು ವ್ಯಾಖ್ಯಾನ ಸರಣಿ
2. ಗಣೇಶ್ ಶತಾವಧಾನಿ, ಧ್ವನಿಸುರುಳಿ
3. ಲಕ್ಷ್ಮೀನಾರಾಯಣ ಭಟ್ ಹೆಚ್.ಎಸ್. ಧ್ವನಿ ಸುರುಳಿ
4. ಸ್ವಾಮಿ ಬ್ರಹ್ಮಾನಂದ, ಧ್ವನಿ ಸುರುಳಿ ಪ್ರವಚನ ಮತ್ತು ನಿತ್ಯ ಪಾರಾಯಣ

ನಿಘಂಟುಗಳು

1. ಕಿಟ್ಟೆಲ್ ಕನ್ನಡ – ಇಂಗ್ಲಿಷ್ ಪದಕೋಶ – ನಾಲ್ಕು ಸಂಪುಟಗಳು
2. ಕನ್ನಡ – ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು
3. ಸಟೀಕಿನ ಶಬ್ದಮಂಜರಿ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ
4. ವೆಂಕಟಸುಬ್ಬಯ್ಯ ಜಿ., ಇಗೋ ಕನ್ನಡ– ಭಾಗ–1, 2
5. ಬಸವಾರಾಧ್ಯ. ಎನ್., ಹಳಗನ್ನಡ ಶಬ್ದಾರ್ಥ ಕೋಶ, ಡಿ.ವಿ.ಕೆ. ಮೂರ್ತಿ ಪ್ರಕಾಶನ
6. ಹಳಗನ್ನಡ ಪದಸಂಪದ, ನಾರಾಯಣ ಪಿ.ವಿ., ಕನ್ನಡ ಸಾಹಿತ್ಯ ಪರಿಷತ್ತು

ಛಾಯಾಚಿತ್ರಗಳು



ಡಿ.ವಿ.ಜಿ ಅವರ ವಿಹಾರದ ಸ್ಥಳ
ಅಶ್ವತ್ಥ ವೃಕ್ಷದ ಕೆಳಗೆ ಕುಳಿತಿರುವುದು



ಡಿ.ವಿ.ಜಿ ಅವರ ಮಗಳ ಮಗ (ಮೊಮ್ಮಗ)
ನಟರಾಜನ್ ಅವರೊಂದಿಗಿನ ಸಂದರ್ಶನ



ಕಗ್ಗ ರಸಧಾರೆಯ ಕತೃ ರವಿತಿರುಮಲೈ ಅವರೊಂದಿಗಿನ ಸಂದರ್ಶನ













ಡಿ.ವಿ.ಜಿ ಅವರಿಗೆ ಪತ್ರಿಕೋದ್ಯಮಿಗಳ ಸಂಘದಿಂದ ಸನ್ಮಾನ



